ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಮೈಸೂರು ಮಿತ್ರ 46 ಅತ್ಯುತ್ತಮ ಪತ್ರಿಕೋದ್ಯಮ

ಸಂಪುಟ: 46 | ಸಂಚಿಕೆ: 194 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಸರಗೂರು ಬಳಿ ಹುಲಿ ದಾಳಿಗೆ

ಮತ್ತೊಬ್ಬ ರೈತ ಬಲಿ

ಸರಗೂರು ತಾಲೂಕು ಕೂಡಗಿ ಗ್ರಾಮದ ಹೊಲದಲ್ಲಿ ಜಾನುವಾರು ಮೇಯಿಸುತ್ತಿದ್ದ ದೊಡ್ಡನಿಂಗಯ್ಯ ಅವರ ಮೇಲೆ ಹುಲಿ ದಾಳಿ; ಆತಂಕದ ಪರಿಸ್ಥಿತಿ

ಮೃತದೇಹ ತೆರವಿಗೆ ಗ್ರಾಮಸ್ಥರ ವಿರೋಧ

ಸರಗೂರು, ಅ.31(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿಗಳ ಉಪಟಳ ಮುಂದುವರೆದಿದ್ದು, ಇಂದೂ ಸಹ ರೈತರೊಬ್ಬರು ಬಲಿಯಾಗಿದ್ದಾರೆ. ಹುಲಿ ಸೆರೆ ಕಾರ್ಯಾಚರಣೆ ನಡುವೆಯೇ ಕಳೆದ 15 ದಿನದಲ್ಲಿ ಮೂವರು ರೈತರ ಮೇಲೆ ಹುಲಿ ದಾಳಿ ನಡೆಸಿದ್ದು, ಅವರಲ್ಲಿ ಇಬ್ಬರು ಜೀವ ಚೆಲ್ಲಿದ್ದಾರೆ.

ಶುಕ್ರವಾರ ಕಾಡಂಚಿನ ಹೊಲದಲ್ಲಿ ಜಾನುವಾರು ಮೇಯಿಸುತ್ತಿದ್ದ ರೈತನ ಮೇಲೆ ಹುಲಿ ದಾಳಿ ನಡೆಸಿದೆ. ಇದರೊಂದಿಗೆ ಕೇವಲ ಐದು ದಿನದ ಅಂತರದಲ್ಲೇ ಹುಲಿ ದಾಳಿಗೆ



ದೊಡ್ಡನಿಂಗಯ್ಯ

ಇಬ್ಬರು ಬಲಿಯಾದಂತಾಗಿದೆ. ಸರಗೂರು ತಾಲೂಕಿನ ಕೂಡಗಿ ಗ್ರಾಮದ ದೊಡ್ಡನಿಂಗಯ್ಯ(65) ■6ನೇ ಪುಟಕ್ಕೆ

15 ದಿನದಲ್ಲಿ ಮೂರನೇ ಪ್ರಕರಣ

ಸರಗೂರು ತಾಲೂಕಿನಲ್ಲಿ ಕಳೆದ 15 ದಿನದಲ್ಲಿ ಹುಲಿ ದಾಳಿ ನಡೆಸಿದ ಮೂರನೇ ಪ್ರಕರಣ ಇದಾಗಿದೆ. ಅ.16ರಂದು ಬಡಗಲಪುರ ಗ್ರಾಮದ ಮಹದೇವೇಗೌಡ(48) ಎಂಬುವರ ಮೇಲೆ ಹುಲಿ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತ್ತು. ಇದರಿಂದ ಅವರ ಕಣ್ಣಿಗೆ ಹಾನಿಯಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅ.26 ರಂದು ಮುಳ್ಳೂರು ಸಮೀಪದ ಬೆಣ್ಣೆಗೆರೆ ಬಳಿ ರಾಜಶೇಖರ್ ಎಂಬುವರ ಮೇಲೆ ದಾಳಿ ನಡೆಸಿ ಕೊಂದು ಹಾಕಿತ್ತು ಇಂದು 15 ಕಿ.ಮಿ ದೂರದ ಕೂಡಗಿ ಬಳಿ ದೊಡ್ಡನಿಂಗಯ್ಯ ಎಂಬುವರ ಮೇಲೆ ದಾಳಿ ನಡೆಸಿ, ಬಲಿ ಪಡೆದಿದೆ.

ಸಂತಾನಕ್ಕೆ ನೈಸರ್ಗಿಕ ಆಸರೆ ಅರಸಿ ಬಂದ ಹುಲಿಗಳ ಆಕ್ರೋಶಕ್ಕೆ ಅಮಾಯಕರ ಬಲಿ

ಅರಣ್ಯ ಇಲಾಖೆ ಎಚ್ಚೆತ್ತುಕೊಳ್ಳದಿದ್ದರೆ ಸಾವಿನ ಸರಣಿ ಮುಂದುವರಿಕೆ ಆತಂಕ

ಮೈಸೂರು, ಅ.31(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಹುಲಿಗಳಿಗೆ ಉಳಿಗಾಲವಿಲ್ಲದಂತಾಗಿದೆ. ನೈಸರ್ಗಿಕ ಆಸರೆ ಆಶ್ರಯಿಸಿ ಬರುತ್ತಿರುವ ಹುಲಿಗಳನ್ನು ರಕ್ಷಿಸುವಂತಹ ಕಾರ್ಯ ಅರಣ್ಯ ಇಲಾಖೆಯಿಂದ ಆಗುತ್ತಿಲ್ಲವೇ?


ಸಂತಾನೋತ್ಪತ್ತಿಗಾಗಿ ಸುರಕ್ಷತೆ ದೃಷ್ಟಿಯಿಂದ ದಟ್ಟ ಅರಣ್ಯ ತೊರೆದು ಕಾಡಂಚಿನಲ್ಲಿ ನೆಲೆ ಕಂಡುಕೊಳ್ಳುತ್ತಿರುವ ಹುಲಿಗಳಿಗೆ ಈಗ ಸಂಚಕಾರ ಬಂದೊದಗಿದೆ. ಗ್ರಾಮಸ್ಥರಿಗೆ ಈ ಮಹತ್ವದ ವಿಚಾರ ಮನವರಿಕೆ ಮಾಡಿಕೊಡುವಲ್ಲಿ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ದೂರಲಾಗುತ್ತಿದೆ. ನೈಜ ಸಂಗತಿ ಅರಿಯದ ರೈತಾಪಿ ವರ್ಗ ಸಹಜವಾಗಿಯೇ ಜಾನುವಾರುಗಳನ್ನು ಕಾಡಂಚಿನಲ್ಲಿ ಮೇಯಿಸಲು ಹೋದಾಗ ಆಪತ್ತಿಗೀಡಾಗುತ್ತಿದ್ದಾರೆ. ವಾಸ್ತವ ಸಂಗತಿ ಅರಣ್ಯ ಇಲಾಖೆಯೇ ಅರಿಯದಂತಾಗಿದೆ. ಇತ್ತೀಚಿನ ಬೆಳವಣಿಗೆಗಳನ್ನು ಅವಲೋಕಿಸಿದರೆ ಇದು ಸ್ಪಷ್ಟವಾಗುತ್ತಿದೆ. ದಟ್ಟ ಅರಣ್ಯದಲ್ಲಿ ಮರಿಗಳಿಗೆ ಜನ್ಮ ನೀಡಿದರೆ ಅದರ ರಕ್ಷಣೆ ಕಷ್ಟಸಾಧ್ಯ ಎಂದು ಹೆಣ್ಣು ಹುಲಿಗಳು ಕಾಡಂಚಿನ ■6ನೇ ಪುಟಕ್ಕೆ

ಭಾಷಾಭಿಮಾನದ ಕೊರತೆಯಿಂದ ಕನ್ನಡ ಸೊರಗುತ್ತಿದೆ; ಯಾಂತ್ರಿಕವಾಗಿಯಷ್ಟೇ ರಾಜ್ಯೋತ್ಸವ ಆಚರಣೆಯಾಗುತ್ತಿದೆ!

ನಾಡಿನ ಹಿರಿಯ ಕವಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ವಿಷಾದದ ನುಡಿ

ಮೈಸೂರು, ಅ.31(ಎಸ್‌ಬಿಡಿ)– 'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ, ಹೊರನಾಡಿಯ ಹೊರೆಯಿಂದ ಕುಸಿದು ಕುಗ್ಗಿ...' ಸಾಲುಗಳ ಮೂಲಕ ಕನ್ನಡ ಭಾಷೆಯನ್ನು ರಕ್ಷಿಸುವ ಅನಿವಾರ್ಯತೆಯನ್ನು ಶ್ರೇಷ್ಠಕವಿ ಕುವೆಂಪು ಒತ್ತಿ ಹೇಳಿದ್ದರು. ಆದರೆ ಭಾಷಾ ಪ್ರೇಮದ ಕೊರತೆಯಿಂದ ಕನ್ನಡ ಅಳಿವಿನಂಚಿನಲ್ಲಿದೆ. ಬರೀ ಯಾಂತ್ರಿಕವಾಗಿ ಕನ್ನಡ ರಾಜ್ಯೋತ್ಸವ ವನ್ನು ಆಚರಿಸುತ್ತಿದ್ದೇವೆ.

ಹೀಗೆ ನಾಡಿನ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರು ಸಾವಿರಾರು ವರ್ಷಗಳ ಇತಿಹಾಸ, ಪರಂಪರೆಯುಳ್ಳ ಕನ್ನಡ ನುಡಿಗೆ ಬಂದೊದಗಿರುವ ಆಪತ್ತಿನ ಬಗ್ಗೆ ತೀವ್ರ ವಿಷಾಧ ವ್ಯಕ್ತಪಡಿಸಿದ್ದಾರೆ. ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'



ನೊಂದಿಗೆ ಮಾತನಾಡಿ, ಈಗಲಾದರೂ ಜಾಗೃತರಾಗಿ ಕನ್ನಡ ಡಿಂಡಿಮ... ಭಾರಿಸಬೇಕೆಂದು ಮನವಿ ಮಾಡಿದ್ದಾರೆ.

ಪ್ರತಿವರ್ಷ ಕನ್ನಡ ರಾಜ್ಯೋತ್ಸವವನ್ನು ಯಾಂತ್ರಿಕವಾಗಿ ಆಚರಿಸುತ್ತಿದ್ದೇವೆ. ಕನ್ನಡದ ಬಗ್ಗೆ ಇರಬೇಕಾದಷ್ಟು ಪ್ರೀತಿ–ಅಭಿಮಾನ ಇಲ್ಲವಾಗಿದೆ. ಹೊರಗಿನವರೆಲ್ಲಾ ಇಲ್ಲಿಗೆ ಬಂದು ಕನ್ನಡವನ್ನು ಕಲಿಯದೇ ವ್ಯವಹಾರ ನಡೆಸಿಕೊಂಡು ಹೋಗುತ್ತಿದ್ದಾರೆ. ನಾವು ಅವರ ಭಾಷೆಯನ್ನು ಕಲಿಯುತ್ತೇವೆಯೇ ಹೊರತು, ಅವರಿಗೆ ನಮ್ಮ ಭಾಷೆ ಕಲಿಸುವ ಪ್ರಯತ್ನವನ್ನೂ ಮಾಡುತ್ತಿಲ್ಲ. ಕನ್ನಡಿಗರಿಗೆ ಕನ್ನಡದ ಬಗ್ಗೆ ಅಭಿಮಾನ ಸಾಲದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಬೇರೆ ರಾಜ್ಯಗಳಲ್ಲಿ ರಾಜಕೀಯ ವಿದ್ಯಮಾನಗಳು ಏನೇ ಇದ್ದರೂ ತಮ್ಮ ಭಾಷೆಯ ಪ್ರಶ್ನೆ ಎದುರಾದಾಗ ಎಲ್ಲರೂ ಒಗ್ಗಟ್ಟಾಗುತ್ತಾರೆ. ರಾಜಕೀಯ ಬದಿಗೆ ಸರಿಸಿ, ಭಾಷೆಯನ್ನು ಎತ್ತಿ ಹಿಡಿಯುತ್ತಾರೆ. ಆ ಮೂಲಕ ತಮ್ಮ ಭಾಷೆಯ ಅಸ್ಮಿತೆಗೆ ಕಿಂಚಿತ್ತೂ ಘಾಸಿಯಾಗದಂತೆ ಕಾಯ್ದುಕೊಳ್ಳುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಅಂತಹ ಪರಿಸ್ಥಿತಿ ■6ನೇ ಪುಟಕ್ಕೆ

ಸಿಎಂ ಆಪ್ತ ಸಚಿವರು, ಶಾಸಕರಿಗೆ ಮಾಜಿ ಸಚಿವ ರಾಜಣ್ಣ ನ.8ಕ್ಕೆ ಔತಣ ಕೂಟ

● ಸಿದ್ದರಾಮಯ್ಯರಿಗೂ ಆಹ್ವಾನ ನೀಡಲು ನಿರ್ಧಾರ ● ನಾಯಕತ್ವ ಬದಲಾವಣೆ ಮಾತುಕತೆ ನಡುವೆ ಸಿಎಂ ಬೆನ್ನಿಗೆ ನಿಲ್ಲುವ ಸಂದೇಶ ರವಾನೆ

ಬೆಂಗಳೂರು, ಅ.31(ಕೆಎಂಶಿ)– ನವೆಂಬರ್ ಕ್ರಾಂತಿಯ ಹೇಳಿಕೆ ನೀಡಿದ್ದ ಮಾಜಿ ಸಚಿವ ಕೆ.ಎನ್.ರಾಜಣ್ಣ ಬರುವ ತಿಂಗಳ 8ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರು, ಶಾಸಕರಿಗೆ ಔತಣಕೂಟ ಏರ್ಪಡಿಸಿದ್ದಾರೆ.



ಕೆ.ಎನ್.ರಾಜಣ್ಣ

ಸಿದ್ದರಾಮಯ್ಯ ಕೈಬಲಪಡಿಸುವ ಮತ್ತು ನಿಮ್ಮ ಜೊತೆ ನಾವಿದ್ದೇವೆ ಎಂಬ ಶಕ್ತಿ ಪ್ರದರ್ಶನಕ್ಕೆ ಈ ಔತಣಕೂಟ ನಡೆಯಲಿದೆ. ರಾಜಣ್ಣ ತಮ್ಮ ನಿವಾಸದಲ್ಲಿ ಔತಣಕೂಟ ಏರ್ಪಡಿಸಿದ್ದು, ಸಿದ್ದರಾಮಯ್ಯ ಅವರಿಗೂ ಆಹ್ವಾನ ನೀಡಲಿದ್ದಾರೆ.

ನವೆಂಬರ್ 20ಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಆಗಲಿದ್ದು, ಮುಖ್ಯಮಂತ್ರಿ ಗಾದಿಯಲ್ಲಿ ಕೂರಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಮಟ್ಟದಲ್ಲಿ ಎಲ್ಲಾ ತಂತ್ರಗಾರಿಕೆ ನಡೆಸಿದ್ದಾರೆ. ಶಿವಕುಮಾರ್ ತಂತ್ರಗಾರಿಕೆ ಮತ್ತು ಪ್ರಮಾಣವಚನಕ್ಕೆ ಸಮಯ ನಿಗದಿ ಮಾಡಿರುವ ಮಾಹಿತಿ ಲಭ್ಯವಾಗುತ್ತಿದ್ದಂತೆ ಸಿದ್ದರಾಮಯ್ಯ ಬೆಂಬಲಿಗರು ರಾಜಣ್ಣ ಮೂಲಕ ಈ ■6ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಬಿಡುವು

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2–11–2025ರ ಭಾನುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಅಲೆಮಾರಿ ಸಮುದಾಯಕ್ಕೆ ಶೇ.1ರಷ್ಟು ಮೀಸಲಾತಿ ಕಲ್ಪಿಸುವ ಸಂಬಂಧ ಪರಿಶೀಲನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಅಲೆಮಾರಿ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳ ನಿಯೋಗ ಇಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿಯನ್ನು ಭೇಟಿ ಮಾಡಿ, ಒಳ ಮೀಸಲಾತಿ ಕೋರಿ ಮನವಿ ಸಲ್ಲಿಸಿತು.

ಬೆಂಗಳೂರು, ಅ.31(ಕೆಎಂಶಿ)– ಅಲೆಮಾರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸರ್ಕಾರ ಬದ್ಧವಾಗಿದ್ದು ಶೇಕಡ ಒಂದರಷ್ಟು ಮೀಸಲಾತಿ ಯಾವ ರೀತಿಯಲ್ಲಿ ಕಲ್ಪಿಸಬಹುದೆಂಬ ಕುರಿತು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಒಳ ಮೀಸಲಾತಿ ಕುರಿತು ಅಲೆಮಾರಿ ಒಕ್ಕೂಟದ ಪದಾಧಿಕಾರಿಗಳ ನಿಯೋಗದ ಮನವಿ ಸ್ವೀಕರಿಸಿದ ನಂತರ ಮಾತನಾಡಿದ ಮುಖ್ಯಮಂತ್ರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸುಧಾರಣೆಗೆ ಎಸ್‌ಸಿಪಿ/ಟಿಎಸ್‌ಪಿ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ. ಪ್ರತಿಯೊಬ್ಬರಿಗೂ ಪರಿಹಾರ ಸಿಗಲಿ ಎನ್ನುವುದೇ ಸರ್ಕಾರದ ಉದ್ದೇಶ. ಯಾವುದೇ ಜಾತಿಯೊಳಗೆ ಇನ್ನೊಂದನ್ನು ಸೇರಿಸುವ, ಯಾವುದೇ ಸಮುದಾಯಕ್ಕೆ ಅನ್ಯಾಯ ಮಾಡುವ ಉದ್ದೇಶ ಇಲ್ಲ. ನಿಮ್ಮ ಬೇಡಿಕೆಗಳಿಗೂ ನ್ಯಾಯ ಒದಗಿಸಲಾಗುವುದು ಎಂದರು.

ಒಳಮೀಸಲಾತಿ ಕಲ್ಪಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಈಗ ಎದುರಾಗಿರುವ ಗೊಂದಲಗಳಿಗೆ ಆದ್ಯತೆ ಮೇರೆಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಶಿಫಾರಸ್ಸಿನಂತೆ ಅಲೆಮಾರಿ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸುವಲ್ಲಿ ಪ್ರತ್ಯೇಕ ಶೇಕಡ ಒಂದರಷ್ಟು ಒಳ ಮೀಸಲಾತಿ ಕಲ್ಪಿಸಲು ಆದ್ಯತೆ ನೀಡಬೇಕು. ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ರಚನೆ ಮಾಡಬೇಕು ಹಾಗೂ ಅಲೆಮಾರಿ ಸಮುದಾಯಗಳಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವಂತೆ ನಿಯೋಗ ಮನವಿ ಮಾಡಿದೆ.

ಏಕತೆಗಾಗಿ ಜಿಲ್ಲಾ ಪೋಲಿಸರ ಓಟ



ಜಿಲ್ಲಾ ಪೊಲೀಸರ ಏಕತಾ ಓಟಕ್ಕೆ ಎಸ್ಪಿ ವಿಷ್ಣುವರ್ಧನ್, ಅಡಿಷನಲ್ ಎಸ್ಪಿ ಮಲ್ಲಿಕ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಮೈಸೂರು, ಅ.31(ಆರ್‌ಕೆ)– ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ 150ನೇ ಜನ್ಮ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಏಕತಾ ದಿನದ ಸ್ಮರಣಾರ್ಥ ಮೈಸೂರು ಜಿಲ್ಲಾ ಪೊಲೀಸರು ಇಂದು ಬೆಳಗ್ಗೆ ಏಕತೆಗಾಗಿ ಓಟ (Run For Unity) ನಡೆಸಿದರು. ಮೈಸೂರಿನ ನಜರ್‌ಬಾದ್‌ನಲ್ಲಿರುವ ಎಸ್ಪಿ ಕಚೇರಿ ಆವರಣದಿಂದ ಆರಂಭವಾದ ಓಟಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ನಜರ್‌ಬಾದ್, ಮೈಸೂರು ಮೃಗಾಲಯ, ಲಲಿತಮಹಲ್ ರಸ್ತೆ, ಕಾರಂಜಿ ಕೆರೆ, ಹಾರ್ಸ್‌ಪಾರ್ಕ್, ಚಾಮುಂಡಿ ವಿಹಾರ ಕ್ರೀಡಾಂಗಣ ಮಾರ್ಗವಾಗಿ ಸಾಗಿದ ಓಟ ಮರಳಿ ಎಸ್ಪಿ ಕಛೇರಿಯಲ್ಲಿ ಅಂತ್ಯಗೊಂಡಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ನಾಗೇಶ್, ಸಿ. ಮಲ್ಲಿಕ್, ದಕ್ಷಿಣ ಗ್ರಾಮಾಂತರ ಉಪ–ವಿಭಾಗದ ಡಿವೈಎಸ್ಪಿ ಟಿ.ವಿ. ರಾಜಣ್ಣ, ಇನ್ಸ್‌ಪೆಕ್ಟರ್‌ಗಳಾದ ಶೇಖರ್, ಸತೀಶ್, ಶಿವನಂಜಶೆಟ್ಟಿ, ಡಿಸಿಆರ್‌ಇ ಜಿಲ್ಲಾ ಮಹಿಳಾ, ದಕ್ಷಿಣ ಗ್ರಾಮಾಂತರ, ಸೆನ್ ಪೋಲೀಸ್ ಠಾಣೆ ಸಿಬ್ಬಂದಿ ಏಕತಾ ಓಟದಲ್ಲಿ ಪಾಲ್ಗೊಂಡಿದ್ದರು.

ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು, ಅ. 31– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನ. 3 ರಿಂದ 8 ವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೃದಯ ಶಸ್ತ್ರಚಿಕಿತ್ಸಾ ತಜ್ಞವೈದ್ಯರಾದ ಡಾ. ಪಿ. ಜಯಕುಮಾರ್ ಅವರ ನೇತೃತ್ವದಲ್ಲಿ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇ.ಸಿ.ಜಿ., ಲಿಪಿಡ್ ಪ್ರೊಫೈಲ್, ಆರ್.ಬಿ.ಎಸ್., ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೃದಯದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ಅಭಿನಂದನೆ



ನಿವೃತ್ತಿಯಾದ ಮೈಸೂರಿನ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್ ಟಿ ಜವರೇಗೌಡ ಅವರನ್ನು ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಮತ್ತು ಇತರರು ಅಭಿನಂದಿಸಿದರು.

ನಿಧನ

ವೃಷಬೇಂದ್ರ ಸ್ವಾಮಿ




ಮೈಸೂರು, ಅ.31– ಮೈಸೂರಿನ ಸರಸ್ವತಿಪುರಂನ 14ನೇ ಮುಖ್ಯ ರಸ್ತೆಯ 5 ಕ್ರಾಸ್‌ನ ನಿವಾಸಿ ವೃಷಬೇಂದ್ರ ಸ್ವಾಮಿ(80) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ.1 (ಶನಿವಾರ) ಬೆಳಗ್ಗೆ 10.30ಕ್ಕೆ ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಆರ್.ಮಧುಕರ್ ಭಟ್



ಮೈಸೂರು, ಅ.31–ಮೈಸೂರಿನ ಗಾಂಧಿ ಚೌಕದಲ್ಲಿ ಮಧು ನಿವಾಸ ಹೋಟೆಲ್ ನಡೆಸುತ್ತಿದ್ದ ಉದ್ಯಮಿ ಎಂ.ಆರ್.ಮಧುಕರ್ ಭಟ್(71) ಅವರು ಶುಕ್ರವಾರ ಬೆಂಗಳೂರಿನಲ್ಲಿ ನಿಧನರಾದರು. ಇವರು 1950ರಿಂದ 2000ದವರೆಗೆ ಗಾಂಧಿ ಚೌಕದಲ್ಲಿ ಹೋಟೆಲ್ ಮಧುನಿವಾಸ್ ಮತ್ತು 1988ರಿಂದ 1999ರವರೆಗೆ ನಜರ್‌ಬಾದ್‌ನಲ್ಲಿ ಇಂದ್ರಾಣಿ ಹೋಟೆಲ್ ನಡೆಸುತ್ತಿದ್ದರು. ನಂತರ ಅವರು ಬೆಂಗಳೂರಿಗೆ ಸ್ಥಳಾಂತರಗೊಂಡರು. ಮೃತರು ಪತ್ನಿ ನಿರುಪಮ ಭಟ್, ಪುತ್ರ ನಿತಿನ್ ಭಟ್, ಪುತ್ರಿ ಅರ್ಪಿತಾ ವಿನಯ್ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಚಾಮರಾಜಪೇಟೆ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಕರಿಸಿದ್ದೇಗೌಡರು



ಮೈಸೂರು, ಅ.31–ಮೈಸೂರು ತಾಲೂಕು ಬೆಳವಾಡಿ ಗ್ರಾಮದ ಶತಾಯುಷಿ ಕರಿಸಿದ್ದೇಗೌಡರು(100) ಶುಕ್ರವಾರ ನಿಧನರಾದರು. ಮೃತರು ಜೆಡಿಎಸ್ ಮುಖಂಡ ಬೆಳವಾಡಿ ಶಿವಮೂರ್ತಿ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇಂದು ಸಂಜೆ ಅವರ ಕುಟುಂಬದ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೊಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ –ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಶ್ರೀರಂಗಪಟ್ಟಣ ತಾಲೂಕು, ಕೆ. ಶೆಟ್ಟಿಹಳ್ಳಿ ಹೋಬಳಿ, ಕೂಡಲ ಕುಪ್ಪೆಗ್ರಾಮದ ಕೃಷಿಕ ದಂಪತಿ ಕೆ. ಎನ್. ಮಲ್ಲಿಕಾರ್ಜುನ ಹಾಗೂ ಲಕ್ಷ್ಮಿ, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು ನೆನಪುಗಳ ಹೊತ್ತು– ವಿಶೇಷ ಕಾರ್ಯಕ್ರಮ ಸರಣಿ, ಕನ್ನಡ ಸಾರಸ್ವತ ಲೋಕದ ಹಿರಿಯ ವಿದ್ವಾಂಸರಾದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರೊಂದಿಗೆ ಸಂವಾದ. ಭಾಗವಹಿಸುತ್ತಾರೆ–ಟಿ.ವಿ. ವಿದ್ಯಾಶಂಕರ್, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಇಂದಿನ ಪಂಚಾಂಗ

1.11.2025 ಶನಿವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಮತ್ತು ಕನ್ನಡ ಸಹೃದಯ ಬಳಗ :** ಕನ್ನಡ ರಾಜ್ಯೋತ್ಸವ, ಉದ್ಘಾಟನೆ : ಲೇಖಕ ಡಾ. ಮದನ್ ಪಟೇಲ್, ಅಧ್ಯಕ್ಷತೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಂ, ಮುಖ್ಯ ಅತಿಥಿಗಳು : ಕವಯಿತ್ರಿ ಶ್ರೀಮತಿ ಅಮ್ಮಯ್ಯ ಶೇಖರ್, ಸ್ಥಳ: ಚೆಲುವಾಂಬ ಅರಮನೆ, ಬೆಳಗ್ಗೆ 9ಕ್ಕೆ.

■ **ಸುಯೋಗ್ ಆಸ್ಪತ್ರೆ :** 70ನೇ ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ : ದೇವರಾಜು ಪಿ. ಚಿಕ್ಕಹಳ್ಳಿ, ಅಧ್ಯಕ್ಷತೆ : ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9ಕ್ಕೆ.

■ **ರೋಟರಿ ಮೈಸೂರು :** ಹಾಡು ಕನ್ನಡ–ಕರ್ನಾಟಕದ ಆತ್ಮಸ್ಪಂದನದ ಸಂಗೀತೋತ್ಸವ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಜೆಎಸ್‌ಎಸ್ ಪದವಿ ಕಾಲೇಜು :** ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಉಪಸ್ಥಿತರು : ಪ್ರಿನ್ಸಿಪಾಲರಾದ ಡಾ. ಎಂ. ಪ್ರಭು, ಎಸ್. ನಂಜುಂಡಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಗರ್ಭ ಸಂಸ್ಕಾರ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಪ್ರಜಾಭಾರತ ಮೀಡಿಯಾ ಹೌಸ್ :** ಪತ್ರಕರ್ತ ಕೆ.ದೀಪಕ್ ಸಾರಥ್ಯದಲ್ಲಿ ವಿಜಯ ಕಾಲ ದಿನಪತ್ರಿಕೆ, ವೆಬ್‌ಸೈಟ್, ಡಿಜಿಟಲ್, ಕಚೇರಿ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವಿಧಾನಸಭಾ ಸಭಾಪತಿ ಯು.ಟಿ. ಖಾದರ್, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಲಾಂಛನ ಅನಾವರಣ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ವೆಬ್‌ಸೈಟ್ ಲೋಕಾರ್ಪಣೆ : ಪಂಚ ಭಾಷಾ ನಟ ಪ್ರಕಾಶ್ ರಾಜ್, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮಾಜಿ ಶಾಸಕ ಹೆಚ್.ಪಿ. ಮಂಜುನಥ್, ವಿಧಾನ ಪರಿಷತ್ ಸದಸ್ಯ ಡಾ.ಕೆ. ಶಿವಕುಮಾರ್, ಹಿರಿಯ ಪತ್ರಕರ್ತ ಡಿ. ಮಹಾದೇವಪ್ಪ, ಕಚೇರಿ ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಡಿ. ರವಿಶಂಕರ್, ಅನಿಲ್ ಚಿಕ್ಕಮಾದು, ಜಿ.ಡಿ. ಹರೀಶ್‌ಗೌಡ, ಮಾಜಿ ಸಚಿವ ಸಾ.ರಾ. ಮಹೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್. ವಿಜಯ್, ಹಿರಿಯ ಪತ್ರಕರ್ತ ಎನ್. ರವಿಕುಮಾರ್, ಸ್ಥಳ: ವಿಜ್ಞಾನ ಭವನ, ಹುಣಸೂರು ರಸ್ತೆ, ಬೆಳಗ್ಗೆ 10.30 ರಿಂದ.

■ **ಓಟಿಕೇರ್ ಆಸ್ಪತ್ರೆ :** ಕಿವಿ ತಪಾಸಣಾ ಶಿಬಿರ, ಸ್ಥಳ: ಓಟಿಕೇರ್ ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11 ರಿಂದ.

■ **ಎಚ್.ವಿ. ರಾಜೀವ್ ಸ್ನೇಹ ಬಳಗ :** ಕನ್ನಡ ರಾಜ್ಯೋತ್ಸವ, ಸ್ಥಳ: ಭೂತಾಳೆ ಮೈದಾನ, ವಿದ್ಯಾರಣ್ಯಪುರಂ, ಬೆಳಗ್ಗೆ 11ಕ್ಕೆ.

■ **ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಟೋ ಚಾಲಕ, ಮಾಲೀಕರ ಸಂಘ :** 70ನೇ ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಪಾರ್ಥಸಾರಥಿ, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್, ಶೋಭಾ ಸುನೀಲ್, ಬಿ.ವಿ. ಮಂಜುನಾಥ್, ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸಪ್ಪ, ತೇಜಸ್ವಿ ನಾಗಲಿಂಗಸ್ವಾಮಿ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಹಳೇ ಗೇಟ್ ಮುಂಭಾಗ, ರಾಮಾನುಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಡಾ. ನಯನ ಮ್ಯೂಸಿಕಲ್ ಗ್ರೂಪ್ಸ್ :** ಕನ್ನಡ ಚಲನಚಿತ್ರ ಕರೋಕೆ ಗಾಯನ ರಸಮಂಜರಿ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ. ನಾಗರಾಜು ವಿ. ಭೈರಿ, ಅಧ್ಯಕ್ಷತೆ : ಲೋಕೇಶ್ವರ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಸ್ವಾಮಿ, ಚನ್ನಮಲ್ಲಯ್ಯ, ಪಾರ್ಥಸಾರಥಿ, ರವಿಶಾಸ್ತ್ರಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3.30 ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 904, ಕಥೆ ಹೇಳುವವರು: ಜಿ ವೆಂಕಟಾಚಲ, ಕರ್ನಾಟಕ ಶಿಕ್ಷಣ ಸೇವೆ, ಮುಖ್ಯೋಪಾಧ್ಯಾಯರು, ಕೈಲಾಸಪುರಂ ಸರ್ಕಾರಿ ಪ್ರೌಢಶಾಲೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಪದ್ಮಪಾಣಿ ಲಲಿತಕಲಾ ಅಕಾಡೆಮಿ :** ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಅಕಾಡೆಮಿ ಅಧ್ಯಕ್ಷ ಡಾ. ಶಿವಕುಮಾರ್, ಧ್ವಜಾರೋಹಣ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ

■ **ಸಮುದಾಯ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕಾವಾ ಅಲ್ಯೂಮಿನಿ ಅಸೋಸಿಯೇಷನ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ, ಪ್ರಗತಿಪರ ಸಂಘಟನೆಗಳ ಒಕ್ಕೂಟ :** ಮನುಷ್ಯತ್ವದೆಡೆಗೆ ಸಮುದಾಯ–50, ಸಮುದಾಯ ಮೈಸೂರು ರಂಗೋತ್ಸವ, ಸಂಜೆ 5ಕ್ಕೆ ನಿತಿನ್‌ರಾಜರಾಂ ಶಾಸ್ತ್ರಿ, ಸಿಂಚನ, ಹರಿಣಾಕ್ಷಿ, ಅರುಣ, ಧನಂಜಯ ಆರ್.ಸಿ., ಮೈಸೂರು ಹವ್ಯಾಸಿ ರಂಗ ವೇದಿಕೆಯ ಕಲಾವಿದರಿಂದ ಜನಪರ ಗೀತ ಗಾಯನ, ತಬಲ–ರಮೇಶ್ ಬನ್ನೂರು, ಕೀಬೋರ್ಡ್–ಪುರುಷೋತ್ತಮ ಕಿರಗಸೂರು, ಹಾರ್ಮೋನಿಯಂ–ಸಿದ್ದೇಶ್ ಬದನವಾಳು, ರಿದಂ ಪ್ಯಾಡ್–ಪ್ರದೀಪ್, ರಂಗ ಗೌರವ : ಚ. ಸರ್ವಮಂಗಳ, ಓ.ಎಲ್. ನಾಗಭೂಷಣಸ್ವಾಮಿ, ಅಕ್ಮಲ್ ಪಾಷ, ಪ್ರೊ. ಕೆ.ಸಿ. ವಾಸುದೇವನ್, ಸಂಜೆ 6ಕ್ಕೆ ಕ್ರಿಯಾ ಮಾಧ್ಯಮ ಹೊರ ತಂದಿರುವ ನಿರಂಜನ ಮರು ಓದು ಸರಣಿಯ ನಾಲ್ಕು ಪುಸ್ತಕಗಳ ಬಿಡುಗಡೆ : ರಂಗಭೂಮಿ ಕಲಾವಿದ ಬಿ. ಸುರೇಶ, ಉಪಸ್ಥಿತರು : ವಸಂತ್ ಎನ್.ಕೆ., ಸಿ. ಬಸವಲಿಂಗಯ್ಯ, ಮೀನಾ ಮೈಸೂರು, ಸಬಿಹಾ ಭೂಮಿಗೌಡ, ರಂಗಾಯಣ ಮೈಸೂರು ಅವರಿಂದ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನುಮುಷ್ತಾಕ್ ಅವರ ಕತೆಗಳ ಆಧಾರಿತ ಒಮ್ಮೆ ಹೆಣ್ಣಾಗು ನಾಟಕ ಪ್ರದರ್ಶನ, ಸಹ ನಿರ್ದೇಶನ : ಶ್ವೇತರಾಣಿ, ನಿರ್ದೇಶನ : ಸವಿತಾ ರಾಣಿ, ಸ್ಥಳ: ಕಲಾಮಂದಿರ ಆವರಣ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದುಷಿ ಅರ್ಚನಾ ಎಲ್.ರಾವ್ ಅವರಿಂದ ಗಾಯನ, ವಿದ್ವಾನ್ ಪೃಥ್ವಿ ಭಾಸ್ಕರ್–ಪಿಟೀಲು, ಶ್ರೀ ಸಾಯಿ ಶಿವು ಲಕ್ಷ್ಮೀಕೇಶವ–ಮೃದಂಗ, ವಿದ್ವಾನ್ ಅನಿಲ್ ಪರಾಶರ–ಖಂಜಿರ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ, ಕನ್ನಡ ಸಂಘ, ಭಾರತೀಯ ಸ್ಟೇಟ್ ಬ್ಯಾಂಕ್ :** ಕೆ. ರಘು ಶೆಟ್ಟಿ ವಿರಚಿತ ಕೃಷ್ಣ ಕಾರಣ ಹಾಗೂ ಉತ್ತಂಗ ಕೃತಿಗಳ ಲೋಕಾರ್ಪಣೆ ಮತ್ತು ವಾಲ್ಮೀಕಿ ಜಯಂತಿ, ಉದ್ಘಾಟನೆ : ವಿಶ್ರಾಂತ ಜಿಲ್ಲಾ ಪ್ರಬಂಧಕ ಮಾ. ವೆಂಕಟರಾಮ್, ಅಧ್ಯಕ್ಷತೆ : ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಅಧ್ಯಕ್ಷ ಎಸ್. ಸುಬ್ರಮಣ್ಯ, ಕೃತಿಗಳ ಕುರಿತು : ಡಾ. ವಿ. ರಂಗನಾಥ್, ಉಪಸ್ಥಿತರು : ದಿವಾಕರ ಹೆಗಡೆ ಕೆರೆಹೊಂಡ, ಕೆ. ರಘು ಶೆಟ್ಟಿ, ವಾಲ್ಮೀಕಿ ಕುರಿತು : ಬಿ.ಕೆ. ಜಗದೀಶ್, ಬಿ.ಜಿ. ರಂಗನಾಥ್, ಸ್ಥಳ: ರೋಟರಿ (ಪಶ್ಚಿಮ) ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್–ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಚಿನ್ಮಯ ಮಿಷನ್, ಶ್ರೀ ಗುರುದೇವ ದತ್ತ ಸನ್ನಿಧಿ :** ಗೀತಾಜ್ಞಾನಯಜ್ಞ, ಪೂಜ್ಯ ಸ್ವಾಮಿ ಗಹನಾನಂದ ಅವರಿಂದ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮ ಯೋಗ ಕುರಿತು ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6.30 ರಿಂದ.

■ **ಅದಮ್ಯ ರಂಗಶಾಲೆ :** ಕುದುರೆ ಮೊಟ್ಟೆ ನಾಟಕ ಪ್ರದರ್ಶನ, ನಿರ್ದೇಶನ : ಚಂದ್ರು ಮಂಡ್ಯ, ಸ್ಥಳ: ಶ್ರೀರಂಗ, ರಂಗಾಯಣ ಆವರಣ, ಸಂಜೆ 6.30ಕ್ಕೆ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಸಂಜೆ 7 ರಿಂದ ಶ್ರೀ ಮಹದೇಶ್ವರ ಕಲಾತಂಡದಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ– ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ. ಎನ್. ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ–ಉಮೇಶ್.ಎಸ್.ಎಸ್., 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಸ್ವಸ್ಥ ಜೀವನಶೈಲಿ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಆಯುರ್ವೇದ ಹಾಗೂ ಅಷ್ಟಾಂಗ ಯೋಗ ತಜ್ಞರು ಮತ್ತು ಆರೋಗ್ಯ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿಗಳಾದ ಡಾ.ಮಂಜುನಾಥ.ಟಿ.ಎನ್. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ ಮಾರ್ಗದರ್ಶಿ ಶಿಕ್ಷಣಕ್ಕೊಂದು ಸೋಪಾನ ಮಾಲಿಕೆಯಲ್ಲಿ ಮಕ್ಕಳ ಯಶಸ್ವಿ ಭವಿಷ್ಯದಲ್ಲಿ ಪೋಷಕರ ಪಾತ್ರ ಕುರಿತು ವೃತ್ತಿ ಕೌಶಲ್ಯ ಸಲಹೆಗಾರರಾದ ಶಂಕರ್ ಬೆಳ್ಳೂರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಟಿ ನರಸೀಪುರದ ಇಂದಿರಮ್ಮ ಮತ್ತು ಸಂಗಡಿಗರಿಂದ ಮನೆಯಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವೆ ನವಿ ಮುಂಬೈನ ಡಾ. ಡಿ. ವೈ ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವ ಕಪ್ ಮಹಿಳಾ ಕ್ರಿಕೆಟ್ ಫೈನಲ್ ಪಂದ್ಯದ ವೀಕ್ಷಕ ವಿವರಣೆ

ನಾಳಿನ ಪಂಚಾಂಗ

2.11.2025 ಭಾನುವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಸಂಜೆ 6ಗಂಟೆಗೆ ರಂಗವಲ್ಲಿ ಸ್ಪರ್ಧೆ, ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಸಂಜೆ 8 ಗಂಟೆಗೆ ಬೆಳಿಗೆರೆ ಹುಂಡಿ ಗ್ರಾಮದವರಿಂದ ಕಂಸಾಳೆ ಪದ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಸಮುದಾಯ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕಾವಾ ಅಲ್ಯೂಮಿನಿ ಅಸೋಸಿಯೇಷನ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ, ಪ್ರಗತಿಪರ ಸಂಘಟನೆಗಳ ಒಕ್ಕೂಟ :** ಮನುಷ್ಯತ್ವದೆಡೆಗೆ ಸಮುದಾಯ–50, ಸಮುದಾಯ ಮೈಸೂರು ರಂಗೋತ್ಸವ, ಬೆಳಗ್ಗೆ 10.30ಕ್ಕೆ ವಿಚಾರ ಸಂಕಿರಣ, ಕನ್ನಡ ರಂಗಭೂಮಿ–ಜನಪರ ಸಂಸ್ಕೃತಿ ಆಶಯಗಳು, ಉದ್ಘಾಟನೆ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ. ಗುರುರಾಜ್; ಸಂಜೆ 5ಕ್ಕೆ ಮಹಾಲಿಂಗು, ಅಮ್ಮರಾಮಚಂದ್ರ, ಸೂರ್ಯಪ್ರಭ ಜೆ., ಭವತಾರುಣಿ, ರಮೇಶ್ ತಾಯೂರು ಅವರಿಂದ ಜನಾಶಯ ಗೀತ ಗಾಯನ, ಸಂಜೆ 6ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಮತಾ ವೇದಿಕೆ ರಾಷ್ಟ್ರೀಯ ಅಧ್ಯಕ್ಷೆ ಶ್ರೀಮತಿ ರತಿರಾವ್, ಉಪಸ್ಥಿತರು : ಕಾಳೇಗೌಡ ನಾಗವಾರ, ಅಹಿಂದ ಜವರಪ್ಪ, ಸುಶೀಲಬಸು, ಬಸವರಾಜು ರೈತ ಸಂಘ, ದೇವೇಂದ್ರಗೌಡ, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ರಂಗ ಗೌರವ : ಪ್ರಕಾಶ್ ಶೆಣೈ, ಪ್ರೊ. ಎಸ್.ಆರ್. ರಮೇಶ್, ಶಿವಾಜಿರಾವ್ ಜಾದವ್, ನಂದಾ ಹಳೆಮನೆ, ಜನಮನ ಸಾಂಸ್ಕೃತಿಕ ಸಂಘಟನೆ ಕಲಾವಿದರಿಂದ ಕಲ್ಲು ಕರಗುವ ಸಮಯ ನಾಟಕ ಪ್ರದರ್ಶನ, ಕಥೆ : ಪಿ. ಲಂಕೇಶ್, ಸಂಗೀತ : ಹೆಚ್. ಜನಾರ್ಧನ್ (ಜನ್ನಿ), ನಿರ್ದೇಶನ : ಕೆ.ಆರ್. ಸುಮತಿ, ಸ್ಥಳ: ಕಲಾಮಂದಿರ ಆವರಣ.

■ **ಬಸವ ಸಮಿತಿ :** ಶರಣ ಸಂಗಮ–311, ಕನ್ನಡ ರಾಜ್ಯೋತ್ಸವ ಆಚರಣೆ, ಮುಖ್ಯ ಅತಿಥಿಗಳು : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಜಯಪ್ಪ ಹೊನ್ನಾಳಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೋಭರಾಣಿ ಜಯಪ್ರಕಾಶ್, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸಂಧ್ಯಾ ಸುರಕ್ಷ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಮೈಸೂರು ಶಾಕಂಬರಿ ಧಾರ್ಮಿಕ ಕೇಂದ್ರ :** 20ನೇ ವರ್ಷದ ಸಂಭ್ರಮಾಚರಣೆ, ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಧ್ವಜಾರೋಹಣ : ಶಾಸಕ ಟಿ.ಎಸ್. ಶ್ರೀವತ್ಸ, ಪ್ರಶಸ್ತಿ ಪ್ರದಾನ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೂಗೂರು ನಂಜುಂಡಸ್ವಾಮಿ, ಮುಖ್ಯ ಅತಿಥಿಗಳು : ಮಾಜಿ ಕಸಾಪ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಹೆಚ್.ಜಿ. ಪರಶಿವಪ್ಪ, ಶ್ರೀಮತಿ ಮಂಗಳಾ ಜೋಯಿಸ್, ಶ್ರೀಮತಿ ಮ.ನ. ಲತಾ ಮೋಹನ್, ಸ್ಥಳ: ಶಾಕಂಬರಿ ಧಾರ್ಮಿಕ ಕೇಂದ್ರ, ದೇವಯ್ಯನ ಹುಂಡಿ ಸ್ಟಾಪ್, ಬೆಳಗ್ಗೆ 10ಕ್ಕೆ.

■ **ದಿ ಬಲಿಜ ಸಂಘಂ :** ಬೆಳಗ್ಗೆ 9ಕ್ಕೆ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಬೆಳಗ್ಗೆ 10ಕ್ಕೆ ಬಲಿಜ ಸ್ವರಸಂಗಮ ತಂಡದಿಂದ ರಸಮಂಜರಿ ಕಾರ್ಯಕ್ರಮ, ಭಕ್ತಿಗೀತೆ, ಸುಗಮ ಸಂಗೀತ ಕಾರ್ಯಕ್ರಮ, ಸ್ಥಳ: ದಿ ಬಲಿಜ ಸಂಘಂ, ಜಯನಗರ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ :** ಡಾ. ಹೆಚ್.ಆರ್. ಮಣಿಕರ್ಣಿಕಾ ಅವರು ಬರೆದಿರುವ 'ಆಯುರ್ವೇದದಿಂದ ಅಲೋಪತಿಯವರೆಗೆ' ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಜಿಲ್ಲಾ ಆಯುಷ್ ಅಧಿಕಾರಿ ಡಾ. ಸಿ. ರೇಣುಕಾದೇವಿ, ಕೃತಿ ಕುರಿತು : ದೇವರಾಜು ಪಿ. ಚಿಕ್ಕಹಳ್ಳಿ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ಹೆಚ್.ಆರ್. ಮಣಿಕರ್ಣಿಕಾ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ

ಮೈಸೂರು ಮಿತ್ರ

ಕನ್ನಡ ಕಟ್ಟುವ ಕಾಯಕದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅವಿರತ ಸೇವೆ

● ಕನ್ನಡ ತಾಳೆಗರಿ ಹಸ್ತಪ್ರತಿ ಡಿಜಿಟಲೀಕರಣಕ್ಕೆ ಸನ್ನದ್ಧ ● ವೈದ್ಯಕೀಯ ಕನ್ನಡ ವಿಶ್ವಕೋಶ ಹೊರತರಲು ತಯಾರಿ



ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

ಮೈಸೂರು,ಅ.31(ಪಿಎಂ)– ಇದೀಗ 70ನೇ ಕನ್ನಡ ರಾಜ್ಯೋತ್ಸವದ ಸಂಭ್ರಮದಲ್ಲಿದ್ದೇವೆ. ಕನ್ನಡ ಕಟ್ಟುವ ಕಾಯಕದಲ್ಲಿ ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ತನ್ನದೇ ವಿಶಿಷ್ಟ ಮತ್ತು ಮಹತ್ವದ ಕೊಡುಗೆ ನೀಡುತ್ತಾ ಮುನ್ನಡೆಯುತ್ತಿದೆ.

ಕನ್ನಡ ವಿಶ್ವಕೋಶದ 14 ಸಂಪುಟಗಳ ಹೊರತರುವುದು ಸೇರಿದಂತೆ, ಹತ್ತು ಹಲವು ಯೋಜನೆ, ಆಯಾಮಗಳಲ್ಲಿ ಕನ್ನಡ ಭಾಷೆಗೆ ಅನನ್ಯ ಕೊಡುಗೆ ನೀಡುತ್ತಾ ಸಾಗುತ್ತಿರುವ ಈ ಸಂಸ್ಥೆ, ಕನ್ನಡ ತಾಳೆಗರಿ ಹಸ್ತಪ್ರತಿಗಳ ಡಿಜಿಟಲೀಕರಣ ಯೋಜನೆ ಕೈಗೆತ್ತಿಕೊಳ್ಳಲು ಈಗ ಸನ್ನದ್ಧವಾಗಿದೆ. ಅಲ್ಲದೆ, ವೈದ್ಯ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ 15ನೇ ಸಂಪುಟದಲ್ಲಿ ಕನ್ನಡ ವಿಶ್ವಕೋಶ ಬಿಡುಗಡೆಗೂ ಸಿದ್ಧತೆ ನಡೆಸಿದೆ. ಈ ಸಂಸ್ಥೆ ಆವರಣದಲ್ಲೇ ಇರುವ ಹಸ್ತಪ್ರತಿ ಯೋಜನೆಯ ವಿಭಾಗದಲ್ಲಿ ಸುಮಾರು 5 ಸಾವಿರ ಕನ್ನಡದ ಹಸ್ತಪ್ರತಿಗಳ ಸಂಗ್ರಹ ಇದ್ದು, ಈ ಪೈಕಿ 2,500 ತಾಳೆಗರಿ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಲು ರಾಜ್ಯ ಸರ್ಕಾರ 1 ಕೋಟಿ ರೂ. ಅನುದಾನ ಕಲ್ಪಿಸಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ, ಅನುದಾನ ಬಿಡುಗಡೆಗೆ ಪ್ರಕ್ರಿಯೆ ಪೂರ್ಣಗೊಂಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಹಣ ಬಿಡುಗಡೆಯಾಗಲಿದ್ದು, ಅದಕ್ಕೆ ಅಗತ್ಯ ಸಿದ್ಧತೆ ಹಾಗೂ ಸಮಿತಿ ರಚನೆ ಮಾಡಿ ಕೊಂಡಿದ್ದೇವೆ. ಆ ಮೂಲಕ ತಾಳೆಗರಿಗಳು ಡಿಜಿಟಲೀಕರಣಗೊಂಡರೆ, ಅವುಗಳ ಸಂರಕ್ಷಣೆಗೆ ಪೂರಕ ವ್ಯವಸ್ಥೆಯಾಗಲಿದೆ ಎಂದು ತಿಳಿಸಿದರು.

ಕವಿರಾಜ ಮಾರ್ಗ ಕೃತಿಯಿಂದ ಹಿಡಿದು ಪಂಪ, ರನ್ನನ ಕೃತಿಗಳ ತಾಳೆಗರಿ ಹಸ್ತಪ್ರತಿಗಳು ನಮ್ಮಲ್ಲಿವೆ. ನಮ್ಮಲ್ಲಿದ್ದ ಹೆಚ್ಚುವರಿ ಕವಿರಾಜ ಮಾರ್ಗದ ತಾಳೆಗರಿ ಪ್ರತಿಯನ್ನು ದೆಹಲಿಯ ರಾಷ್ಟ್ರಪತಿ ಭವನದ ಗ್ರಂಥಾಲಯಕ್ಕೆ ನೀಡಲಾಗಿದೆ. ತಾಳೆಗರಿಯಲ್ಲಿರುವ ಹಳೆಗನ್ನಡವನ್ನು ಹೊಸಗನ್ನಡಕ್ಕೆ ಹಾಗೂ ಇಂಗ್ಲೀಷಿಗೆ ಅನುವಾದ ಸಹ ಮಾಡಲಾಗಿದೆ ಎನ್ನುತ್ತಾರೆ ಅವರು.

ವೈದ್ಯಕೀಯ ಕನ್ನಡ ವಿಶ್ವಕೋಶ ಶೀಘ್ರ ಪೂರ್ಣ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ 15ನೇ ಸಂಪುಟವಾಗಿ ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವಕೋಶ ಹೊರತರಲಾಗುತ್ತಿದೆ. ಸಂಸ್ಥೆಯಿಂದ ಈ ಹಿಂದೆಯೇ ಕನ್ನಡ ವಿಶ್ವಕೋಶದ 14 ಸಂಪುಟಗಳನ್ನು ಹೊರತಂದಿದ್ದು, ಈ ಪೈಕಿ ಪರಿಷ್ಕರಣೆ ಸಹ ಪೂರ್ಣಗೊಳಿಸಲಾಗಿದೆ. ಇದೀಗ 15ನೇ ಸಂಪುಟ ಶೀಘ್ರ ಬಿಡುಗಡೆಯಾಗಲಿದೆ.

1927ರಲ್ಲಿ ಮಹಾರಾಜ ಕಾಲೇಜು ಆವರಣದಲ್ಲಿ ಕನ್ನಡ ವಿಭಾಗ ಪ್ರಾರಂಭವಾಯಿತು. 1966ರಲ್ಲಿ ಮಾನಸ ಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಾಗಿ ರೂಪತಳೆಯಿತು. ಕುವೆಂಪು ಅವರು ಕಾಲವಾದ ನಂತರದಲ್ಲಿ ಅವರ ಗೌರವಾರ್ಥವಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಾಗಿ ಮರುನಾಮಕರಣಗೊಂಡಿತು.



ಪ್ರೊ. ಲೋಲಾಕ್ಷಿ

ಸಂಸ್ಥೆಯ ಹಾಲಿ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಮಾತನಾಡಿ, ಕನ್ನಡ, ಭಾಷಾ ವಿಜ್ಞಾನ, ಜಾನಪದ ಹಾಗೂ ದಕ್ಷಿಣ ಭಾರತೀಯ ಅಧ್ಯಯನ ಸೇರಿದಂತೆ ನಾಲ್ಕು ಸ್ನಾತಕೋತ್ತರ ಪದವಿಗಳು ಇಲ್ಲಿವೆ. ಜೊತೆಗೆ ವಿಶ್ವಕೋಶ ಯೋಜನೆ, ಹಸ್ತಪ್ರತಿ ಯೋಜನೆ, ಶಾಸನಶಾಸ್ತ್ರ ಯೋಜನೆ ಮತ್ತು ಅನುವಾದ ಯೋಜನೆ ಹಾಗೂ ಕನ್ನಡ ಸಾಹಿತ್ಯ ಚರಿತ್ರೆ ಯೋಜನೆ ಸಂಸ್ಥೆಯಲ್ಲಿವೆ. ನಮ್ಮ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆಯ ಯೋಜನೆಯಡಿ ರಚಿತವಾದ ಚರಿತ್ರೆಗೆ ಒಳ್ಳೆಯ ಹೆಸರಿದೆ. ಪಿಹೆಚ್.ಡಿ ಕೋರ್ಸ್‌ಗಳು, ಎಂಫಿಲ್ ಪದವಿ, ಪಿಜಿ ಡಿಪ್ಲೊಮಾ ಕೋರ್ಸ್‌ಗಳು ಸಂಸ್ಥೆಯಲಿದ್ದು, ಕನ್ನಡೇತರರಿಗೆ ಕನ್ನಡ ಕಲಿಸುವ ಕೆಲಸವೂ ನಡೆಯುತ್ತಿದೆ. ಹಾಗಾಗಿ ನಮ್ಮ ಸಂಸ್ಥೆಯನ್ನು ಮಿನಿ ವಿಶ್ವವಿದ್ಯಾನಿಲಯ ಎಂದೇ ಕರೆಯಬಹುದು.

ಸಂಸ್ಥೆಯಲ್ಲಿ ಕನ್ನಡದ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಭಾಷಾ ಬೆಳವಣಿಗೆಗೆ ಅಪಾರವಾದ ಕೊಡುಗೆಯನ್ನು ಸಂಸ್ಥೆ ನೀಡಿದೆ. 98 ವರ್ಷಗಳು ಸಂಸ್ಥೆಗೆ ಸಂದಿದ್ದು, ಶತಮಾನೋತ್ಸವದಂಚಿನಲ್ಲಿದೆ. ಕುವೆಂಪು ಕಾವ್ಯ ಅಧ್ಯಯನ ಪೀಠ, ಪಿ.ಆರ್.ತಿಪ್ಪೇಸ್ವಾಮಿ ಅಧ್ಯಯನ ಪೀಠ, ರಾಚಪ್ಪಾಜಿ, ಮಂಟೇಸ್ವಾಮಿ, ಮಲೆಮಹದೇಶ್ವರ ಅಧ್ಯಯನ ಪೀಠ ಹಾಗೂ ಬಸವ ಅಧ್ಯಯನ ಪೀಠ ಸೇರಿದಂತೆ ನಾಲ್ಕು ಅಧ್ಯಯನ ಪೀಠಗಳು ಸಂಸ್ಥೆ ಅಧೀನದಲ್ಲಿ ನಿರಂತರವಾಗಿ ಚಟುವಟಿಕೆಗಳಲ್ಲಿ ತೊಡಗಿವೆ ಎಂದು ಅವರು ವಿವರಿಸಿದರು.

'ಕನ್ನಡ ವಿಶ್ವಕೋಶ' ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಾಗೂ ಕನ್ನಡದ ಪ್ರತಿಷ್ಠಿತ ಯೋಜನೆಗಳಲ್ಲಿ ಮಹತ್ವದ್ದು. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ ಮಾದರಿಯಲ್ಲಿ ಕನ್ನಡದಲ್ಲಿ ವಿಶ್ವಕೋಶವನ್ನು ರಚಿಸುವ ಪ್ರಯತ್ನ 1954ರಲ್ಲಿ ನಡೆಯಿತು. ಅಂದು ಮೈಸೂರು ವಿವಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಡಾ.ಕೆ.ವಿ.ಪುಟ್ಟಪ್ಪನವರು (ಕುವೆಂಪು) ವಿಶ್ವಕೋಶದ ಯೋಜನೆಯನ್ನು ಕೈಗೊಳ್ಳಲು ವಿವಿಗೆ ಸಲಹೆ ನೀಡಿದ್ದರು. ನಂತರದಲ್ಲಿ ಸರ್ಕಾರದ ಅಧೀನದಲ್ಲಿದ್ದ ಈ ಯೋಜನೆಯ ಬಳಿಕ ಮೈಸೂರು ವಿವಿಯಲ್ಲಿ ಶಾಶ್ವತವಾಗಿ ನೆಲೆಗೊಳ್ಳುವಂತಾಯಿತು.

15 ಸಂಪುಟಗಳ ಕುರಿತು ವಿವರಿಸಿದ ಪ್ರೊ.ಎನ್.ಕೆ.ಲೋಲಾಕ್ಷಿ ಅವರು, ಕನ್ನಡ ವಿಶ್ವಕೋಶ ಯೋಜನೆಯಡಿ ಅಂದು ಸಹ ಅತ್ಯಂತ ಪರಿಣಿತರಿರುವ ನಿರ್ದೇಶಕರು, ಸಂಪಾದಕರು ಸೇರಿದಂತೆ ದೊಡ್ಡ ತಂಡವೇ ಕೆಲಸ ಮಾಡಿ, ಯೋಜನೆ ಪೂರ್ಣಗೊಳಿಸಲಾಗಿತ್ತು. ಪ್ರಸ್ತುತದ ಸಂದರ್ಭಕ್ಕೆ ಅನುಗುಣವಾಗಿ ಪರಿಷ್ಕರಣೆ ಸೇರಿದಂತೆ ಇನ್ನಿತರ ಕೆಲಸ ಕಾರ್ಯ ಮುಂದುವರಿದಿದೆ. ಶೀಘ್ರದಲ್ಲಿ ವೈದ್ಯಕೀಯ ಕನ್ನಡ ವಿಶ್ವಕೋಶ ಹೊಸದಾಗಿ ಬಿಡುಗಡೆಯಾಗಬೇಕಿದೆ. ಇನ್ನೇನು ಮುಗಿಯುವ ಹಂತಕ್ಕೆ ಬಂದಿದ್ದು, ಈಗಾಗಲೇ 1,300 ಪುಟಗಳಷ್ಟು ಸಿದ್ಧವಾಗಿದೆ. ಅಂತಿಮವಾಗಿ ಚಿತ್ರಗಳನ್ನು ಅವಳವಡಿಸುವ ಕೆಲಸ ನಡೆಯುತ್ತಿದೆ ಎಂದು ವಿವರಿಸಿದರು.

14 ಸಂಪುಟ ಮತ್ತು ವಿಷಯ ವಿಶ್ವಕೋಶದ ಸಂಪುಟಗಳಾಗಿ, 7 ಸಂಪುಟಗಳ ಡಿಜಿಟಲೀಕರಣ ಆಗಿತ್ತು. ಆ ಸಂಪುಟಗಳಲ್ಲಿ ಕೆಲವು ಭಾಗಗಳು ವಿಕಿಪಿಡೀಯಾದಲ್ಲಿ ಲಭ್ಯವಿವೆ. ಮುಂದಿನ ಹಂತಗಳಲ್ಲಿ ನಮ್ಮ ವಿವಿ ವೆಬ್‌ಸೈಟ್‌ನಲ್ಲಿ ಒದಗಿಸುವ ಉದ್ದೇಶ ಹೊಂದಿದ್ದೇವೆ. ವೈದ್ಯಕೀಯ ಕನ್ನಡ ವಿಶ್ವಕೋಶವನ್ನು ಡಿಜಿಟಲೀಕರಣದಲ್ಲಿಯೂ ಬಿಡುಗಡೆ ಮಾಡಬೇಕೆಂದು ಸತತವಾಗಿ ನಮ್ಮಲ್ಲಿರುವ ಎಲ್ಲಾ ಸಂಶೋಧನಾ ಸಹಾಯಕರು ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಮೂರು ಸಂಪುಟಗಳ ಪರಿಷ್ಕರಣಾ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದರು.

ಪದಗಳ ಅರ್ಥ, ವ್ಯಾಖ್ಯಾನ ಸೇರಿದಂತೆ ಭಾಗಶಃ ಮಾಹಿತಿ ದೊರೆಯುವುದು ವಿಶ್ವಕೋಶದ ವಿಶೇಷ. ವ್ಯಕ್ತಿ, ಸ್ಥಳ, ಸಸ್ಯ, ಪ್ರಾಣಿ ಸೇರಿದಂತೆ ಇಡೀ ಸಮಾಜದ ವಿಚಾರ ಜ್ಞಾನಗಳನ್ನು ಒಳಗೊಂಡಿರುವಂತೆ ಸಿದ್ಧಪಡಿಸುವುದೇ ವಿಶ್ವಕೋಶ. ಕನ್ನಡ ಭಾಷೆಯ ಬೆಳವಣಿಗೆಗೆ ಹಾಗೂ ಕನ್ನಡದಲ್ಲಿ ವಿಷಯ ಗ್ರಹಿಸಿ ಅರ್ಥ ಮಾಡಿಕೊಳ್ಳಲು ಕನ್ನಡ ವಿಶ್ವಕೋಶ ಪೂರಕವಾಗುತ್ತದೆ. ಪ್ರಸ್ತುತ ಯಾವುದೇ ಮಾಹಿತಿಗಾದರೂ ಬಹುತೇಕರು ಅಂತರ್ಜಾಲದ ಮೊರೆ ಹೋಗುವುದೇ ಹೆಚ್ಚು. ಹಾಗಾಗಿ ಸಂಸ್ಥೆಯ ವಿಶ್ವಕೋಶದ 7 ಸಂಪುಟಗಳು ಡಿಜಿಟಲೀಕರಣಗೊಂಡು ವಿಕಿಪಿಡಿಯಾ ಮೂಲಕ ದೊರೆಯುವಂತಾಗಿದೆ ಎಂದು ಹೇಳಿದರು.



ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿ ಯೋಜನೆ ವಿಭಾಗದಲ್ಲಿರುವ ಕವಿರಾಜ ಮಾರ್ಗ ತಾಳೆಗರಿ ಹಸ್ತಪ್ರತಿ.



ವಿವಿಧ ಹಸ್ತಪ್ರತಿಗಳನ್ನು ವಸ್ತ್ರದಲ್ಲಿ ಸಂರಕ್ಷಿಸಿರುವುದನ್ನು ಕಾಣಬಹುದು.



ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕನ್ನಡ ವಿಶ್ವಕೋಶದ ವಿವಿಧ ಸಂಪುಟಗಳು.

ಹಿರಿಯ ಆರು ಮಂದಿ ಕ್ರೀಡಾ ಸಾಧಕರಿಗೆ ಪ್ರಶಸ್ತಿ



ದೇಶಿ ಕ್ರೀಡೆಯಲ್ಲಿ ಮಿಂಚುತ್ತಿರುವ ಮೈಸೂರು ವಲಯದ ಆಟಗಾರರನ್ನು ಕೆಎಸ್‌ಸಿಎ ಮೈಸೂರು ವಿಭಾಗದಿಂದ ಗೌರವಿಸಲಾಯಿತು.

ರಾಜ್ಯಮಟ್ಟದಲ್ಲಿ ಸಾಧನೆ ಮಾಡಿದ ಮೈಸೂರು ವಲಯ ಆಟಗಾರರು

ಪುರುಷರು/ಬಾಲಕರ ವಿಭಾಗ

- **25 ವರ್ಷದೊಳಗಿನವರು:** ಎಲ್.ಆರ್. ಚೇತನ್, ಬಿ.ಧೀಮಂತ್.
- **23 ವರ್ಷದೊಳಗಿನವರು:** ಕೃತಿಕ್ ಕೃಷ್ಣ, ಮನ್ವಂತ್ ಕುಮಾರ್,
- **16 ವರ್ಷದೊಳಗಿನವರು:** ಧ್ಯಾನ್ ಮಹೇಶ್ ಹಿರೇಮಠ.

ಮಹಿಳಾ/ ಬಾಲಕಿಯರ ವಿಭಾಗ

- **23 ವರ್ಷದೊಳಗಿನವರು:** ಪಿ.ಸಲೊನಿ.
- **19 ವರ್ಷದೊಳಗಿನವರು:** ವೇದ ವರ್ಷಿಣಿ, ಜೆ.ದೀಕ್ಷಾ.
- **15 ವರ್ಷದೊಳಗಿನವರು:** ಲಿಯಾಂಕ ಪಿ.ಶೆಟ್ಟಿ, ನೇಸರಾ ಸಪ್ತ ಗಿರೀಶ್, ಕರೀಷ್ಮಾ ಜೆ.ಗೌಡ, ಕೆ.ಹರ್ಷಿತಾ.

ಮೈಸೂರು, ಅ.31(ವಿವಿಹೆಚ್)– ಮೈಸೂರು ವಲಯದಿಂದ ದೇಶ, ರಾಜ್ಯ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಟಗಾರರಾದ ಶುಭಾ ಸತೀಶ್, ಎಸ್.ಜೆ.ನಿಕಿನ್ ಜೋಸ್, ಎಲ್.ಆರ್.ಚೇತನ್, ಎಲ್.ಮನ್ವಂತ್ ಕುಮಾರ್ ಸೇರಿದಂತೆ ಹಿರಿಯರ ವಿಭಾಗದ ಆರು ಮಂದಿಗೆ 2024–25ನೇ ಸಾಲಿನ ಸಾಧಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನ ನಿತ್ಯೋತ್ಸವ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಶುಕ್ರವಾರ ಆಯೋಜಿಸಿದ್ದ ಕೆಎಸ್‌ಸಿಯ ಮೈಸೂರು ವಲಯದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 40ಕ್ಕೂ ಹೆಚ್ಚು ವಿಭಾಗದಲ್ಲಿ ಕ್ರೀಡಾ ಪಟುಗಳು ಪ್ರಶಸ್ತಿ ಸ್ವೀಕರಿಸಿದರು. ಸಮಾರಂಭದಲ್ಲಿ ಭಾಗಿಯಾಗಿದ್ದ ಕ್ರೀಡಾಪಟುಗಳ ಕುಟುಂಬದವರು ಪ್ರಶಸ್ತಿ ವಿಜೇತ ಆಟಗಾರರ ಅಭಿನಂದಿಸಿ, ಸಂಭ್ರಮಿಸಿದರು.

ಸಮಾರಂಭ ವೇಳೆ ಮಾತನಾಡಿದ ವಲಯ ಉಸ್ತುವಾರಿ ಇರ್ಫಾನ್ ಸೇಠ್, ಮೈಸೂರು ವಲಯ ಕ್ರೀಡಾಪಟುಗಳ ಪ್ರತಿಭೆಗಳ ಅನಾವರಣಕ್ಕೆ ಉತ್ತಮ ತಾಣವಾಗಿದೆ. ಈ ವರ್ಷ 480ಕ್ಕೂ ಅಧಿಕ ಪಂದ್ಯಗಳ ಆಯೋಜನೆಯಾಗಿದ್ದು, ಕ್ರೀಡಾಸ್ಫೂರ್ತಿ ಹೆಚ್ಚಾಗಿದೆ. ಉಳಿದ ವಲಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ಮೈಸೂರು ವಲಯದಲ್ಲಿ ಹೆಚ್ಚಿನ ಮಹಿಳಾ ಪ್ರತಿಭಾವಂತ ಆಟಗಾರರಿದ್ದು, ಅವಕಾಶಗಳ ಸದುಪಯೋಗ ಮಾಡಿಕೊಂಡಿದ್ದಾರೆ ಎಂದರು.

ಪ್ರಶಸ್ತಿ ಪಡೆದವರು

ಕೆಎಸ್‌ಸಿಎ ಮಹಿಳಾ ಲೀಗ್: ಚಾಂಪಿಯನ್ ತಂಡ 'ಯಮುನಾ', ರನ್ನರ್ ಅಪ್ 'ಗಂಗಾ' ತಂಡಕ್ಕೆ ಟ್ರೋಫಿ ನೀಡಲಾಯಿತು. ಯಶೀಕಾ ಕೆ.ಗೌಡ (538 ರನ್) ಉತ್ತಮ ಬ್ಯಾಟರ್, ಜೆ.ದೀಕ್ಷಾ (11 ವಿಕೆಟ್) ಬೌಲರ್ ಪ್ರಶಸ್ತಿ ಪಡೆದರು.

ಪ್ರಶಸ್ತಿ ವಿತರಿಸಿದ ಸಂಸ್ಥೆಯ ಪ್ರಭಾರ ಅಧ್ಯಕ್ಷ ಸಂಜಯ್ ಪೊಲ್ ಮಾತನಾಡಿ, ಕೆಎಸ್‌ಸಿಎ ಸಂಸ್ಥೆ ಬೆಳವಣಿಗೆಗೆ ಮೈಸೂರು ವಲಯದ ಕೊಡುಗೆ ಅಗ್ರಮಾನ್ಯ. ಮೈಸೂರಿನಲ್ಲಿ ವಲಯ ಪಂದ್ಯಗಳು ಮಾತ್ರವಲ್ಲದೆ ದೇಶೀಯ ಆಟಗಳು, ಮಹಾರಾಜ ಟ್ರೋಫಿಯೂ ಸೇರಿದಂತೆ ಎಲ್ಲಾ ಮಾದರಿ ಪಂದ್ಯಗಳು ಆಯೋಜನೆಗೊಳ್ಳುತ್ತಿದೆ. ಆಟಗಾರರಿಗೆ ಉತ್ತಮ ವಾತಾವರಣ ಹಾಗೂ ಉನ್ನತ ಮಟ್ಟದ ಸೌಕರ್ಯಗಳನ್ನೂ ಒದಗಿಸಲಾಗುತ್ತಿದ್ದು, ಇದನ್ನು ಮೇಲ್ದರ್ಜೆಗೇರಿಸಲು ಶ್ರಮಿಸಲಾಗುವುದು ಎಂದು ತಿಳಿಸಿದರು.

ಭಾರತ ತಂಡದಲ್ಲಿ, ರಣಜಿ, ವಿಜಯ ಹಜಾರೆ, ಸೈಯದ್ ಮುಷ್ತಾಕ್ ಆಲಿ ಟ್ರೋಫಿ ಟೂರ್ನಿಗಳಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಕಿಶನ್ ಎಸ್. ಬಿದರೆ, ಎಲ್.ಆರ್.ಚೇತನ್ ಹಾಗೂ ಎಲ್. ಮನ್ವಂತ್ ಕುಮಾರ್ ಅವರು ಪ್ರಶಸ್ತಿ ಸ್ವೀಕರಿಸಿದರು.

ಪ್ರಭಾರ ಖಜಾಂಚಿ ಕೆ.ವಿ.ಮಂಜುನಾಥ ರಾಜು, ಮೈಸೂರು ವಲಯ ಅಧ್ಯಕ್ಷ ಎಸ್.ಬಾಲಚಂದರ್, ಸಂಯೋಜಕ ಆರ್.ಕೆ.ಹರಿಕೃಷ್ಣಕುಮಾರ್, ಮಾಜಿ ಅಧ್ಯಕ್ಷರಾದ ಬ್ರಿಜೇಶ್ ಪಟೇಲ್, ಶ್ರೀರಾಮ್, ಬಿಸಿಸಿಐ ಅಂಪೈರ್ ಬಿ.ಕೆ.ರವಿ, ಸುಧಾಕರ್ ರೈ, ಕೋದಂಡರಾಮ್ ಉಪಸ್ಥಿತರಿದ್ದರು.

ಸನ್ಮಾನ



ಚಾಮರಾಜನಗರ ಎಪಿಎಂಸಿ ಅಧ್ಯಕ್ಷರಾಗಿ ಆಯ್ಕೆಯಾದ ಎಂಬಿ ಗುರುಸ್ವಾಮಿ ಅವರು ಶಾಸಕರಾದ ಕೆ.ಹರೀಶ್ ಗೌಡ, ಕರ್ನಾಟಕ ರಾಜ್ಯ ಪತ್ರಿಕಾ ಮಹಾಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್ ಅವರನ್ನು ಸನ್ಮಾನಿಸಿದರು. ಸಾಹುಕಾರ ಚೆನ್ನಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ ಮತ್ತು ಕಾಂಗ್ರೆಸ್ ಮುಖಂಡರಿದ್ದರು

ಪೊಲೀಸ್ ಸಿಬ್ಬಂದಿ ಲಂಚ ಸ್ವೀಕರಿಸಿದ್ದು ಸಾಬೀತಾದರೆ ಸೇವೆಯಿಂದಲೇ ವಜಾ

● ಗೃಹ ಸಚಿವ ಡಾ. ಪರಮೇಶ್ವರ್ ಮಾಹಿತಿ ● ಬಿಪಿಎಲ್ ನಿವೃತ್ತ ಅಧಿಕಾರಿ ಪುತ್ರಿ ಅಂತ್ಯಸಂಸ್ಕಾರ ವೇಳೆ ಲಂಚಕ್ಕೆ ಬೇಡಿಕೆ; ಶಿಸ್ತು ಕ್ರಮಕ್ಕೆ ಆದೇಶ

ಬೆಂಗಳೂರು, ಅ.31(ಕೆಎಂಶಿ)–ಪೊಲೀಸ್ ಸಿಬ್ಬಂದಿ ಲಂಚ ಪಡೆದಿದ್ದು ಸಾಬೀತಾದರೆ ಅಂತಹವರನ್ನು ಸೇವೆಯಿಂದ ವಜಾ ಮಾಡಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮತ್ತು ಮುಖ್ಯಮಂತ್ರಿ, ಪೊಲೀಸ್ ಅಧಿಕಾರಿಗಳ ಸಭೆಯಲ್ಲೇ ಈ ಕಟ್ಟಾದೇಶ ಮಾಡಿದ್ದೇವೆ. ಕೇವಲ ಗೃಹ ಇಲಾಖೆ ಅಲ್ಲದೆ, ಎಲ್ಲಾ ಸರ್ಕಾರಿ ನೌಕರರಿಗೂ ಈ ನಿಯಮ ಅನ್ವಯ ಆಗಲಿದೆ ಎಂದರು.

ಲಂಚ ಪಡೆದ ಬಗ್ಗೆ ನನಗಾಗಲೀ ಅಥವಾ ಹಿರಿಯ ಅಧಿಕಾರಿಗಳಿಗಾಗಲೀ ಮಾಹಿತಿ ಬಂದ ತಕ್ಷಣ ಅಂತಹ ಸಿಬ್ಬಂದಿಯನ್ನು ಅಮಾನತು ಮಾಡಿ ಇಲಾಖಾ ತನಿಖೆ ನಡೆಸಲಾಗುವುದು.

ತನಿಖೆಯಲ್ಲಿ ಲಂಚ ಪಡೆದಿರುವುದು ಸಾಬೀತಾದರೆ ಸೇವೆಯಿಂದ ವಜಾ ಮಾಡಲಾಗುತ್ತದೆ. ಈಗಾಗಲೇ ಇಂತಹ ಹಲವು ನಿದರ್ಶನಗಳಿವೆ. ಹಲವು ಮಂದಿ ಸರ್ಕಾರಿ ಸೇವೆಯನ್ನೂ ಕಳೆದುಕೊಂಡಿದ್ದಾರೆ ಎಂದರು.

ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಕೆ.ಶಿವಕುಮಾರ್, ತಮ್ಮ ಪುತ್ರಿ ಅಕ್ಷಯಾ ಮೆದುಳು ರಕ್ತಸ್ರಾವದಿಂದ ಬೆಂಗಳೂರಿನಲ್ಲಿ ಮೃತಪಟ್ಟಾಗ ಆಕೆಯ ಮೃತದೇಹ ಸಾಗಿಸಲು ಲಂಚ, ಮರಣೋತ್ತರ ಪರೀಕ್ಷೆ ನಡೆಸಲು ಲಂಚ, ಆಂಬುಲೆನ್ಸ್ ಚಾಲಕ, ಪೊಲೀಸ್, ಸ್ಮಶಾನದ ಸಿಬ್ಬಂದಿಯಿಂದ ಅನುಭವಿಸಿದ ನೋವನ್ನು ತಮ್ಮ ಜಾಲತಾಣ ಖಾತೆಯಲ್ಲಿ ತೋಡಿಕೊಂಡಿದ್ದರು.

ಈ ಘಟನೆ ಹಿನ್ನೆಲೆಯಲ್ಲಿ ಪೊಲೀಸ್ ಮಹಾನಿರ್ದೇಶಕರಿಗೆ ಲಂಚ ಪಡೆಯುವುದನ್ನು ತಡೆಯುವ ಮತ್ತು ಲಂಚ ಪಡೆದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಇಂದೂ ಸಹ ಸೂಚಿಸಿದ್ದೇನೆ. ಪೊಲೀಸ್ ಸಿಬ್ಬಂದಿ ಲಂಚ ಪಡೆದರೆ ತಕ್ಷಣವೇ ಹಿರಿಯ ಅಧಿಕಾರಿಗಳು ಅಥವಾ ನಮ್ಮ ಗಮನಕ್ಕೆ ತನ್ನಿ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ.

ಸಾರ್ವಜನಿಕರೂ ಸಹ ಗೃಹ ಇಲಾಖೆ ಜೊತೆ ಸೌಹಾರ್ದ ಸಂಬಂಧ ಇಟ್ಟುಕೊಂಡರೆ ಇಂತಹ ಘಟನೆಗಳನ್ನು ತಡೆಯಬಹುದಾಗಿದೆ ಎಂದರು.

ಒಳ ಮೀಸಲಾತಿಗೆ ಅನುಮೋದನೆ: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೀಡಿರುವ ವರದಿ ಮೇಲೆ, ಪರಿಶಿಷ್ಟ ಸಮುದಾಯದ ಸಂಖ್ಯೆ ಆಧರಿಸಿ ಸರ್ಕಾರ ಒಳಮೀಸಲಾತಿಗೆ ಅನುಮೋದನೆ ನೀಡಿದೆ.

ಸುಗ್ರೀವಾಜ್ಞೆ ಮೂಲಕ ಸರ್ಕಾರಿ ಆದೇಶ ಅನುಷ್ಠಾನಗೊಳಿಸಬೇಕು. ಇದಕ್ಕೂ ಮುನ್ನ ಕಾನೂನು ತೊಡಕುಗಳನ್ನು ಸರಿಪಡಿಸಲು ಕಾನೂನು ವಿಭಾಗ ಕ್ರಮ ಕೈಗೊಳ್ಳುತ್ತಿದೆ.

ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ಅನುಷ್ಠಾನ ಕುರಿತು ಚರ್ಚಿಸಿ ಎಲ್ಲರಿಗೂ ಸರ್ಕಾರ ಹಕ್ಕು ದೊರಕಿಸಲಿದೆ ಎಂದರು.

ಮಹಿಳೆಯೊಟ್ಟಿಗೆ ಅಸಭ್ಯ ವರ್ತನೆ; ಗೂಸಾ ನೀಡಿ ಪೊಲೀಸರ ವಶಕ್ಕೆ

ಮೈಸೂರು, ಅ.31– ಮಹಿಳೆಯೊಬ್ಬರ ಮೈಮುಟ್ಟಿ ಅಸಭ್ಯವಾಗಿ ವರ್ತಿಸಿದ ವ್ಯಕ್ತಿಗೆ ಗೂಸಾ ನೀಡಿ, ಪೊಲೀಸರಿಗೆ ಒಪ್ಪಿಸಿರುವ ಘಟನೆ ನಗರದ ಸಬರ್ಬನ್ ಬಸ್ ನಿಲ್ದಾಣದ ಬಳಿ ನಡೆದಿದೆ.

ಮೈಸೂರಿನ ಮಹಿಳೆಯೊಬ್ಬರು ಮೊನ್ನೆ ಗ್ರಾಮಾಂತರ ಬಸ್ ನಿಲ್ದಾಣದ ಪ್ರೀಪೇಯ್ಡ್ ಆಟೋ ನಿಲ್ದಾಣದ ಬಳಿ ನಡೆದು ಹೋಗುವಾಗ ಎದುರಿನಿಂದ ಬಂದ ವ್ಯಕ್ತಿ, ಏಕಾಏಕಿ ಆಕೆಯ ಮೈಮುಟ್ಟಿ ಅಸಭ್ಯವಾಗಿ ವರ್ತಿಸಿದ್ದಾನೆ. ಇದರಿಂದ ಆಘಾತಕ್ಕೊಳಗಾದ ಮಹಿಳೆ ಹೊಡೆದಿದ್ದಾರೆ. ಆಗ ಆತ ಓಡಿ ಹೋಗಲು ಯತ್ನಿಸಿದಾಗ ಆಟೋ ಚಾಲಕರು ಆತನನ್ನು ಹಿಡಿದು, ಪೊಲೀಸರಿಗೆ ಒಪ್ಪಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಮ್ಯಾನೇಜರ್ : ಇವತ್ತಿನ ಪೇಪರ್ ಎಲ್ಲೋ?
ನೌಕರ : ಅದನ್ನು ನಿನ್ನೆಯಿಂದ ಹುಡುಕುತ್ತಿದ್ದೇನೆ ಸಾರ್ ಸಿಗ್ತಾನೆ ಇಲ್ಲ!

ಮೈಸೂರು ಮಿತ್ರ

ಶನಿವಾರ, 1 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಇರುವವನಿಗೆ ಕೂಡಿಡುವಾಸೆ, ಇರದವನಿಗೆ ನೀಡುವಾಸೆ.

– ಕಿಶೋರ್ ಎಂ.ಎನ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಸಹ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

■ ಸಮರ್ಥರಿಗೆ ಸಿಕ್ಕ ರಾಜ್ಯೋತ್ಸವ ಪ್ರಶಸ್ತಿ, ಆದರೆ..?

ಮಾನ್ಯರೆ,

2025ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸದಿರುವ ಶೇ.80 ರಷ್ಟು ಅರ್ಹರನ್ನು ಗುರುತಿಸಿರುವುದು ಮೆಚ್ಚುವಂತಹದ್ದು. ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮಹತ್ತರವಾದ ಸೇವೆ ಮಾಡಿರುವ ಅಸಂಖ್ಯಾ ವ್ಯಕ್ತಿಗಳು ಎಲೆಮರೆಯಲ್ಲಿದ್ದಾರೆ. ಬಹಳಷ್ಟು ಮಂದಿಯು ನನಗೆ ಪ್ರಶಸ್ತಿ ಕೊಡಿ ಎಂದು ಅರ್ಜಿ ಸಲ್ಲಿಸುವ ಮನಸ್ಥಿತಿಯನ್ನು ಹೊಂದಿರುವುದಿಲ್ಲ. ಮುಂದಿನ ದಿನಗಳಲ್ಲೂ ಅರ್ಜಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸದೆ ಇದೇ ನಡೆಯನ್ನು ಅನುಸರಿಸಲಿ. ಆಗ ಮಾತ್ರ ನಿಜವಾದ ಸಾಧಕರನ್ನು ಗೌರವಿಸಲು ಸಾಧ್ಯವಾಗುವುದು. ಮೈಸೂರು ಜಿಲ್ಲೆಯಿಂದ ಆಯ್ಕೆ ಆಗಿರುವ ಅಂಶಿಪ್ರಸನ್ನ ಕುಮಾರ್, ಎಲ್. ಮಹದೇವಪ್ಪ, ಕೆ.ರಾಮಮೂರ್ತಿರಾವ್, ಎನ್.ಎಸ್.ರಾಮೇಗೌಡ, ಎಂ. ಯೋಗೇಂದ್ರ ಮತ್ತು ಎಲ್.ಹೇಮಾಶೇಖರ್ ಅವರಿಗೆ ಅಭಿನಂದನೆಗಳು, ಇವರೆಲ್ಲರೂ ಶೇ.100ರಷ್ಟು ಅರ್ಹರು. ಪ್ರಶಸ್ತಿ ಪಡೆದ ಪಟ್ಟಿಯಲ್ಲಿ ಎಲ್ಲಾ ಜಾತಿ ಧರ್ಮಗಳಿಗೆ ಸೇರಿದ ಮಹನೀಯರಿದ್ದಾರೆ. ಇದು ಸಮಾನತೆಯನ್ನು ಸಾರಿದ ರಾಜ್ಯೋತ್ಸವ ಪ್ರಶಸ್ತಿ ಆಗಿದೆ ಎನ್ನಬಹುದು.

ಪ್ರಶಸ್ತಿ ಪಡೆದವರಲ್ಲಿ ಕೆಲವರು ಸಾರ್ವಜನಿಕ ಸೇವೆ ಅಥವಾ ಕಲಾ ಸೇವೆಯಲ್ಲಿಯೇ ತೊಡಗಿಸಿಕೊಂಡು ಆರ್ಥಿಕವಾಗಿ ತೀರಾ ಹಿಂದುಳಿದವರಿರುತ್ತಾರೆ. ಜೀವನ ನಿರ್ವಹಣೆಗೂ ಕಷ್ಟಪಡುತ್ತಿರುವವರು ಇರಬಹುದು. ಅಂಥಹವರನ್ನು ಗುರುತಿಸಿ ಅವರಿಗೆ ಸರ್ಕಾರವು ಶಾಶ್ವತ ನೆಲೆಯನ್ನು ನೀಡಿದರೆ ಕೊಡುವ ಪ್ರಶಸ್ತಿಗಿಂತಲೂ ಉತ್ತಮ. ಮೊನ್ನೆಯಷ್ಟೆ ಹಿರಿಯ ಸಾಹಿತಿ ಹರಿಹರಪ್ರಿಯರವರು ಸಂಕಷ್ಟದಲ್ಲಿ ಸರ್ಕಾರವು ನೆರವಿಗೆ ಬರಲಿಲ್ಲವೆಂದು ಹಿಂದೆ ಪಡೆದಿದ್ದ ರಾಜ್ಯೋತ್ಸವ ಪ್ರಶಸ್ತಿಯೊಂದಿಗೆ ಇತರೆ ನೂರಾರು ಪ್ರಶಸ್ತಿಗಳನ್ನು ಗುಡ್ಡೆ ಹಾಕಿ ಬೆಂಕಿ ಹಚ್ಚಿ ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಅವರ ಸಾಧನೆಯನ್ನು ತಿಳಿದ ಸಾಹಿತ್ಯಪ್ರಿಯರಿಗೆ ಇದೊಂದು ಅಘಾತಕಾರಿ ಸುದ್ದಿ. ನನ್ನ ಕಳಕಳಿ ಎಂದರೆ ಮುಂದಿನ ದಿನಗಳಲ್ಲಿ ಇಂತಹ ಪ್ರಸಂಗಗಳು ಮರುಕಳಿಸದಂತೆ ಬದುಕು ನಡೆಸುವುದಕ್ಕೂ ಕಷ್ಟ ಪಡುವ ಸಾಧಕರನ್ನು ಗುರುತಿಸಿ ಮಾಸಿಕ ವೇತನ ಮತ್ತು ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಭರಿಸುವಂತಾಗಲಿ, ಇಲ್ಲವಾದಲ್ಲಿ ಇಂದು ಪ್ರಶಸ್ತಿಗಳನ್ನು ಸುಟ್ಟವರು ಇದಕ್ಕೂ ಮೀರಿದ ರೀತಿಯಲ್ಲಿ ತಮ್ಮ ಬೇಸರವನ್ನು ವ್ಯಕ್ತಪಡಿಸಬಹುದು!. ಬಡವನ ಕೋಪ ದವಡೆಗೆ ಮೂಲ, ಸಾಹಿತಿಗಳ ಬೇಸರ ಪ್ರಕಟಿಸುವ ಕೃತಿಗಳಿಗೆ ಮೂಲ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಮಾತೃ ಭಾಷೆ ಪ್ರೀತಿ ನವೆಂಬರ್‌ಗೆ ಸೀಮಿತವಾಗಬಾರದು

ಮಾನ್ಯರೇ,

ಒಂದು ಕಾಲದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದುಗೂಡಿಸಿ, ಮೈಸೂರು ರಾಜ್ಯಕ್ಕೆ (ನಂತರ ಕರ್ನಾಟಕ) ರೂಪ ಕೊಟ್ಟ ಹಿರಿಯ ಚೇತನಗಳನ್ನು ನಾವು ಮರೆಯುವಂತಿಲ್ಲ. ಆಲೂರು ವೆಂಕಟರಾಯರು, ಕೆಂಗಲ್ ಹನುಮಂತಯ್ಯನವರು, ದ.ರಾ.ಬೇಂದ್ರೆಯವರು, ಕುವೆಂಪು ಅವರಂತಹ ಮಹನೀಯರು ಸಾಹಿತ್ಯ, ಹೋರಾಟ ಮತ್ತು ಆಡಳಿತದಲ್ಲಿ ಕನ್ನಡಕ್ಕೆ ನೀಡಿದ ಕೊಡುಗೆ ಅಸಾಮಾನ್ಯ. ಅವರ ದೂರದೃಷ್ಟಿ ಮತ್ತು ಕನ್ನಡಾ ಭಿಮಾನದ ಫಲವಾಗಿ ಇಂದು ನಾವು "ಸಾವಿರದ ನದಿಗಳು ಹರಿದು ಬರುವ ಮಹಾ ಕಡಲು" ಎನಿಸಿರುವ ಕರ್ನಾಟಕದಲ್ಲಿ ಬದುಕುತ್ತಿದ್ದೇವೆ. ಹಲ್ಮಿಡಿ ಶಾಸನ ದಿಂದ ಆರಂಭಗೊಂಡು, ಜ್ಞಾನಪೀಠ ಪ್ರಶಸ್ತಿಗಳ ಗರಿಮೆಯವರೆಗೆ ಕನ್ನಡದ ಹಿರಿಮೆ ಅಜರಾಮರ.

ದುರದೃಷ್ಟವಶಾತ್, ಇಂತಹ ಶ್ರೀಮಂತ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿರುವ ನಮ್ಮ ನಡುವೆಯೇ, 'ಕನ್ನಡ ಬಂದರೂ ಮಾತನಾಡಲು ಹಿಂಜರಿಯುವ' ಮನಸ್ಥಿತಿ ಬೆಳೆಯುತ್ತಿರುವುದು ಆತಂಕಕಾರಿ. ಆಂಗ್ಲಭಾಷಾ ವ್ಯಾಮೋಹ ಕನ್ನಡಿಗರನ್ನು ಅವರದೇ ಮಾತೃಭಾಷೆಯಿಂದ ದೂರ ಮಾಡುತ್ತಿದೆ. 'ಇಂಗ್ಲಿಷ್ ಕಲಿತರೆ ಮಾತ್ರ ಉತ್ತಮ ಉದ್ಯೋಗ, ಪ್ರತಿಷ್ಠೆ' ಎಂಬ ಭ್ರಮೆ ಸಮಾಜದಲ್ಲಿ ಆಳವಾಗಿ ಬೇರೂರಿದೆ. ನಗರ ಪ್ರದೇಶಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಕನ್ನಡಿಗರೇ ತಮ್ಮ ನಡುವೆ ಕನ್ನಡದಲ್ಲಿ ಮಾತನಾಡಲು 'ಕೀಳರಿಮೆ' ಅಥವಾ 'ಪ್ರತಿಷ್ಠೆ'ಯಿಂದ ಹಿಂಜರಿಯುತ್ತಿರುವುದು ದುರಂತ. ಜ್ಞಾನಾರ್ಜನೆಗೆ ಯಾವುದೇ ಭಾಷೆ ಅಡ್ಡಿಯಾಗಬಾರದು ನಿಜ. ಆದರೆ, ಬೇರೆ ಭಾಷೆಯ ಮೋಹಕ್ಕೆ ಬಿದ್ದು ಮಾತೃಭಾಷೆಯನ್ನು ಕಡೆಗಣಿಸುವುದು, ನಮ್ಮ ಅಸ್ಮಿತೆಯನ್ನೇ ಕಳೆದುಕೊಂಡಂತೆ.

70ನೇ ಕನ್ನಡ ರಾಜ್ಯೋತ್ಸವದ ಈ ಹೊತ್ತಿನಲ್ಲಿ, ಪ್ರತಿಯೊಬ್ಬ ಕನ್ನಡಿಗನೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಮನೆ, ಕಚೇರಿ ಮತ್ತು ಸಾರ್ವಜನಿಕ ಜೀವನದಲ್ಲಿ ಕನ್ನಡವನ್ನು ಬಳಸುವ ಮೂಲಕ, ನಮ್ಮ ಮುಂದಿನ ಪೀಳಿಗೆಗೆ ಕನ್ನಡದ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾತೃಭಾಷೆಯ ಮೇಲಿನ ಪ್ರೀತಿ ಕೇವಲ ನವೆಂಬರ್ 1ಕ್ಕೆ ಸೀಮಿತವಾಗದೆ, ಪ್ರತಿದಿನವೂ ಹರಿಯುವ ಜೀವಂತ ಪ್ರವಾಹವಾಗಬೇಕು.

–ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

■ ನಮ್ಮ ಹೆಮ್ಮೆ ನಂದಿನಿಯ ಉತ್ಪನ್ನಗಳು ಪರಿಶುದ್ಧ

ಮಾನ್ಯರೆ,

ನಮ್ಮ ಹೆಮ್ಮೆ ನಂದಿನಿಯ ಉತ್ಪನ್ನಗಳು ಗುಣಮಟ್ಟದಲ್ಲಿ ಪರಿಶುದ್ಧವಾಗಿದ್ದು, ಹೊರ ರಾಜ್ಯಗಳಿಂದ ಸರಬರಾಜಾಗುತ್ತಿರುವ ಹಾಲು, ಕೋವಾ, ಪನ್ನೀರ್, ಮಜ್ಜಿಗೆ ನಕಲಿಯಾಗಿರುವುದರಿಂದ, ನಮ್ಮ ನಂದಿನಿಯ ಉತ್ಪನ್ನಗಳನ್ನು ಬಳಸಿ ರೈತರಿಗೆ ನೆರವಾಗಬೇಕು ಎಂದು, ಹೋಟೆಲ್ ಉದ್ಯಮಿಗಳ ಸಮಾಲೋಚನಾ ಸಭೆಯಲ್ಲಿ ಮನವಿ ಮಾಡಿದ ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಅವರ ನಡೆ ಸ್ವಾಗತಾರ್ಹ. ಹೋಟೆಲ್ ಉದ್ಯಮಿಗಳ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು ಮಾತನಾಡಿ ನಂದಿನಿ ಉತ್ಪನ್ನಗಳು ಶ್ರೇಷ್ಠವಾಗಿರುವುದರಿಂದ ನಮ್ಮ ಕೆಲವು ಹೋಟೆಲ್‌ಗಳಲ್ಲಿ ಈಗಾಗಲೇ ಬಳಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿರುವ ಎಲ್ಲಾ ಹೋಟೆಲ್‌ನವರಿಗೂ ಪ್ರೇರೇಪಿಸುವುದಾಗಿ ಹೇಳಿರುವುದು ಶ್ಲಾಘನೀಯ. ನಮ್ಮ ಮಹಾರಾಜರ ಕಾಲದಿಂದಲೂ ತಿರುಪತಿಗೆ ಮೈಸೂರಿನಿಂದಲೇ ಇದುವರೆಗೂ ತುಪ್ಪ ಸರಬರಾಜಾಗುತ್ತಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ನಂದಿನಿ ಉತ್ಪನ್ನಗಳು ಬಳಕೆಯಾದಲ್ಲಿ ನಮ್ಮ ರೈತರಿಗೆ ಬೆಳೆವಣಿಗೆಗೆ ನೆರವಾಗುವುದರಲ್ಲಿ ಸಂಶಯವೇ ಇಲ್ಲ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಕರ್ನಾಟಕದ ಮಹಾಹಬ್ಬ ಕನ್ನಡ ರಾಜ್ಯೋತ್ಸವ



"ನವೆಂಬರ್ ತಿಂಗಳಲ್ಲಿ ಆಚರಿಸಲ್ಪಡುವ ಕನ್ನಡ ರಾಜ್ಯೋತ್ಸವ ಎಂದರಂತೂ ಕನ್ನಡಿಗರ ಹರ್ಷಕ್ಕೆ ಪಾರವೇ ಇಲ್ಲ. ಕನ್ನಡದ ರವಿ ಮೂಡಿ ಬಂದ ಮುನ್ನಡೆವ ಬೆಳಕನ್ನು ತಂದ ರಾಜ್ಯೋತ್ಸವ ನಮ್ಮ ರಾಜ್ಯೋತ್ಸವ... ಎಂಬ ಕವಿ ವಾಣಿಗೆ ಹೆಜ್ಜೆ ಹಾಕುತ್ತಾ, ಅಂದವೋ ಅಂದವು ಕನ್ನಡನಾಡು ಚೆಂದವೋ ಚೆಂದವು ನಮ್ಮಯ ಬೀಡು ಎಂಬ ಕವಿನುಡಿಯನ್ನು ಗುನುಗುತ್ತಾ, ಜೇನಿನ ಹೊಳೆಯೊ ಹಾಲಿನ ಮಳೆಯೊ ಸುಧೆಯೊ ಕನ್ನಡ ಸವಿನುಡಿಯೊ ಎಂಬ ಕವಿ ಸಾಲನ್ನು ಸವಿಯುತ್ತಾ, ಅಪಾರ ಕೀರ್ತಿಗಳಿಸಿ ಮೆರೆವ ಭವ್ಯ ನಾಡಿದು ಕರ್ನಾಟಕವಿದು ನೃತ್ಯ ಶಿಲ್ಪ ಕಲೆಯ ಬೀಡಿದು ಎಂಬ ಕವಿಪದ ವನ್ನು ಆಸ್ವಾದಿಸುತ್ತಾ, ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲಿ ಎಂಬ ಕವಿನುಡಿಯ ಮಾದುರ್ಯದಲಿ ಮೈಮರೆತು ಕನ್ನಡದ ಮಕ್ಕಳೆಲ್ಲ ಒಂದಾಗಿ ಹಿಗ್ಗಿನಿಂದ ಆಚರಿಸುವ ಕನ್ನಡ ಹಬ್ಬದ ಮಹಾ ಉತ್ಸವವಿದು.

ಕನ್ನಡ ನಾಡಿನ ಕರಾವಳಿ! ಕನ್ನಡ ದೇವಿಯ ಪ್ರಭಾವಳಿ..... ಎಂದು ಕನ್ನಡ ದೇವಿಗೆ ಹೊನ್ನ ಪ್ರಭಾವಳಿ ಕಟ್ಟಿ ಹುಮ್ಮಸ್ಸಿನಿಂದ ಸ್ವರಗೈದ ಸು.ರಂ. ಎಕ್ಕುಂಡಿಯವರ ಕನ್ನಡದ ವಾಂಛಲ್ಯ, ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆರೆ ಬಳುಕಿನಲ್ಲಿ! ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ! ನಿತ್ಯೋತ್ಸವ ತಾಯಿ ನಿನಗೆ ನಿತ್ಯೋತ್ಸವ..... ಎಂದು ಹರ್ಷದಿಂದ ಭೋರ್ಗರೆದ ನಿಸಾರ್ ಅಹಮದ್‌ರ ಎದೆಗಡಲ ಕನ್ನಡ ಪಾಂಚಜನ್ಯ, ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ! ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ..... ಎಂದು ಧಮನಿ ಧಮನಿಗಳಲ್ಲಿ ಕನ್ನಡವನ್ನು ತುಂಬಿ ತುಳುಕಿಸಿದ ನಮ್ಮ ಮೊದಲ ರಾಷ್ಟ್ರಕವಿ ಗೋವಿಂದಪೈಯವರ ಕನ್ನಡದ ಮಮಕಾರ, ಕನ್ನಡದ ನೆಲದ ಪುಲ್ಲೆನಗೆ ಪಾವನ ತುಳಸಿ! ಕನ್ನಡ ನೆಲದ ನೀರ್ವೊನಲೆನಗೆ ದೇವನದಿ! ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ..... ಎಂದ್ಹೇಳಿದ ಸಾಲಿರಾಮಚಂದ್ರರಾಯರ ಕನ್ನಡ ಶ್ರೀಕಾರ, ನಮ್ಮ ಉಸುರು ನಮ್ಮ ಕಸುವು ಕನ್ನಡ! ನಮ್ಮ ಹೆಸರು ನಮ್ಮ ಕಸುಬು ಕನ್ನಡ..... ಎಂದು ಎದೆಯುಬ್ಬಿಸಿ ನುಡಿದ ಅಡಿಗರ ಕನ್ನಡ ಓಂಕಾರ, ಕನ್ನಡದ ಬದುಕು ತಲೆಯೆತ್ತಿ ನಿಂತ ಮಂಗಳ ಮುಹೂರ್ತದಲ್ಲಿ! ಮನೆಮನೆಯ ಮುಂದೆ ಮುಂಬೆಳಗಿನಲ್ಲಿ ಸಂತಸದ ರಂಗವಲ್ಲಿ..... ಎಂದು ಹಿರಿಹಿರಿ ಹಿಗ್ಗಿ ಹಾಡಿದ ಕೆ.ಎಸ್. ನರಸಿಂಹಸ್ವಾಮಿಯವರ ಕನ್ನಡ ಝೇಂಕಾರ..... ಕನ್ನಡ ನಾಡಿನ ಅಕ್ಷರಕಣಜದಲ್ಲಿ ತುಂಬಿ ತುಳುಕುವಾಗ ಕನ್ನಡ ಎನೆ ಕುಣಿದಾಡುವ ಕನ್ನಡಿಗರಿಗೆಲ್ಲಾ ದಿನವೂ ದಿವ್ಯ ಸಂಭ್ರಮವೇ! ಕನ್ನಡವೆನ್ನುವುದು ಭವ್ಯ ಹಬ್ಬವೇ!

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕಿದ್ರೂನೆ ಮೂಗ್ನಲ್ ಕನ್ನಡ ಪದವಾಡ್ತೀನಿ... ಎಂದು ಎದೆ ತಟ್ಟಿ ಹೇಳಿದ ಜಿ.ಪಿ. ರಾಜರತ್ನಂರ ಅಪ್ರತಿಮ ಕನ್ನಡಾಭಿಮಾನ, ಒಂದೇ ಒಂದೇ ಕರ್ನಾಟಕ ಒಂದೇ! ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ! ಕರ್ನಾಟಕ ಒಂದೇ! ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ... ಎಂದು ಸಾರಿದ ಬೇಂದ್ರೆಯವರ ಕನ್ನಡದ ಅನನ್ಯ ಪ್ರೇಮ, ಕನ್ನಡ ಎನೆ ಕುಣಿದಾಡುವುದೆನ್ನೆದೆ! ಕನ್ನಡ ಎನೆ ಕಿವಿ ನಿಮಿರುವುದು! ಕಾಮನ ಬಿಲ್ಲನು ಕಾಣುವ ಕವಿಯೊಲು! ತೆಕ್ಕನೆ ಮನ ಮೈ ಮರೆಯುವುದು... ಎಂದು ಹೃದಯ ತುಂಬಿ ನಲಿದ ರಾಷ್ಟ್ರಕವಿ ಕುವೆಂಪು ಅವರ ಎಣೆಯಿಲ್ಲದ ಕನ್ನಡ ಪ್ರೀತಿ, ಹೊತ್ತಿತೋ ಹೊತ್ತಿತು ಕನ್ನಡದ ದೀಪ! ಮುಗಿಯಿತೋ ಮುಗಿಯಿತೋ ಶತಮಾನಗಳ ಶಾಪ... ಎಂದು ಉತ್ಸಾಹದಿಂದ ಉಲಿದ ಕಾವ್ಯಾನಂದರ ಕನ್ನಡದ ಒಲುಮೆ, ನನ್ನ ಕನ್ನಡ ನುಡಿಯೆ ನೀನೆಷ್ಟು ಚೆಂದ! ಏನು ಗೀಚಿದರು ಆಗುವುದು ಶ್ರೀಗಂಧ! ಸಿಂಗಾರದ ಗಣಿ ನಿನ್ನ ಶಬ್ದ ಸಂಪತ್ತು ಬಂಗಾರಕ್ಕಿಂತಲೂ ಶ್ರೇಷ್ಠ ನುಡಿಮುತ್ತು... ಎಂದು ಆನಂದಿಸಿದ ದಿನಕರ ದೇಸಾಯಿ ಅವರ ಎದೆಯಾಳದ ಕನ್ನಡದ ನಲ್ಮೆ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು! ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು... ಎಂದು ಹಾಡಿ ಕುಣಿದ ಡಾ|| ರಾಜ್‌ಕುಮಾರ್ ಅವರ ಅಪೂರ್ವ ಕನ್ನಡ ಭಕ್ತಿ, ಕನ್ನಡವೇ ನಮ್ಮಮ್ಮ! ಅವಳಿಗೆ ಕೈ ಮುಗಿಯಮ್ಮ ಮಾತಾಡೋ ದೇವರಿವಳು... ಎಂದು ಹಾಡಿ ಕುಣಿದು ಕುಪ್ಪಳಿಸಿದ ಡಾ. ವಿಷ್ಣುವರ್ಧನ್‌ರ ಕನ್ನಡದ ಶಕ್ತಿ, ನರ ನರವನೆಲ್ಲ ಹುರಿಗೊಳಿಸಿ ಹೊಸೆದು! ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ! ಹಚ್ಚೇವು ಕನ್ನಡದ ದೀಪ..... ಎಂದು ಎಲ್ಲರೆದೆ ತುಂಬ ಕನ್ನಡದ ಬೆಳಕು ಚೆಲ್ಲಿದ ಡಿ.ಎಸ್. ಕರ್ಕಿಯವರ ಅನಂತ ಕನ್ನಡಾಭಿಮಾನ ಆನಂತಾನಂತವಾಗಿ ತುಂಬಿರುವ ಕರ್ನಾಟಕದಲ್ಲಿ ಕನ್ನಡವೆಂದರೆ ಅಭಿಮಾನಿಸುವವರಿಗೆ ನಿತ್ಯವೂ ಹಬ್ಬವೆ!

ನವೆಂಬರ್ ತಿಂಗಳಲ್ಲಿ ಆಚರಿಸಲ್ಪಡುವ ಕನ್ನಡ ರಾಜ್ಯೋತ್ಸವ ಎಂದರಂತೂ ಕನ್ನಡಿಗರ ಹರ್ಷಕ್ಕೆ ಪಾರವೇ ಇಲ್ಲ. ಕನ್ನಡದ ರವಿ ಮೂಡಿ ಬಂದ ಮುನ್ನಡೆವ ಬೆಳಕನ್ನು ತಂದ ರಾಜ್ಯೋತ್ಸವ ನಮ್ಮ ರಾಜ್ಯೋತ್ಸವ... ಎಂಬ ಕವಿ ವಾಣಿಗೆ ಹೆಜ್ಜೆ ಹಾಕುತ್ತಾ, ಅಂದವೋ ಅಂದವು ಕನ್ನಡನಾಡು ಚೆಂದವೋ ಚೆಂದವು ನಮ್ಮಯ ಬೀಡು ಎಂಬ ಕವಿನುಡಿಯನ್ನು ಗುನುಗುತ್ತಾ, ಜೇನಿನ ಹೊಳೆಯೊ ಹಾಲಿನ ಮಳೆಯೊ ಸುಧೆಯೋ ಕನ್ನಡ ಸವಿನುಡಿಯೋ ಎಂಬ ಕವಿ ಸಾಲನ್ನು ಸವಿಯುತ್ತಾ, ಅಪಾರ ಕೀರ್ತಿಗಳಿಸಿ ಮೆರೆವ ಭವ್ಯ ನಾಡಿದು ಕರ್ನಾಟಕವಿದು ನೃತ್ಯ ಶಿಲ್ಪ ಕಲೆಯ ಬೀಡಿದು ಎಂಬ ಕವಿಪದವನ್ನು ಆಸ್ವಾದಿಸುತ್ತಾ, ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲಿ ಎಂಬ ಕವಿನುಡಿಯ ಮಾದುರ್ಯದಲ್ಲಿ ಮೈಮರೆತು ಕನ್ನಡದ ಮಕ್ಕಳೆಲ್ಲ ಒಂದಾಗಿ ಹಿಗ್ಗಿನಿಂದ ಆಚರಿಸುವ ಕನ್ನಡ ಹಬ್ಬದ ಮಹಾ ಉತ್ಸವವಿದು.

ಏಕೀಕೃತ ಕನ್ನಡ ನಾಡು ಉದಯವಾದದ್ದು 1956 ರ ನವೆಂಬರ್ ಒಂದರಂದು. ಕರ್ನಾಟಕ ಎಂದು ನಾಮಕರಣವಾದದ್ದು 1973 ರ ನವೆಂಬರ್ ಒಂದರಂದೇ. ಇದರ ಸವಿನೆನಪಿಗೆ ಪ್ರತಿ ವರ್ಷ ನವೆಂಬರ್ ಒಂದರಿಂದ ಇಡೀ ತಿಂಗಳು ಪೂರ್ತಿ ಕನ್ನಡಿಗರು ಅಭಿಮಾನದಿಂದ ಆಚರಿಸಲ್ಪಡುವ ನಾಡಹಬ್ಬವೇ ಕನ್ನಡ ರಾಜ್ಯೋತ್ಸವ.

ಕನ್ನಡಿಗರ ಕೆಚ್ಚೆದೆಯ ಹೋರಾಟದ ಫಲವಾಗಿ 1956ರ ನವೆಂಬರ್ ಒಂದರಂದು ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಕನ್ನಡ ಪ್ರದೇಶಗಳೆಲ್ಲವೂ ಒಂದಾದರೂ 'ಕವಿರಾಜ ಮಾರ್ಗ'ದ ಶ್ರೀ ವಿಜಯ ಮೊದಲ್ಗೊಂಡು ನಾಡಿನ ಸಾಹಿತಿಗಳ, ಕಲಾವಿದರು, ಹೋರಾಟ ಗಾರರ ಆಶಯದ ಕರ್ನಾಟಕ ರಾಜ್ಯ ಎಂಬ ಹೆಸರು ಮಾತ್ರ ಆಗಲೇ ಇಲ್ಲ. ಆದರೆ ಮುಂದೆ ಕನ್ನಡ ನಾಡು ಏಕೀಕರಣ ಗೊಂಡ ಹದಿನೇಳು ವರ್ಷಗಳ ನಂತರ ದೇವರಾಜ ಅರಸು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಅವರ ವಿಶೇಷ ಕಾಳಜಿಯಿಂದಾಗಿ 1973ರ ನವೆಂಬರ್ ಒಂದರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಲಾಯಿತು. ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂದು ಆಗ ಚೆನ್ನವೀರ ಕಣವಿಯವರ ಕವಿಹೃದಯ ಹಾಡಿತ್ತು.

ಕನ್ನಡ ನಾಡು ಏಕೀಕರಣಗೊಂಡ ವರ್ಷವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಕರ್ನಾಟಕವು ಅಧಿಕೃತವಾಗಿ ಸ್ಥಾಪನೆಗೊಂಡು ಆರೂವರೆ ದಶಕಗಳು ತುಂಬಿತ್ತಾದರೂ ಕರ್ನಾಟಕ ಭೂ ಪ್ರದೇಶಕ್ಕೆ ಅದರದೇ ಆದ ಸಹಸ್ರಾರು ವರ್ಷಗಳ ಇತಿಹಾಸವಿದೆ. ಕರ್ನಾಟಕದ ಸಾರ್ವಭೌಮ ಭಾಷೆಯಾದ ಕನ್ನಡಕ್ಕೂ ಅಷ್ಟೇ.

1856ರ ಸುಮಾರಿಗೇ ಕರ್ನಾಟಕ ಏಕೀಕರಣದ ಕೂಗು ಕೇಳಿ ಬಂದಿತ್ತಾದರೂ ಅದು ಕಾವು ಪಡೆದುಕೊಂಡದ್ದು 1900ರ ನಂತರವಷ್ಟೆ ಏಕೀಕರಣ ಚಳವಳಿಯಲ್ಲಿ ಮೊದಲು ಗುರುತಿಸಿಕೊಂಡವರು ಡೆಪ್ಯುಟಿ ಚೆನ್ನಬಸಪ್ಪನವರು. 1856ಕ್ಕಿಂತ ಮೊದಲೇ ಅವರು ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಮಾಧ್ಯಮ ಶಿಕ್ಷಣಕ್ಕಾಗಿ ಚಳವಳಿ ನಡೆಸಿದ್ದರು. 1858 ರಲ್ಲೇ ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವ ಸಲಹೆಯನ್ನು ಜಾನ್ ಬ್ರೈಟ್ ಎಂಬಾತ ಬ್ರಿಟಿಷ್ ಪಾರ್ಲಿಮೆಂಟಿಗೆ ನೀಡಿದ್ದ. 1890 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರ ಸಾರಥ್ಯದಲ್ಲಿ ಕರ್ನಾಟಕ ಏಕೀಕರಣ ಚಳವಳಿಗೆ ಹೊಸ ಹುರುಪು ಬರುವಂತೆ ಮಾಡಿತ್ತು.

1924 ರಲ್ಲಿ ಬೆಳಗಾವಿಯಲ್ಲಿ ಜರುಗಿದ ಮುಂಬೈ ಕರ್ನಾಟಕ ಪ್ರತ್ಯೇಕ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮೊದಲ ಏಕೀಕರಣ ಅಧಿವೇಶನ ಸಿದ್ದಪ್ಪಕಂಬಳಿ ಅಧ್ಯಕ್ಷತೆಯಲ್ಲಿ ನಡೆದು ರಾಜ್ಯಾದ್ಯಂತ ಬಂದಿದ್ದ ಸಾವಿರಾರು ಜನರ ಬೆಂಬಲವನ್ನು ಗಳಿಸಿತ್ತು. ಈ ಅಧಿವೇಶನದಲ್ಲೇ ಹುಯಿಲುಗೋಳ ನಾರಾಯಣರು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು... ಎಂಬ ಆಶಯಗೀತೆಯನ್ನು ಅಭಿಮಾನದಿಂದ ಹಾಡಿದ್ದು. ಏಕೀಕರಣ ಚಳವಳಿಗಾರರಿಗೆ ಸ್ಫೂರ್ತಿಯ ಸೆಲೆಯಾದದ್ದು. ನಂತರ ಏಕೀಕರಣ ಚಳವಳಿ ತೀವ್ರತರದಲ್ಲಿ ತೆರೆದುಕೊಳ್ಳುತ್ತಿದ್ದಂತೆ 1929 ರಲ್ಲಿ ಸೈಮನ್ ಕಮೀಷನರ್‌ಗೆ ಮನವಿ, 1931 ರಲ್ಲಿ ದುಂಡುಮೇಜಿನ ಸಮ್ಮೇಳನದಲ್ಲಿ ಬೆನಗಲ್ ರಾಮರಾಯ, ಮಿರ್ಜಾ ಇಸ್ಮಾಯಿಲ್ ಮುಂತಾದವರ ಚರ್ಚೆ, 1946 ರಲ್ಲಿ ಎಸ್. ನಿಜಲಿಂಗಪ್ಪ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಮಹಾಸಮಿತಿ ರಚನೆ, ಅಂದಾನಪ್ಪದೊಡ್ಡಮೇಟಿ ಮತ್ತು ಮಂಗಳವೇಡಶ್ರೀನಿವಾಸರಾಯರು ಈ ಸಮಿತಿಯಲ್ಲಿ ಕಾರ್ಯದರ್ಶಿಗಳಾಗಿದ್ದರು. 1947ರ ಡಿಸೆಂಬರ್‌ನಲ್ಲಿ ಕಾಸರಗೋಡಿನಲ್ಲಿ ರಂಗನಾಥ ದಿವಾಕರರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ, 1948ರಲ್ಲಿ ಮೈಸೂರು ವಿಧಾನಸಭೆಯು ಕನ್ನಡ ಪ್ರದೇಶಗಳನ್ನೆಲ್ಲಾ ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಬೇಕೆಂಬ ಗೊತ್ತುವಳಿ ಅಂಗೀಕಾರ, ಈ ನಡುವೆ 1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಘೋಷಣೆ. 1948ರ ಸೆಪ್ಟೆಂಬರ್ 17ರಂದು ಹೈದರಾಬಾದ್ ಕರ್ನಾಟಕಕ್ಕೆ ನಿಜಾಮರ ದುರಾಡಳಿತದಿಂದ ಮುಕ್ತಿ.

1951ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಆಶ್ವಾಸನೆಯನ್ನು ಈಡೇರಿಸದ ಕಾಂಗ್ರೆಸ್ ವಿರುದ್ಧ ಪ್ರತಿರೋಧದ ಅಲೆ, 1953ರ ಡಿಸೆಂಬರ್ 29ರಂದು ಕೇಂದ್ರ ಸರ್ಕಾರದಿಂದ ಎಸ್.ಫಜಲ್ ಆಲಿ ನೇತೃತ್ವದಲ್ಲಿ ರಾಜ್ಯ ಪುನರ್ವಿಂಗಡಣಾ ಸಮಿತಿ ರಚನೆ, 1955ರ ಸೆಪ್ಟೆಂಬರ್ 30ರಂದು ಆಯೋಗದ ವರದಿ ಸಲ್ಲಿಕೆ. 1956ರ ನವೆಂಬರ್ 1ರಂದು ಈ ಸಮಿತಿಯ ಆದೇಶದಂತೆ 19 ಜಿಲ್ಲೆಗಳೊಡನೆ ಮೈಸೂರು ರಾಜ್ಯ ಉದಯ. ನಂತರ ಸಾಹಿತಿಗಳು, ಚಳವಳಿಗಾರರು, ಕಲಾ ವಿದರು ಒಟ್ಟಾರೆ ಕನ್ನಡಿಗರೆಲ್ಲರ ಆಶಯದಂತೆ 1973ರ ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕದ ನಾಮಕರಣ.

ಹೀಗೆ ಹೆಸರಾದ ಕರ್ನಾಟಕದ ಇತಿಹಾಸದೊಳಗೆ ಇಣುಕಿದರೆ ಇದರ ಚರಿತ್ರೆಯೇ ಒಂದು ರಸ ರೋಮಾಂಚನವೆನಿಸುತ್ತದೆ. ಕರ್ನಾಟಕವೆಂದರೆ ಕಪ್ಪು ಮಣ್ಣಿನ ನಾಡು, ಕಮ್ಮಿತ್ತುನಾಡು, ಎಂದರೆ ಕಂಪನ್ನುಳ್ಳ (ಶ್ರೀಗಂಧದ) ನಾಡು ಎಂಬುದೇ ಕರ್ನಾಟಕ. ಕರುನಾಡು ಅಥವಾ ಎತ್ತರದ ಭೂಮಿ ಇರುವ ನಾಡು ಕರ್ನಾಟಕ ಆಗಿದೆ ಎನ್ನುವುದೂ ಉಂಟು.

ಕಾವೇರಿಯಿಂದ ಮಾ ಗೋದಾವರಿ
ವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂವಸು
ಧಾವಲಯ ವಿಲೀನ ವಿಶದ ವಿಶೇಷಂ॥

ಕನ್ನಡದ ಮೊದಲ ಗ್ರಂಥವಾದ ಕವಿರಾಜ ಮಾರ್ಗದಲ್ಲಿನ ಈ ನುಡಿಮುತ್ತುಗಳು ಕರ್ನಾಟಕದ ಐತಿಹಾಸಿಕ ಉದ್ದಗಲವನ್ನು ಸ್ಥೂಲವಾಗಿ ತಿಳಿಸುತ್ತದೆ. ಕನ್ನಡಿಗರ ನೆಲೆಬೀಡು ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿತನಕ ವ್ಯಾಪಿಸಿತ್ತೆಂಬುದನ್ನು ಇದು ಸಾಕ್ಷೀಕರಿಸುತ್ತದೆ. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಕನ್ನಡ ಭಾಷಿಕರು ನೆಲೆಸಿದ್ದ ಪ್ರದೇಶ ಅರ್ಥಾತ್ ಕನ್ನಡ ನಾಡಿನ ವ್ಯಾಪ್ತಿ ಕರ್ನಾಟಕ ರಾಜ್ಯ ಈಗಿರುವುದಕ್ಕಿಂತಲೂ ಮೂರು ಪಟ್ಟು ಹೆಚ್ಚಿತ್ತು. ಹದಿಮೂರು ಕನ್ನಡ ಜಿಲ್ಲೆಗಳನ್ನು ನಾವು ಏಕೀಕರಣದ ಸಮಯದಲ್ಲಿ ಕಳೆದುಕೊಂಡಿದ್ದೇವೆ. ಇದನ್ನು ಖ್ಯಾತ ಸಂಶೋಧಕ, ಸಾಹಿತಿ ಡಾ. ಚಿದಾನಂದಮೂರ್ತಿಯವರು ಆಧಾರ ಸಹಿತವಾಗಿ ನೋವಿನಿಂದಲೇ ಹೇಳುತ್ತಾರೆ. ಒಂದು ಕಾಲದಲ್ಲಿ ಕನ್ನಡ ನಾಡು ವ್ಯಾಪಿಸಿದ್ದ ಬೃಹತ್ ವ್ಯಾಪ್ತಿಯನ್ನು ನೆನಪಿಸಿಕೊಂಡರೆ ಹೆಮ್ಮೆಯಾಗುತ್ತದೆ. ಹಾಗೆಯೇ ಅಂಥಹ ಅಚ್ಚ ಕನ್ನಡ ಪ್ರದೇಶಗಳನ್ನು ಕಳೆದುಕೊಂಡಿರುವುದಕ್ಕೆ ದುಃಖವೂ ಆಗುತ್ತದೆ. ಸದ್ಯ ಈಗ ಉಳಿದಿರುವ ಕನ್ನಡದ ನೆಲವನ್ನು ಮತ್ತೆ ಕಳೆದುಕೊಳ್ಳದೆ ಉಳಿಸಿಕೊಳ್ಳುವಂತೆ ಕನ್ನಡಿಗರಾದ ನಾವೆಲ್ಲ ಜಾಗೃತಗೊಳ್ಳಬೇಕಾಗಿದೆ.

ಅದಕ್ಕಾಗಿಯೇ ಕಯ್ಯಾರಕಿಞ್ಞಣ್ಣರೈಯವರು ಬೆಂಕಿ ಬಿದ್ದಿದೆ ಮನೆಗೆ ಓ ಬೇಗನೆ ಬನ್ನಿ, ಎಲ್ಲರೂ ಎದ್ದೆದ್ದು ಓಡಿ ಬನ್ನಿ, ಕನ್ನಡದ ಗಡಿಕಾಯೆ, ಗುಡಿಕಾಯೆ, ನುಡಿಕಾಯೆ, ಕಾಯಲಾರೆನೆ ಸಾಯೆ... ಎಂದು ಬಹಳ ಹಿಂದೆಯೇ ಕನ್ನಡದ ಮನೆಗೆ ಬೆಂಕಿ ಬಿದ್ದಿದೆ ಎಂದು ಎಚ್ಚರಿಸಿದ್ದಾರೆ. ಹಾಗೆಯೇ ಕನ್ನಡ ಜನವಲ್ಲದೆ ಕನ್ನಡವನು ಉಳಿಸುವರಾರೈ, ಬೆಳೆಸುವರಾರೈ, ಬಳಸುವರೂ ತಾವಾರಿಹರೈ... ಎಂದು ಎಂದೋ ಪು.ತಿ.ನ. ಹೇಳಿದ್ದಾರೆ. ಅಂತೆಯೇ ತಿ.ನಂ.ಶ್ರೀ. ಯವರು ಕನ್ನಡದ ಸೇವೆಯಲಿ ನುರುಗಿ ಹಣ್ಣಾದವರೆ, ಹಿರಿಯ ಕನ್ನಡ ಧೀರರೇ, ಕನ್ನಡ ಮೇಲ್ಮೆಯಾ ಕನಸ ನನಸಾಗಿಸುವ ತರುಣ ಕನ್ನಡ ವೀರರೆ ಸ್ವಾಗತವು ನಿಮಗೆ... ಎಂದು ಯಾವಾಗಲೋ ಕನ್ನಡ ಕಟ್ಟಲು ನುಡಿ ಸೇವಕರನ್ನು ಸ್ವಾಗತಿಸಿ ಜಾಗೃತಿಯ ಜಾಗಟೆ ಬಾರಿಸಿದ್ದಾರೆ. ಇನ್ನು ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಮಾತುಗಳಲ್ಲೇ ಹೇಳುವುದಾದರೆ ಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ತಳ್ಳೋಣ; ಭ್ರಾಮಕ ಕಲ್ಪನೆಗಳನ್ನು ಬಿಟ್ಟು ಬಿಡೋಣ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ. ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಸಂಸ್ಕೃತಿ ಎಂಬ ಗುಪ್ತಗಾಮಿನಿಯಾದ ಗಂಗೆಯನ್ನು ಮೇಲಕ್ಕೆ ಎತ್ತಿ ತರೋಣ; ಏಳಿರಿ... ಇದೆಲ್ಲವೂ ಕನ್ನಡಿಗರಾದ ನಮಗೆ ಸ್ಫೂರ್ತಿಯ ಚಿಲುಮೆಯಾಗಬೇಕು, ಎಚ್ಚರಿಕೆಯ ಗಂಟೆಯಾಗಬೇಕು, ಜಾಗೃತಿಯ ಪಾಂಚಜನ್ಯ ವಾಗಬೇಕು. ಆಗಲೇ ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ, ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ ಎಂಬ ಕನ್ನಡ ಕಣ್ವ ಬಿಎಂಶ್ರೀಯವರ ನುಡಿರತ್ನಗಳು ಸಾರ್ಥಕವಾದಾವು.

ನಾಳೆ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಫೈನಲ್ಸ್ ಪಂದ್ಯಾವಳಿ

ಭಾರತ–ದಕ್ಷಿಣ ಆಫ್ರಿಕಾ ಚೊಚ್ಚಲ ಕಪ್ ಗೆಲ್ಲುವ ಉತ್ಸಾಹ

ಮೈಸೂರು, ಅ.31(ವಿವಿಹೆಚ್)– ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಹುಡುಕಾಟದಲ್ಲಿರುವ ಹರ್ಮನ್‌ಪ್ರೀತ್ ಕೌರ್ ಸಾರಥ್ಯದ ಭಾರತ ತಂಡ ಭಾನುವಾರ ದಕ್ಷಿಣಾ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಗುರುವಾರ ನಡೆದ 2025ರ ಏಕದಿನ ವಿಶ್ವಕಪ್ ಎರಡನೇ ಸೆಮಿಸ್ ಪಂದ್ಯದಲ್ಲಿ 7 ಬಾರಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ರೋಚಕ ಹಣಾಹಣಿಯಲ್ಲಿ ಮಣಿಸಿದ್ದ ಭಾರತ ಫೈನಲ್ಸ್‌ಗೆ ಲಗ್ಗೆಯಿಟ್ಟಿತ್ತು. ಆ ಮೂಲಕ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಮೂರನೇ ಬಾರಿಗೆ ಫೈನಲ್ಸ್ ಪ್ರವೇಶಿಸಿತು. ಈ ಹಿಂದೆ 2005 ಹಾಗೂ 2017ನೇ ಸಾಲಿನಲ್ಲಿ ರನ್ನರ್‌ಅಪ್ ಆಗುವ ಮೂಲಕ ನಿರಾಸೆ ಅನುಭವಿಸಿತ್ತು.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್: ವಿಜೇತರ ಪಟ್ಟಿ

1973: ಚಾಂಪಿಯನ್ – ಇಂಗ್ಲೆಂಡ್ (ರನ್ನರ್–ಅಪ್: ಆಸ್ಟ್ರೇಲಿಯಾ)
1978: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ಇಂಗ್ಲೆಂಡ್)
1982: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ಇಂಗ್ಲೆಂಡ್)
1988: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ಇಂಗ್ಲೆಂಡ್)
1993: ಚಾಂಪಿಯನ್ – ಇಂಗ್ಲೆಂಡ್ (ರನ್ನರ್–ಅಪ್: ನ್ಯೂಜಿಲೆಂಡ್)
1997: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ನ್ಯೂಜಿಲೆಂಡ್)
2000: ಚಾಂಪಿಯನ್ – ನ್ಯೂಜಿಲೆಂಡ್ (ರನ್ನರ್–ಅಪ್: ಆಸ್ಟ್ರೇಲಿಯಾ)
2005: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್ : ಭಾರತ)
2009: ಚಾಂಪಿಯನ್ – ಇಂಗ್ಲೆಂಡ್ (ರನ್ನರ್–ಅಪ್: ನ್ಯೂಜಿಲೆಂಡ್)
2013: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ವೆಸ್ಟ್ ಇಂಡೀಸ್)
2017: ಚಾಂಪಿಯನ್ – ಇಂಗ್ಲೆಂಡ್ (ರನ್ನರ್–ಅಪ್: ಭಾರತ)
2022: ಚಾಂಪಿಯನ್ – ಆಸ್ಟ್ರೇಲಿಯಾ (ರನ್ನರ್–ಅಪ್: ಇಂಗ್ಲೆಂಡ್)



ಮೊದಲ ಸೆಮಿಸ್‌ನಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡವನ್ನು ಮಣಿಸಿರುವ ದಕ್ಷಿಣಾ ಆಫ್ರಿಕಾ ಕೂಡ ಚೊಚ್ಚಲ ಪ್ರಶಸ್ತಿ ಗೆಲ್ಲುವ ಕನಸು ಕಂಡಿದೆ. ಒಟ್ಟಾರೆ ಪ್ರಶಸ್ತಿ ಗೆಲ್ಲುವ ತಂಡ ನೂತನ ಚಾಂಪಿಯನ್ ಆಗಿ ಹೊರಹೊಮ್ಮಲಿರುವುದು ಈ ಬಾರಿಯ ವಿಶೇಷವಾಗಿದೆ.

ಮಹಿಳಾ ಏಕದಿನ ವಿಶ್ವಕಪ್‌ನ ಫೈನಲ್ ಪಂದ್ಯವು ನವೆಂಬರ್ 2 ರ ಭಾನುವಾರದಂದು ಮಧ್ಯಾಹ್ನ 3 ಗಂಟೆಗೆ, ನವಿ ಮುಂಬೈನ ಡಿವೈ ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಫೈನಲ್ಸ್ ಪಂದ್ಯಕ್ಕೆ ದಿನ ಮೀಸಲು: ಅದ್ಯಾಗೂ ಅಂದು ಮಳೆ ಬಂದರೆ, ಡಕ್ವರ್ಥ್ ನಿಯಮಡಿ ಓವರ್ ಕಡಿತಗೊಳಿಸಿ, ಪಂದ್ಯ ಮುಂದವರೆಸಲಿದ್ದಾರೆ. ಒಂದು ವೇಳೆ ಮೊದಲ ದಿನ ಮಳೆಯಿಂದ ರದ್ದಾದರೆ, ಮರುದಿನ (ನ.3) ಪಂದ್ಯ ನಡೆಯಲಿದೆ.

ಒಂದು ವೇಳೆ ಮೀಸಲು ದಿನದಲ್ಲಿಯೂ ಪಂದ್ಯ ನಡೆಯದೇ ಹೋದರೆ, ಅಂಕಗಳ ಆಧಾರದ ಮೇಲೆ ವಿಜೇತರನ್ನು ನಿರ್ಧರಿಸಲಾಗುವುದಿಲ್ಲ ಬದಲಾಗಿ ಟ್ರೋಫಿಯನ್ನು ಎರಡು ತಂಡಗಳ ನಡುವೆ ಹಂಚಿಕೊಳ್ಳಲಾಗುತ್ತದೆ. ಹಾಗಾದರೆ ಮೊದಲ ಬಾರಿಗೆ ಭಾರತ ಮತ್ತು ದಕ್ಷಿಣ ಆಫ್ರಿಕಾವನ್ನು ಜಂಟಿ ವಿಜೇತರು ಎಂದು ಘೋಷಿಸಲಾಗುತ್ತದೆ.

ಗ್ರೂಪ್‌ಸ್ಟೇಜ್ ಪಂದ್ಯದಲ್ಲಿ ಭಾರತವನ್ನು ಸೋಲಿಸಿದ್ದ ಆಫ್ರಿಕಾ: ಗುಂಪು ಹಂತದಲ್ಲಿ ದಕ್ಷಿಣ ಆಫ್ರಿಕಾ, ಭಾರತವನ್ನು 3 ವಿಕೆಟ್‌ಗಳಿಂದ ಸೋಲಿಸಿತ್ತು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಭಾರತ 49.5 ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 251 ರನ್ ಕಲೆಹಾಕಿತ್ತು. 252 ರನ್‌ಗಳ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 48.5 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ಮುಟ್ಟಿತ್ತು.

2025ರ ಏಕದಿನ ವಿಶ್ವಕಪ್‌ನಲ್ಲಿ ಭಾರತದ ಸಾಧನೆ

- ಶ್ರೀಲಂಕಾ ವಿರುದ್ಧ ಡಕ್ವರ್ತ್ ಲೂಯಿಸ್ ನಿಮಯದಡಿಯಲ್ಲಿ 59 ರನ್ ಜಯ
- ಪಾಕಿಸ್ತಾನ ವಿರುದ್ಧ 88 ರನ್ ಜಯ
- ದಕ್ಷಿಣ ಆಫ್ರಿಕಾ ವಿರುದ್ಧ 3 ವಿಕೆಟ್ ಅಂತರದ ಸೋಲು
- ಆಸ್ಟ್ರೇಲಿಯಾ ವಿರುದ್ಧ3 ವಿಕೆಟ್ ಅಂತರದ ಸೋಲು
- ಇಂಗ್ಲೆಂಡ್ ವಿರುದ್ಧ 4 ರನ್ ಅಂತರದ ಸೋಲು
- ನ್ಯೂಜಿಲೆಂಡ್ ವಿರುದ್ಧ ಡಕ್ವರ್ತ್ ಲೂಯಿಸ್ ನಿಮಯದಡಿಯಲ್ಲಿ 53 ರನ್ ಅಂತರದ ಗೆಲುವು
- ಬಾಂಗ್ಲಾದೇಶ ವಿರುದ್ಧದ ಪಂದ್ಯ ರದ್ದು

ಸೆಮಿಫೈನಲ್: ಆಸ್ಟ್ರೇಲಿಯಾ ವಿರುದ್ಧ ಐದು ವಿಕೆಟ್ ಅಂತರದ ಗೆಲುವು

ಫೈನಲ್: ಭಾರತ / ದ.ಆಫ್ರಿಕಾ (ನವಿ ಮುಂಬೈ)


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ


ಎಂ.ಡಿ. ಗೋಪಿನಾಥ್, ಕೆ.ವಿ.ಮಲ್ಲೇಶ್, ಸ್ನೇಕ್ ಶ್ಯಾಂ ಸೇರಿ 95 ಮಂದಿಗೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ

ಮೈಸೂರು,ಅ.31(ಜಿಎ)–70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲೆಯಿಂದ ಕನ್ನಡ ರಾಜ್ಯೋತ್ಸವ ಪುರಸ್ಕಾರವನ್ನು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಎಂ.ಡಿ.ಗೋಪಿನಾಥ್, ಲಕ್ಕೇಗೌಡ, ಕೆ.ವಿ.ಮಲ್ಲೇಶ್, ಸ್ನೇಕ್ ಶ್ಯಾಮ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಹಿರಿಯ ವರದಿಗಾರ ಎಂ.ಟಿ.ಯೋಗೇಶ್ ಕುಮಾರ್ ಸೇರಿದಂತೆ ವಿವಿಧ ಕ್ಷೇತ್ರದ 95 ಮಂದಿಗೆ ಘೋಷಿಸಲಾಗಿದೆ.

ನಾಳೆ (ನ.1) ಬೆಳಗ್ಗೆ 9 ಗಂಟೆಗೆ ಓವೆಲ್ ಮೈದಾನದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ 95 ಮಂದಿ ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ.



ಎಂ.ಡಿ.ಗೋಪಿನಾಥ್


ಕೆ.ವಿ.ಮಲ್ಲೇಶ್


ಸ್ನೇಕ್ ಶ್ಯಾಮ್


ಧರ್ಮಾಪುರ ನಾರಾಯಣ


ಎಂ.ಟಿ.ಯೋಗೇಶ್


ಮೊಗಣ್ಣ

ಕನ್ನಡ ರಾಜ್ಯೋತ್ಸವ ಪುರಸ್ಕಾರದ ಪಟ್ಟಿ– ಸಮಾಜ ಸೇವೆ : ಕೆ.ಟಿ.ಕೃಷ್ಣಪ್ಪ, ಲಯನ್ ಡಾ. ಎಸ್.ವೆಂಕಟೇಶ್, ಪಿ.ಮರಂಕಯ್ಯ, ಕೆ.ಬಿ.ಲಿಂಗರಾಜು, ಡಾ.ಸಿ.ರೇಣುಕಾಂಬ, ರಾ. ಸುರೇಶ್, ಟೀ ಪ್ರತಿಷ್ಠಾನ (ಗೋಕುಲ್), ಬಿ.ಸಿ.ನಂದೀಶ, ಎಂ.ಜಿ.ಚಿಕ್ಕಣ್ಣ, ಎ.ನಾರಾಯಣ ರೈ, ಹೆಡತಲೆ ಮಂಜುನಾಥ್, ತಿಮ್ಮಯ್ಯ ಜಿ.ನಾಗರಾಜು, ಎನ್. ಮಹದೇವಸ್ವಾಮಿ, ಮೊಗಣ್ಣ ಡಾ.ಎಸ್.ನಾಗೇಶ್ ಯಾದವ್, ಆರ್. ಯಶೋಧ, ಪೈಲ್ವಾನ್ ಎನ್.ಚಂದ್ರಶೇಖರ್, ಕೆ.ಪಿ.ಯೋಗೇಶ್, ಡಿ.ಮಂಜುನಾಥ್, ಡಾ.ರದಿಉಲ್ಲಾ ಖಾನ್, ಎಂ.ಮಹದೇವ, ಡಾ.ಎಂ.ಮೊಗಣ್ಣಚಾರ್.

ಸಾಂಸ್ಕೃತಿಕ ಸಂಘಟನೆ : ಡಾ.ನಾಗರಾಜ್ ವಿ.ಬೈರಿ. **ಸಾಂಸ್ಕೃತಿಕ :** ಆರ್.ಅಜಯ್ ಕುಮಾರ್.

ಕನ್ನಡ ಪರ ಹೋರಾಟಗಾರರು : ಕೆ.ಮಾದಪ್ಪ, ಡಿ.ನಾಗರಾಜು, ಬಿ.ಕೆ.ಜೈಕುಮಾರ್, ಎಸ್.ಕೆ.ರಾಜುಗೌಡ, ಪುರುಷೋತ್ತಮ್, ಸಿಂಧುವಳ್ಳಿ ಶಿವಕುಮಾರ್, ಸಿ.ವೆಂಕಟೇಶ್(ಡೈರಿ ವೆಂಕಟೇಶ್), ನಂಜುಂಡ.

ಶಿಕ್ಷಣ : ಡಾ.ವಿಜಯಲಕ್ಷ್ಮಿ ಮಾನಾಪುರ, ರೇಣುಕಾ, ಎಲ್.ಮಂಜುಳಾಕ್ಷಿ, ಬಿ.ಆರ್.ವಾಣಿ, ಹೆಚ್.ಹೆಚ್.ಲಿಂಗರಾಜೇಗೌಡ, ಡಾ.ಬಿ.ಕೆ. ಜ್ಞಾನಪ್ರಕಾಶ್, ಗೌಡಯ್ಯ, ಎಂ.ವಿ.ತ್ಯಾಗರಾಜ್, ಎಂ.ಡಿ.ಗೋಪಿನಾಥ್. **ಶಿಕ್ಷಣ ಮತ್ತು ಸಾಹಿತ್ಯ :** ಮಂಗಳ ಮುದ್ದು ಮಾದಪ್ಪ.

ಸಾಹಿತ್ಯ : ಪ್ರೊ.ಎನ್.ಕೆ.ಲೋಲಾಕ್ಷಿ, ಅದಿಬ್ ಅಖ್ತರ್, ಡಿ.ನಾಗೇಂದ್ರಪ್ಪ, ಪ್ರೇಮಾ ಮಾದಪ್ಪ, ನಗರ್ಲೆ ಶಿವಕುಮಾರ್, ರತ್ನ ಚಂದ್ರಶೇಖರ್.

ಸಾಹಿತ್ಯ ಸಂಘಟನೆ : ಪಿ.ಮರಡೇಶ ಮೂರ್ತಿ. **ಜನಪದ ಸಾಹಿತ್ಯ :** ಡಾ.ಮೈಸೂರು ಉಮೇಶ್. **ವೈದ್ಯಕೀಯ ಮತ್ತು ಸಾಹಿತ್ಯ :** ಡಾ.ಬಿ.ಎನ್.ರವೀಶ್.

ರಂಗಭೂಮಿ : ಡಿ.ತಿಪ್ಪಣ್ಣ, ದೀಪಕ್, ಬಿ.ದೊರೆಸ್ವಾಮಿ, ಡಿ.ನಾಗೇಂದ್ರ ಕುಮಾರ್, ನಾಗರಾಜ್ ಮಾಯಣ್ಣ, ಎಸ್.ಎಲ್.ಕುಮಾರ್ (ಸಿದ್ದನಕೊಪ್ಪಲು), ಎ.ಸಿ.ರವಿ. **ಬೀದಿನಾಟಕ :** ಎ.ಸಲ್ಮಾ.

ಸಂಗೀತ : ಬಿ.ರಶ್ಮಿ, ಕೆ.ಲಕ್ಷ್ಮಿ, ಹೆಚ್.ಸೌಭಾಗ್ಯ. **ಜಾನಪದ:** ಸಿ.ಮಂಜುನಾಥ್, ಶ್ರೀನಿವಾಸ ಮೂರ್ತಿ. **ವಾದ್ಯ ಸಂಗೀತ :** ಅನುಷ್ ಎ.ಶೆಟ್ಟಿ. **ಗಮಕ :** ಡಾ.ಕೃ.ಪಾ.ಮಂಜುನಾಥ್.

ಕ್ರೀಡೆ : ಕು.ಶ್ರಾವಣಿ ಶಿವಣ್ಣ, ಲೆಫ್ಟಿನೆಂಟ್ ಟಿ.ಎಸ್.ರವಿ, ಅಲೋಕ್ ಆರ್.ಜೈನ್, ಹೆಚ್.ಸಿ. ಸುರೇಶ್, ಎ.ಎಲ್.ಕೃಷ್ಣಸ್ವಾಮಿ, ಎಂ.ಪಿ.ಅಜಿತ್. **ಕ್ರೀಡೆ (ವಿಶೇಷ ಚೇತನ):** ಕು.ರಚನ ನಾಗರಾಜ್.

ಪತ್ರಿಕೋದ್ಯಮ : ಶೇಖರ್ ಕಿರಗುಂದ, ವಿ.ವೀರಭದ್ರಪ್ಪ ಬಿಸ್ಲಳ್ಳಿ, ಎಂ.ಮಹೇಶ್, ದಯಾಶಂಕರ್ ಮೈಲಿ, ಕೆ.ಬಿ.ರಮೇಶ್ ನಾಯಕ, ಧರ್ಮಾಪುರ ನಾರಾಯಣ, ಎಸ್.ಆರ್. ಶಿವಕುಮಾರ್(ಎಸ್ಆರ್ಎಸ್), ಹೆಚ್.ಎಸ್. ದಿನೇಶ್ ಕುಮಾರ್. **ಪತ್ರಿಕಾ ಛಾಯಾಗ್ರಹಣ :** ಎಂ.ನಾಗರಾಜು(ಹಂಪಾ ನಾಗರಾಜ್), ಎಂ.ಎ.ಶ್ರೀರಾಮ್. **ದೃಶ್ಯ ಮಾಧ್ಯಮ ಛಾಯಾಗ್ರಹಣ :** ಈ. ಕಾರ್ತಿಕ್ **ವನ್ಯಜೀವಿ ಛಾಯಾಗ್ರಹಣ :** ಜಿ.ಎಸ್.ರವಿಶಂಕರ್.


ವಯಸ್ಕರ ಸಾಕ್ಷರತೆ–ಸಂಕಿರಣ : ರಾಜಾ ಹೊಸಮಾಳ. **ಸ್ವಚ್ಛತಾ ಸೇವೆ–ಸಂಕಿರಣ :** ಶ್ರೀಮತಿ ಭಾವಕ್ಕ. **ಯೋಗ :** ಸತ್ಯವತಿ. **ಧಾರ್ಮಿಕ :** ಡಾ.ಎಂ.ರವಿಕುಮಾರ್.

ಕಳೆದ 4 ದಶಕಗಳಿಂದ ಪತ್ರಿಕಾ ವಿತರಕರಾಗಿರುವ ಮೊಗಣ್ಣ ಅವರಿಗೆ ಸಮಾಜ ಸೇವಾ ಕ್ಷೇತ್ರದಲ್ಲಿ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ ನೀಡುತ್ತಿರುವುದು ವಿಶೇಷವಾಗಿದೆ.

ಇಂದು ನೂತನ ಡಿಸಿ ಕಚೇರಿ ಮುಂದೆ ಅಭಿಮಾನಿಗಳಿಂದಲೇ ದೇವರಾಜ ಅರಸು ಅವರ ಪ್ರತಿಮೆ ಅನಾವರಣ

ಅಭಿಮಾನಿಗಳು ಸಮಾಗಮಗೊಳ್ಳುವಂತೆ ರಘು ಕೌಟಿಲ್ಯ ಕರೆ

ಮೈಸೂರು, ಅ.31– ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ಯಾವುದೇ ಮನವಿಗೂ ಓಗೊಡದೇ ತಾತ್ಸಾರ ಧೋರಣೆ ಮುಂದುವರೆಸಿರುವ ಜಿಲ್ಲಾಡಳಿತದ ಧೋರಣೆಯನ್ನು ಪ್ರತಿಭಟಿಸಿ, ಈ ಹಿಂದೆ ಘೋಷಿಸಿದಂತೆ ಅಭಿಮಾನಿಗಳೇ ತಿ.ನರಸಿಪುರ ರಸ್ತೆಯಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದಲ್ಲಿ ಅನಾವರಣಕ್ಕಾಗಿ ಕಾಯುತ್ತಿರುವ ಡಿ.ದೇವರಾಜ ಅರಸರ ಪ್ರತಿಮೆಯನ್ನು ನಾಳೆ (ನ.1) ಬೆಳಗ್ಗೆ 11 ಗಂಟೆಗೆ ಅನಾವರಣಗೊಳಿಸಲು ನಿರ್ಧರಿಸಿದ್ದು, ಹಿಂದುಳಿದ ಸಮುದಾಯ ಹಾಗೂ ದೇವರಾಜ ಅರಸರ ಅಭಿಮಾನಿಗಳು ಸಮಾಗಮಗೊಳ್ಳಬೇಕೆಂದು ಬಿಜೆಪಿ ಹಿಂದುಳಿಗ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು ಕರೆ ನೀಡಿದಾರೆ.



ಸಾಮಾಜಿಕ ನ್ಯಾಯದ ಹರಿಕಾರ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸರ ಪ್ರತಿಮೆ ಮೈಸೂರಿನಲ್ಲಿ ಅನಾಥ ಪ್ರಜ್ಞೆ ಎದುರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಹಾಗೂ ಆಡಳಿತ ಸುಧಾರಣೆಗಳಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಧೀಮಂತ ಮುಖ್ಯಮಂತ್ರಿ ಎಂದು ಕರೆಸಿಕೊಂಡ ಡಿ.ದೇವರಾಜ ಅರಸರು ಮೈಸೂರು ಜಿಲ್ಲೆಯಿಂದ ಬಂದವರು.

ದಶಕಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಮೈಸೂರು ಜಿಲ್ಲೆಯಲ್ಲಿ ಅವರನ್ನು ಸ್ಮರಿಸುವ ಯಾವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಿಲ್ಲ, ಅವರ ಪ್ರತಿಮೆಯನ್ನಾದರೂ ಸ್ಥಾಪಿಸಿ ಸ್ಮರಿಸಬೇಕೆಂಬ ಉದಾತ್ತ ಉದ್ದೇಶದಿಂದ ಬಿಎಸ್ ಯಡಿಯೂರಪ್ಪ ಅವರ ಆಡಳಿತ ಕಾಲದಲ್ಲಿ 92 ಲಕ್ಷ ರೂಗಳನ್ನು ಮಂಜೂರು ಮಾಡಿ ಮೈಸೂರಿನ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಅರಸು ಅವರ ಪ್ರತಿಮೆ ಸ್ಥಾಪಿಸಲು ಆದೇಶಿಸಿತ್ತು. ಆದರೆ ಪ್ರತಿಮೆ ಸಿದ್ಧಗೊಂಡಿದ್ದರೂ ಅದಕ್ಕೆ ಅನಾವರಣ ಭಾಗ್ಯ ಕಲ್ಪಿಸದೇ ಇರುವುದರಿಂದ ಡಿ ದೇವರಾಜ ಅರಸರ ಪ್ರತಿಮೆ ಮೈಸೂರಿನಲ್ಲಿ ಅನಾಥ ಪ್ರಜ್ಞೆ ಎದುರಿಸುತ್ತಿದೆ.

ಜಿಲ್ಲಾಡಳಿತ ದೇವರಾಜ ಅರಸರ ಬಗ್ಗೆ ತಾತ್ಸಾರ ಧೋರಣೆ ತಳೆದಿರುವುದು ಅತ್ಯಂತ ಖಂಡನೀಯ. ನವೆಂಬರ್ 1ರಂದು 'ಕರ್ನಾಟಕ' ಎಂದು ನಾಮಕರಣ ಮಾಡಿದ ಡಿ. ದೇವರಾಜ ಅರಸರ ನೆನೆಗುದಿಗೆ ಬಿದ್ದಿರುವ ಪ್ರತಿಮೆ ಅನಾವರಣಗೊಳಿಸುವುದು ಅರ್ಥಪೂರ್ಣ ಎಂದು ಹೇಳಿ ದೇವರಾಜ ಅರಸರ ಅಭಿಮಾನಿಗಳ ಪರವಾಗಿ ಸರ್ಕಾರಕ್ಕೆ ಗಡುವು ನೀಡಲಾಗಿತ್ತು. ಅದರಂತೆ ನ.1ರಂದು ಅರಸು ಅವರ ಅಭಿಮಾನಿಗಳೇ ಪ್ರತಿಮೆ ಅನಾವರಣ ಮಾಡಲಿದ್ದಾರೆ ಎಂದು ರಘು ಕೌಟಿಲ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಿಂದ ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು 'ಚೆಕ್–ಓಲೇಟ್' ಕಾರ್ಯಕ್ರಮ



ಮೈಸೂರು, ಅ.31– ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು 'ಚೆಕ್–ಓಲೇಟ್' ಎಂಬ ರಾಷ್ಟ್ರವ್ಯಾಪಿ ಕಾರ್ಯಕ್ರಮಕ್ಕೆ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ಕೈಜೋಡಿಸಿದೆ.

'ಚೆಕ್–ಓಲೇಟ್' ಕಾರ್ಯಕ್ರಮವು ಮಹಿಳೆಯರಲ್ಲಿ ಸ್ವಯಂ ಸ್ತನ ಪರೀಕ್ಷೆ ಮಾಡಿಕೊಳ್ಳುವುದನ್ನು ಮಾನಸಿಕ ಅಭ್ಯಾಸವಾಗಿ ರೂಢಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ. ಆ ಮೂಲಕ ಆರಂಭದಲ್ಲೇ ರೋಗ ಪತ್ತೆ ಮತ್ತು ಪೂರ್ವಭಾವಿಯಾಗಿ ಆರೋಗ್ಯ ಕಾಪಾಡಿಕೊಳ್ಳುವುದನ್ನು ಉತ್ತೇಜಿಸುತ್ತದೆ.

ಅಪೋಲೊದಲ್ಲಿ ವೈದ್ಯಕೀಯ ಸೇವೆಯಲ್ಲಿರುವ ನಾವು ಪ್ರತಿ ಮಹಿಳೆಯ ಆರೋಗ್ಯವು ಕುಟುಂಬಗಳು ಮತ್ತು ಸಮಾಜದ ಬಲವರ್ಧನೆ ಮಾಡುತ್ತದೆ ಎಂದು ನಂಬಿದ್ದೇವೆ. 'ಚೆಕ್–ಓಲೇಟ್' ಮೂಲಕ ನಾವು ಸ್ವಯಂ– ಆರೈಕೆ ಅತಿ ಮುಖ್ಯ ಎಂಬುದನ್ನು ಮಹಿಳೆಯರಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ಕೆಲವು ನಿಮಿಷಗಳ ಕಾಲ ಸ್ವಯಂ–ಪರೀಕ್ಷೆ ಮಾಡಿಕೊಳ್ಳುವುದು ಆರೋಗ್ಯಕರ ಜೀವನಕ್ಕೆ ಸಾಕಷ್ಟು ಪ್ರಯೋಜನಕಾರಿ ಎಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಉಪಾಧ್ಯಕ್ಷರೂ ಹಾಗೂ ಯೂನಿಟ್ ಹೆಡ್ ಆದ ಎನ್.ಜಿ.ಭರತೀಶ ರೆಡ್ಡಿ ಹೇಳಿದರು.

ಅನಿಮೇಷನ್ ಮಾಡಿರುವ ವೀಡಿಯೋ ಲಿಂಕ್ ಹೊಂದಿದ ಕ್ಯೂಆರ್ ಕೋಡ್ ಅನ್ನು ಪ್ರತಿ ಚೆಕ್–ಓಲೇಟ್ ತಿನಿಸು ಒಳಗೊಂಡಿರುತ್ತದೆ. ಆ ವೀಡಿಯೋದಲ್ಲಿ ಸ್ತನ ಸ್ವಯಂ ಪರೀಕ್ಷೆ ಮಾಡಿಕೊಳ್ಳುವ ಪ್ರತಿ ಹಂತದ ಮಾರ್ಗದರ್ಶನದ ಮಾಹಿತಿ ಇರಲಿದೆ. ಆ ಮೂಲಕ ಈ ಸಿಹಿ ತಿನಿಸನ್ನು ಆರೈಕೆ ಮತ್ತು ಜಾಗೃತಿಯ ಸಂಕೇತವಾಗಿ ಮಾರ್ಪಡಿಸಲಾಗುತ್ತದೆ.

ಆರಂಭದಲ್ಲೇ ಪತ್ತೆಯಾಗುವ ಸ್ತನ ಕ್ಯಾನ್ಸರ್ ಅನ್ನು ಗುಣಪಡಿಸಬಹುದು. ಈ ಕಾರ್ಯಕ್ರಮವು ಜಾಗೃತಿ ಹೆಚ್ಚಿಸುತ್ತದೆ ಮತ್ತು ಮಹಿಳೆಯರು ಸಮಯಕ್ಕೆ ಸರಿಯಾಗಿ ಎಚ್ಚೆತ್ತುಕೊಳ್ಳುವಂತೆ ಮಾಡುತ್ತದೆ ಎಂದು ಕನ್ಸಲ್ಟಂಟ್ ಮೆಡಿಕಲ್ ಆಂಕೊಲಾಜಿಸ್ಟ್ ಡಾ.ನವೀನ್ ಜಯರಾಮ್ ಅನ್ವೇಕರ್ ತಿಳಿಸಿದರು.

ಅಪೋಲೊ ಕ್ಯಾನ್ಸರ್ ಸೆಂಟರ್ ಆರಂಭಿಸಿರುವ ಈ 'ಚೆಕ್–ಓಲೇಟ್' ಕಾರ್ಯಕ್ರಮವು ಜಾಗೃತಿ ಮೂಡಿಸುವ ಕಾರ್ಯಕ್ರಮವಷ್ಟೇ ಅಲ್ಲ. ಇದು ಮಹಿಳೆಯರನ್ನು ಸಬಲೀಕರಣಗೊಳಿಸುವ ಆಂದೋಲನವಾಗಿದೆ. ಸರಳ, ಅರ್ಥಪೂರ್ಣ ಅಭ್ಯಾಸಗಳನ್ನು ಮಹಿಳೆಯರಲ್ಲಿ ರೂಢಿಸುವ ಮೂಲಕ ಅವರು ತಮ್ಮ ಆರೋಗ್ಯದತ್ತ ಹೆಚ್ಚು ಗಮನ ಹರಿಸುವಂತೆ ಮಾಡುತ್ತದೆ. ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯು ಈ ಕಾರ್ಯಕ್ರಮಕ್ಕೆ ಹೆಚ್ಚು ಉತ್ತೇಜನ ನೀಡುತ್ತದೆ ಹಾಗೂ ಎಲ್ಲರಿಗೂ ಸಹಾನುಭೂತಿಯ, ಮುನ್ನೆಚ್ಚರಿಕೆ ವಹಿಸುವ ಮತ್ತು ಸುಧಾರಿತ ಆರೋಗ್ಯ ಸೇವೆ ಒದಗಿಸುವ ತನ್ನ ಧ್ಯೇಯೋದ್ದೇಶವನ್ನು ಮುಂದುವರಿಸುತ್ತದೆ.

ದರ್ಶನ್ ಪ್ರಕರಣ: ನ.3ಕ್ಕೆ ದೋಷಾರೋಪ ನಿಗದಿ

ಬೆಂಗಳೂರು, ಅ.31– ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಇತರ ಆರೋಪಿಗಳ ವಿರುದ್ಧ ದಾಖಲಾಗಿದ್ದ ದೋಷಾರೋಪ ನಿಗದಿಪಡಿಸುವ ದಿನಾಂಕವನ್ನು ನಗರದ 57ನೇ ಸಿಸಿಎಚ್ ನ್ಯಾಯಾಲಯ ನ.3ಕ್ಕೆ ಮುಂದೂಡಿದೆ. ದರ್ಶನ್, ಪವಿತ್ರಾ ಗೌಡ ಸೇರಿದಂತೆ ಆರು ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಯಿತು. ವಿಚಾರಣೆ ಮುಗಿದ ಬಳಿಕ ದೋಷಾರೋಪ ನಿಗದಿ ಮಾಡುವ ದಿನ ಎಲ್ಲಾ ಆರೋಪಿಗಳೂ ಹಾಜರಾಗಬೇಕು ಎಂದು ನ್ಯಾಯಾಲಯ ಸೂಚಿಸಿತು.



ದರ್ಶನ್ ಪರ ವಾದ ಮಂಡಿಸಿದ ವಕೀಲ ಸುನೀಲ್, ತಮ್ಮ ಕಕ್ಷಿದಾರರಿಗೆ ಯಾವುದೇ ಸೂಚನೆಗಳನ್ನು ನೀಡಿಲ್ಲ. ಹೀಗಾಗಿ ಖುದ್ದು ಹಾಜರುಪಡಿಸಲು ಅನುಮತಿ ನೀಡಬೇಕು. ವಿಚಾರಣೆಗೂ ಮುನ್ನ ಎರಡು ವಾರ ಕಾಲಾವಕಾಶ ಕೊಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಜೈಲಿಗೆ ತೆರಳಿ ಸೂಚನೆಗಳನ್ನು ನೀಡುವಂತೆ ನಟನ ಪರ ವಕೀಲರಿಗೆ ತಿಳಿಸಿದರು. ಜೊತೆಗೆ ವಕೀಲರ ಭೇಟಿಗೆ ಅವಕಾಶ ಕಲ್ಪಿಸುವಂತೆ ಜೈಲಾಧಿಕಾರಿಗಳಿಗೆ ನಿರ್ದೇಶಿಸಿದರು.

ಏನಿದು ದೋಷಾರೋಪ ನಿಗದಿ?: ದರ್ಶನ್ ಹಾಗೂ ಇತರೆ ಆರೋಪಿಗಳ ವಿರುದ್ಧ ಪೊಲೀಸರು ಮಾಡಿರುವ ಆರೋಪಗಳನ್ನು ಆರೋಪಿಗಳಿಗೆ ಓದಿ ಹೇಳಲಾಗುತ್ತದೆ. ನಂತರ ಈ ಆರೋಪಗಳನ್ನು ಒಪ್ಪಿಕೊಳ್ಳುತ್ತೀರಾ ಎಂದು ನ್ಯಾಯಾಲಯ ಪ್ರಶ್ನಿಸಲಿದೆ. ಒಪ್ಪಿಕೊಂಡರೆ ಶಿಕ್ಷೆ ಪ್ರಕಟವಾಗಲಿದೆ. ನಿರಾಕರಿಸಿದರೆ, ಸಾಕ್ಷಿಗಳ ವಿಚಾರಣೆ ಮುಂದುವರಿಯಲಿದೆ.

ರಾಷ್ಟ್ರೀಯ ಏಕತಾ ಓಟ



ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜೆಎಸ್ಎಸ್ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಏಕತಾ ಓಟ–2025ಕ್ಕೆ ಪೊಲೀಸ್ ಅಧಿಕಾರಿಗಳು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಠಾಣೆಯ ಇನ್ಸ್‌ಪೆಕ್ಟರ್ ಅರುಣ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಗೌತಮ್‌ಗೌಡ ಮತ್ತು ಲತಾ ಸೇರಿದಂತೆ ಠಾಣೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಬ್ರಾಹ್ಮಣ ಧರ್ಮ ಸಹಾಯ ಸಭಾ ನೂತನ ಪದಾಧಿಕಾರಿಗಳಿಗೆ ಸನ್ಮಾನ



ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು

ಮೈಸೂರು, ಅ.31(ಎಸ್‌ಪಿಎನ್)– ಕೆ.ಆರ್.ಮೋಹನ್ ಕುಮಾರ್ ಮುಡಾ ಅಧ್ಯಕ್ಷರಾಗಿದ್ದಾಗ ಬ್ರಾಹ್ಮಣ ಧರ್ಮ ಸಹಾಯ ಸಭಾಗೆ ಸಿಎ ನಿವೇಶನ ನೀಡಿ, ಸಮುದಾಯದ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿದ್ದರು ಎಂದು ಸಭಾದ ನೂತನ ಅಧ್ಯಕ್ಷ ಎಂ.ಶ್ರೀನಿವಾಸ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಪುರಂನಲ್ಲಿ ಮೈಸೂರು ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ನೂತನ ಪದಾಧಿಕಾರಿಗಳಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಅವರ ತಂದೆ ಕೆಆರ್.ಮೋಹನ್ ಕುಮಾರ್ ಅವರು ಮುಡಾ ವತಿಯಿಂದ ಸಿಎ ನಿವೇಶನ ದೊರಕಿಸಿಕೊಟ್ಟು ಸಮುದಾಯ ಸಂಘಟನೆಗೆ ಒತ್ತು ನೀಡಿದ್ದರು ಎಂದರು. ಈ ವೇಳೆ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ, ವಿಪ್ರ ಮುಖಂಡ ಗಜಾನನ ಹೆಗ್ಡೆ ಸೇರಿದಂತೆ ಇತರರಿದ್ದರು.

ಸರ್ಕಾರಿ ಕಚೇರಿ, ಸಭೆಗಳಲ್ಲಿ ಪ್ಲಾಸ್ಟಿಕ್ ಬಾಟಲ್ ನಿಷೇಧ; ಕೆಎಂಎಫ್ ನಂದಿನಿ ಉತ್ಪನ್ನ ಕಡ್ಡಾಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಸೂಚನೆ

ಬೆಂಗಳೂರು, ಅ.31– ಸರ್ಕಾರಿ ಕಾರ್ಯಕ್ರಮಗಳಲ್ಲಿ ಪರಿಸರ ಸ್ನೇಹಿ ವಸ್ತುಗಳು ಹಾಗೂ ಕೆಎಂಎಫ್ ನಂದಿನಿ ಉತ್ಪನ್ನಗಳನ್ನೇ ಕಡ್ಡಾಯವಾಗಿ ಬಳಕೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ಸೂಚನೆ ನೀಡಿದ್ದಾರೆ.


ಈ ಬಗ್ಗೆ ಶುಕ್ರವಾರ ಸಿಎಂ ಸಿದ್ದರಾಮಯ್ಯ ಅವರು ಟಿಪ್ಪಣಿ ಹೊರಡಿಸಿದ್ದು, ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಮತ್ತು ಸರ್ಕಾರಿ ಸಭೆ ಸಮಾರಂಭಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳ ಬದಲಾಗಿ ಪರಿಸರ ಸ್ನೇಹಿ ವಸ್ತುಗಳಿಂದ ತಯಾರಿಸಿದ ಪರ್ಯಾಯ ಬಾಟಲಿಗಳನ್ನು ಕಟ್ಟುನಿಟ್ಟಾಗಿ ಬಳಸಬೇಕು. ಈ ಕ್ರಮವು ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ ಎಂದಿದ್ದಾರೆ.



ನಂದಿನಿ ಉತ್ಪನ್ನ ಕಡ್ಡಾಯ: ಈ ಹಿಂದೆ ನಡೆದ ಮುಖ್ಯಮಂತ್ರಿಗಳು ಮತ್ತು ಇಂಧನ ಸಚಿವರ ಸಭೆಯಲ್ಲಿ, ಸಚಿವಾಲಯವೂ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಸಭೆ/ಕಾರ್ಯಕ್ರಮಗಳಲ್ಲಿ ಸರ್ಕಾರಿ ಸ್ವಾಮ್ಯದ ಕೆಎಂಎಫ್‌ನ 'ನಂದಿನಿ' ಉತ್ಪನ್ನ ಕಡ್ಡಾಯವಾಗಿ ಬಳಸುವಂತೆ ಸೂಚನೆ ನೀಡಲಾಗಿದೆ.

ಈ ಎರಡೂ ನಿರ್ದೇಶನಗಳನ್ನು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಕಟ್ಟುನಿಟ್ಟಾಗಿ ಪಾಲಿಸಬೇಕು.ಈ ಮೂಲಕ ಸರ್ಕಾರಿ ಉದ್ಯಮಕ್ಕೆ ಉತ್ತೇಜನ ಹಾಗೂ ಸರ್ಕಾರಿ ಕಚೇರಿಗಳನ್ನು ಪ್ಲಾಸ್ಟಿಕ್ ಮುಕ್ತವನ್ನಾಗಿಸುವ ಗುರಿ ಹೊಂದಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

ಸುತ್ತೂರು ಶ್ರೀಗಳಿಂದ ಆಶೀರ್ವಾದ



ಕರ್ನಾಟಕ ಮೃಗಾಲಯದ ನೂತನ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಅವರು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ. ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ. ಎಸ್.ಸಿ.ಬಸವರಾಜು, ಹೊಸಕೋಟೆ ಬಸವರಾಜ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಸೋಮಣ್ಣ, ಸುತ್ತೂರು ರವಿಕುಮಾರ್, ಶಾಂತರಾಜು, ಹದಿನಾರು ಅಭಿ, ಬೊಕ್ಕಳ್ಳಿ ಸೋಮ ಸುಂದರ್, ದೊರೆಸ್ವಾಮಿ, ಬಿಳುಗಲಿ ಕುಮಾರ, ವಾಲ್ಮೀಕಿ ಸಮೃದ್ಧಿ ಸಂಘದ ಅಧ್ಯಕ್ಷ ರವಿ, ರಂಗಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಸೇಫ್ಟಿ ಸ್ಥಳವೆಂದು ಶೂನಲ್ಲಿಟ್ಟಿದ್ದ ಕೀ ಬಳಸಿ ಸಾವಕಾಶವಾಗಿ ಲಕ್ಷಾಂತರ ಬೆಲೆಯ ನಗದು, ಚಿನ್ನಾಭರಣ ಕದ್ದ ಖದೀಮರು!

ಮೈಸೂರು, ಅ.31– ಸ್ಲಿಪ್ಪರ್ ಸ್ಟ್ಯಾಂಡ್‌ನಲ್ಲಿ ಬಚ್ಚಿಟ್ಟಿದ್ದ ಮನೆಯ ಕೀಯನ್ನೇ ಬಳಸಿಕೊಂಡು ಹಾಡಹಗಲೇ ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಮೈಸೂರಿನ ತಿಲಕ್‌ನಗರದಲ್ಲಿ ನಡೆದಿದೆ.

ಇಲ್ಲಿನ ಕಲಾವತಿ ಅವರ ಮನೆಗೆ ಹೊಂಚು ಹಾಕಿ ನುಗ್ಗಿರುವ ಖದೀಮರು, 6 ಸಾವಿರ ನಗದು, 30 ಗ್ರಾಂ ಚಿನ್ನಾಭರಣ ಹಾಗೂ 12 ಗ್ರಾಂ ಬೆಳ್ಳಿಯ ಚೈನ್ ಅನ್ನು ಕದ್ದ ಬಳಿಕ ಬೀಗ ಹಾಕಿ, ಅದೇ ಸ್ಥಳದಲ್ಲಿ ಕೀ ಇಟ್ಟು ಪರಾರಿಯಾಗಿದ್ದಾರೆ.

ಕಲಾವತಿ ಅವರು ಪುತ್ರಿಯೊಂದಿಗೆ ವಾಸವಿದ್ದು, ಯಾರು ಹೊರ ಹೋಗುವಾಗಲೂ ಸ್ಲಿಪ್ಪರ್ ಸ್ಟ್ಯಾಂಡ್‌ನ ಶೂ ಒಳಗೆ ಕೀ ಇಡುವುದನ್ನು ರೂಢಿಸಿಕೊಂಡಿದ್ದರು. ಹಾಗೆಯೇ ಗುರುವಾರ ಬೆಳಗ್ಗೆ ಕಲಾವತಿ ಅವರ ಪುತ್ರಿ ಕಾಲೇಜಿಗೆ ಹೋಗಿದ್ದರು. ಮಧ್ಯಾಹ್ನ ಕಲಾವತಿ ಅವರು ಕಾರ್ಯ ನಿಮಿತ್ತ ಹೊರಹೋಗುವಾಗ ಎಂದಿನಂತೆ ಮನೆಗೆ ಬೀಗ ಹಾಕಿ, ಕೀಯನ್ನು ಶೂ ಒಳಗಿಟ್ಟಿದ್ದರು.

ಸಂಜೆ ಕಾಲೇಜಿನಿಂದ ಮನೆಗೆ ಬಂದ ಕಲಾವತಿ ಅವರ ಪುತ್ರಿ, ಶೂ ಒಳಗಿದ್ದ ಕೀ ತೆಗೆದುಕೊಂಡು ಮನೆಯ ಬೀಗ ತೆಗೆದು ಒಳಗೆ ಹೋಗಿ ಕುಳಿತಿದ್ದಾರೆ. ಅಷ್ಟರಲ್ಲಿ ತಾಯಿಯೂ ಮನೆಗೆ ಬಂದಿದ್ದಾರೆ. ಇಬ್ಬರೂ ಕೊಠಡಿಗೆ ಹೋದಾಗ ಶಾಕ್ ಕಾದಿತ್ತು. ಬೀರುವಿನ ಬಾಗಿಲು ತೆರೆದಿತ್ತಲ್ಲದೆ, ಅದರಲ್ಲಿದ್ದ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಗಾಬರಿಯಿಂದ ಬೀರುವಿನ ಬಳಿ ಬಂದು ಪರಿಶೀಲಿಸಿದಾಗ ಅದರಲ್ಲಿನ ಲಾಕರ್‌ಗಳನ್ನು ಮೀಟಿ, ಹಣ ಹಾಗೂ ಚಿನ್ನಾಭರಣವಿದ್ದ ಪರ್ಸ್ ಅನ್ನು ಕಳ್ಳತನ ಮಾಡಿರುವುದು ತಿಳಿದಿದೆ.

ನಗದು, ಬೆಳ್ಳಿ ಹಾಗೂ ಚಿನ್ನಾಭರಣ ಸೇರಿ ಒಟ್ಟು 2.47 ಲಕ್ಷ ರೂ. ವಸ್ತುಗಳನ್ನು ಕಳ್ಳತನ ಮಾಡಿರುವುದಾಗಿ ಕಲಾವತಿ ಅವರ ಪುತ್ರಿ, ಮಂಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೇಶದಲ್ಲಿನ ಕಾನೂನು–ಸುವ್ಯವಸ್ಥೆ ಸಮಸ್ಯೆಗೆ ಬಿಜೆಪಿ, ಆರ್‌ಎಸ್‌ಎಸ್ ಕಾರಣ

ಆರ್‌ಎಸ್‌ಎಸ್ ನಿಷೇಧ ಅಗತ್ಯ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದನೆ

ನವದೆಹಲಿ: ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳ ಸೃಷ್ಟಿಸುತ್ತಿರುವ ಹಿಂದೂ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಶುಕ್ರವಾರ ಹೇಳಿದ್ದಾರೆ.



ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ 41ನೇ ಪುಣ್ಯತಿಥಿ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150 ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ಉಕ್ಕಿನ ಮನುಷ್ಯ ಮತ್ತು ಉಕ್ಕಿನ ಮಹಿಳೆ ಇಬ್ಬರೂ ಭಾರತದ ಏಕತೆ ಮತ್ತು ಸಮಗ್ರತೆಗಾಗಿ ಶ್ರಮಿಸಿದ್ದಾರೆಂದು ಹೇಳಿದರು.


ಇದು ನನ್ನ ವೈಯಕ್ತಿಕ ಅಭಿಪ್ರಾಯ, ಬಿಜೆಪಿ–ಆರ್‌ಎಸ್‌ಎಸ್ ಕಾರಣದಿಂದಾಗಿ ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳು ಉದ್ಭವಿಸುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳ ಸೃಷ್ಟಿಸುತ್ತಿರುವ ಹಿಂದೂ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಸರ್ದಾರ್ ಪಟೇಲ್ ಅವರನ್ನು ಉಲ್ಲೇಖಿಸಿದ ಪ್ರಧಾನಿ ಮೋದಿಯವರನ್ನು ಟೀಕಿಸಿದ ಖರ್ಗೆ ಅವರು, 1948 ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಅವರಿಗೆ ಪಟೇಲ್ ಬರೆದ ಪತ್ರವನ್ನು ಉಲ್ಲೇಖಿಸಿದರು. ಸರ್ದಾರ್ ಪಟೇಲ್ ಅವರು ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದರು. ಇದು ದೇಶದ ಜಾತ್ಯತೀತ ರಚನೆಯ ಹಿತಾಸಕ್ತಿಗಾಗಿ ತೆಗೆದುಕೊಂಡ ಹೆಜ್ಜೆಯಾಗಿತ್ತು ಎಂದು ಹೇಳಿದರು.

ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಿಂದ ಗಾಂಧಿ, ಗೋಡ್ಸೆ, ಆರ್‌ಎಸ್‌ಎಸ್ ಮತ್ತು 2002ರ ಗಲಭೆಗಳ ಉಲ್ಲೇಖಗಳನ್ನು ತೆಗೆದುಹಾಕುವ ಮೂಲಕ ಮೋದಿ ಸರ್ಕಾರವು ಇತಿಹಾಸವನ್ನು ವಿರೂಪಗೊಳಿಸಿದೆ ಎಂದು ಟೀಕಿಸಿದರು.

ಮೈಸೂರು ಕಾಂಗ್ರೆಸ್ ವತಿಯಿಂದ ವಲ್ಲಭಭಾಯಿ ಪಟೇಲ್ ಜನ್ಮದಿನ ಆಚರಣೆ

ದಿವಂಗತ ಪ್ರಧಾನಿ ಇಂದಿರಾಗಾಂಧಿ ಪುಣ್ಯಸ್ಮರಣೆ



ಮೈಸೂರು ಕಾಂಗ್ರೆಸ್ ಭವನದಲ್ಲಿ ಮಾಜಿ ಉಪ ಪ್ರಧಾನಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆ ಹಾಗೂ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮ ನಡೆಯಿತು.

ಮೈಸೂರು, ಅ.31(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮಾಜಿ ಉಪ ಪ್ರಧಾನಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆ ಹಾಗೂ ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮ ನಡೆಯಿತು.

ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದಿವಂಗತ ಇಂದಿರಾಗಾಂಧಿ ಅವರು ವಿಶ್ವಕ್ಕೆ ಮಾದರಿ ಮಹಿಳೆಯಾಗಿದ್ದಾರೆ. ಕಾಂಗ್ರೆಸ್‌ಗೆ ಭದ್ರ ಬುನಾದಿ ಹಾಕಿದ ಅವರು, ದೇಶದ ಬಡಜನತೆಯ ಅಭಿವೃದ್ಧಿ ಕೈಗೊಂಡ ಕಾರ್ಯಕ್ರಮಗಳು, ನೀಡಿದ ಕೊಡುಗೆ ಸದಾ ಕಾಲಕ್ಕೂ ಸ್ಮರಣೆಯ ಎಂದರು.

ದೇಶದ ಅಭಿವೃದ್ಧಿ ಮತ್ತು ಭದ್ರತೆ ವಿಚಾರದಲ್ಲಿ ಇಂದಿರಾಗಾಂಧಿ ಅವರು ತೆಗೆದುಕೊಂಡ ನಿರ್ಧಾರಗಳು ವಿಶ್ವಕ್ಕೆ ಮಾದರಿಯಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದುಡಿಯುವ ವರ್ಗಕ್ಕೆ ಶಕ್ತಿ ತುಂಬಿದವರು. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಜನರು ಕಾಂಗ್ರೆಸ್ ಪರವಾಗಿಯೇ ಇರುವುದಕ್ಕೆ ಇಂದಿರಾಗಾಂಧಿ ಅವರು ನೀಡಿದ ಕೊಡುಗೆಗಳೇ ಕಾರಣ ಎಂದು ನೆನೆದರು.

ಬಿಜೆಪಿಯಿಂದ ಹೈಜಾಕ್: ಸ್ವಾತಂತ್ರ್ಯ ನಂತರ ದೇಶವನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿ, ಉಕ್ಕಿನ ಮನುಷ್ಯನೆಂದೇ ಖ್ಯಾತಿ ಪಡೆದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕೊಡುಗೆಯಿಂದಲೇ ದೇಶ ವಿವಿಧತೆಯಲ್ಲಿ ಏಕತೆಯನ್ನು ಪಡೆದಿದೆ. ಆದರೆ, ಬಿಜೆಪಿಯವರು ಪಟೇಲರನ್ನು ಹೈಜಾಕ್ ಮಾಡುತ್ತಿರುವುದು ವಿಷಾದನೀಯ ಎಂದರು.

ನಂತರ ಸಂಸ್ಕೃತ ಚಿಂತಕಿ ಡಾ.ಹೆಚ್.ಎಲ್. ಶೈಲಾ, ಇಂದಿರಾಗಾಂಧಿ ಅವರ ಕೊಡುಗೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಮಾಜಿ ಸಂಸದರಾದ ತುಳಸಿದಾಸಪ್ಪ ಅವರ ಪತ್ನಿ ಸರೋಜ ತುಳಸಿದಾಸಪ್ಪ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮೈಸೂರು ಲ್ಯಾಕ್ ಅಂಡ್ ಪೇಂಟ್ ಅಧ್ಯಕ್ಷ ಹೆಚ್.ಡಿ. ಗಣೇಶ್, ಮಾಜಿ ಮೇಯರ್‌ಗಳಾದ ಮೋದಮಣಿ, ಪುಷ್ಪಲತಾ, ಚಿಕ್ಕಣ್ಣ, ಮುಖಂಡರಾದ ಭಾಸ್ಕರ್ ಗೌಡ, ತಲಕಾಡು ಮಂಜುನಾಥ್, ಈಶ್ವರ್ ಚಕಡಿ, ಶಿವಪ್ರಸಾದ್, ಸುನಂದ್ ಕುಮಾರ್, ರವಿ ಮಂಚೇಗೌಡನ ಕೊಪ್ಪಲು, ಎಸ್.ಸಿದ್ದಯ್ಯ, ಶಾಮು, ರಾಹುಲ್ ಕುಂಬರಹಳ್ಳಿ, ಮಹೇಶ್ ಮತ್ತಿತರರಿದ್ದರು.

ಹೈಕಮಾಂಡ್ ಹೇಳಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಲು ಸಿದ್ದನಿದ್ದೇನೆ...!

ಮುಖ್ಯಮಂತ್ರಿ ಬದಲಾವಣೆ ಚರ್ಚೆ ಎಲ್ಲಿಯೂ ಆಗಿಲ್ಲ. ಪಕ್ಷದಲ್ಲೂ ಆಗಿಲ್ಲ. ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿದ್ದೇವೆ ಎಂಬ ಮಾತನ್ನು ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಹಾಗಾಗಿ ಸಿಎಂ ಬದಲಾವಣೆ ನಿರ್ಧಾರ ಪಕ್ಷದ ಹೈಕಮಾಂಡ್‌ಗೆ ಬಿಡಲಾಗಿದೆ. ಎರಡೂವರೆ ವರ್ಷದ ಬಳಿಕ ಸಚಿವ ಸಂಪುಟ ಪುನರ್ ರಚನೆ ವಿಷಯ ಹೈಕಮಾಂಡ್ ಮುಂದೆ ಇಡಲಾಗಿದ್ದು, ಹೈಕಮಾಂಡ್ ಸೂಚನೆಯಂತೆಯೇ ಎಲ್ಲವೂ ನಡೆಯಲಿದೆ. ಕೆಲಸ, ಅನುಭವ, ಜಾತಿ, ಪ್ರಾಮಾಣಿಕತೆ ಎಲ್ಲವನ್ನೂ ನೋಡಿ ಸಚಿವ ಸಂಪುಟ ಪುನರ್ ರಚನೆ ನಡೆಯಲಿದೆ. ಹೈಕಮಾಂಡ್ ಹೇಳಿದರೆ ಸಚಿವ ಸ್ಥಾನಕ್ಕೆ ನಾನು ರಾಜೀನಾಮೆ ಕೊಡಲು ಸಿದ್ದನಿದ್ದೇನೆ. ನಾನು ಮಾತ್ರವಲ್ಲದೆ ಹೈಕಮಾಂಡ್ ಹೇಳಿದಂತೆ ಎಲ್ಲರೂ ನಡೆದುಕೊಳ್ಳುತ್ತಾರೆ.

- **ಎನ್.ಎಸ್.ಬೋಸರಾಜು, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ**

ಮೈಸೂರು ಮಿತ್ರ ಶನಿವಾರ 1 ನವೆಂಬರ್ 2025

ಮನೆ,ಮನೆಗಳಲ್ಲಿ ಜೆಡಿಎಸ್ ಇರುವಂತೆ ಮಾಡಿ

ಮಂಡ್ಯ ಜೆಡಿಎಸ್ ಮುಖಂಡರ ಸಭೆಯಲ್ಲಿ ಕೇಂದ್ರ ಸಚಿವ ಹೆಚ್‌ಡಿಕೆ ಕರೆ



ಮಂಡ್ಯ ಜಿಲ್ಲೆ ಜೆಡಿಎಸ್ ಮುಖಂಡರೊಂದಿಗೆ ಚರ್ಚಿಸುತ್ತಿರುವ ಕೇಂದ್ರ ಸಚಿವ ಕುಮಾರಸ್ವಾಮಿ.

- ವೈಮನಸ್ಸು ಬಿಟ್ಟು ಕೆಲಸ ಮಾಡಿ
- ಪಕ್ಷ ಸಂಘಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳಿ
- ಕಾರ್ಯಕರ್ತರು ಜನರ ಜೊತೆ ಇರಬೇಕು

> ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ನಮಗೆ ಉತ್ತಮ ಫಲಿತಾಂಶ ಬರಲಿಲ್ಲ. ಆದರೂ ನಾವು ಜನರ ಜತೆಯೇ ಇದ್ದೆವು. ಪರಿಣಾಮವಾಗಿ ಲೋಕಸಭೆ ಚುನಾವಣೆಯಲ್ಲಿ ಜನ ನಮ್ಮ ಕೈ ಹಿಡಿದರು. ಆ ಜನರ ಆಶೀರ್ವಾದದಿಂದ ನಾನು ಸಂಸತ್ ಸದಸ್ಯನಾಗಿ ಆಯ್ಕೆಯಾಗಿ ಕೇಂದ್ರದಲ್ಲಿ ಮಂತ್ರಿಯೂ ಆಗಿದ್ದೇನೆ. ಜಿಲ್ಲೆಯ ಜನರ ಜತೆ ನನಗೆ ರಾಜಕಾರಣಕ್ಕೂ ಮೀರಿದ ಭಾವನಾತ್ಮಕ ಸಂಬಂಧವಿದೆ. ಅದಕ್ಕೆ ಚ್ಯುತಿ ಬರಬಾರದಂತೆ ನೀವು ನಡೆದುಕೊಳ್ಳಬೇಕು. ಆ ಜನರ ಋಣ ತೀರಿಸುವ ಕೆಲಸವನ್ನು ನಾನು ಮಾಡಿಯೇ ಮಾಡುತ್ತೇನೆ. ಹೀಗಾಗಿ ನೀವೆಲ್ಲರೂ ಒಗ್ಗಟ್ಟಾಗಿ, ಪರಸ್ಪರ ಸಹಮತದಿಂದ ಪಕ್ಷದ ಕೆಲಸ ಮಾಡಬೇಕು. – ಹೆಚ್.ಡಿ.ಕುಮಾರಸ್ವಾಮಿ

ಬೆಂಗಳೂರು, ಅ.31– ಕೇಂದ್ರ ಸಚಿವರು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರೂ ಆಗಿರುವ ಹೆಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯ ಜಿಲ್ಲೆಯ ಪಕ್ಷದ ಮುಖಂಡರ ಸಭೆ ನಡೆಸಿ ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಕುರಿತು ಮಹತ್ವದ ಸಮಾಲೋಚನೆ ನಡೆಸಿ ಪ್ರತಿ ಮನೆ ಮತ್ತು ಗ್ರಾಮಗಳಲ್ಲಿಯೂ ಜೆಡಿಎಸ್ ಪಕ್ಷ ಇರುವಂತೆ ಮಾಡಬೇಕು ಎಂದರು.

ಬಿಡದಿಯ ತಮ್ಮ ತೋಟದಲ್ಲಿ ಶುಕ್ರವಾರ ದಂದು ರಾಜ್ಯಾಧ್ಯಕ್ಷರು ಕರೆದಿದ್ದ ಈ ಸಭೆಯಲ್ಲಿ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಮಂತ್ರಿಗಳಾದ ಡಿ.ಸಿ. ತಮ್ಮಣ್ಣ, ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕರಾದ ರವೀಂದ್ರ ಶ್ರೀಕಂಠಯ್ಯ, ಸುರೇಶ್ ಗೌಡ, ಡಾ.ಕೆ. ಅನ್ನದಾನಿ, ಶಾಸಕ ಮಂಜುನಾಥ್, ಜಿಲ್ಲಾಧ್ಯಕ್ಷ ರಮೇಶ್, ಮುಖಂಡ ರಾಮಚಂದ್ರ ಪಾಲ್ಗೊಂಡಿದ್ದರು.

ಜಿಲ್ಲೆಯ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಮುಖಂಡರ ಜತೆ ಕೂಲಂಕಷವಾಗಿ ಚರ್ಚೆ ನಡೆಸಿದ ಸಚಿವರು, ಪಕ್ಷ ಸಂಘಟನೆಯಲ್ಲಿ ಎಲ್ಲರೂ ಗಂಭೀರವಾಗಿ ತೊಡಗಿಸಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ಅಲ್ಲದೆ, ಡಿಸಿಸಿ ಬ್ಯಾಂಕ್ ಚುನಾವಣೆಯ ಬಗ್ಗೆ ಪ್ರಸ್ತಾಪಿಸಿದ ಸಚಿವರು, ಪಕ್ಷದ ಸಂಘಟನೆ ಬಗ್ಗೆ ಅಲಕ್ಷ್ಯ ಬೇಡ. ಕಳೆದ ಲೋಕಸಭೆ ಚುನಾವಣೆಯಲ್ಲಿ ದೊಡ್ಡ ಮಟ್ಟದ ಬಹುಮತದಲ್ಲಿ ಜಿಲ್ಲೆಯ ಜನತೆ ನಮ್ಮನ್ನು ಆಶೀರ್ವಾದ ಮಾಡಿದ್ದಾರೆ. ಅಧಿಕಾರ ವಿರಲಿ, ಇಲ್ಲದಿರಲಿ ಜನರ ಜತೆ ನೀವು ಸದಾ ಇರಬೇಕು. ಅವರ ನಿರೀಕ್ಷೆಯನ್ನು ಹುಸಿ ಮಾಡಬಾರದು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ಪ್ರತೀ ಮನೆ ಮತ್ತು ಗ್ರಾಮ ಗ್ರಾಮದಲ್ಲೂ ಪಕ್ಷ ಇರಬೇಕು: ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಸಂಘಟನಾ ಪ್ರವಾಸ ಮುಗಿದಿದೆ. ಅದಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ. ಆ ನಂತರ ನೀವುಗಳು ಹೆಚ್ಚಿನ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಮಾಡಿಸಬೇಕು. ಗ್ರಾಮ ಗ್ರಾಮದಲ್ಲಿಯೂ, ಮನೆ ಮನೆಯಲ್ಲಿಯೂ ಪಕ್ಷದ ಕಾರ್ಯಕರ್ತರು ಇರಬೇಕು ಎಂದು ಕುಮಾರಸ್ವಾಮಿ ಅವರು ಒತ್ತಿ ಹೇಳಿದರು.

ಪಕ್ಷವನ್ನು ಯಾರೂ ಲಘುವಾಗಿ ತೆಗೆದುಕೊಳ್ಳಬೇಡಿ. ಪಕ್ಷವಿದ್ದರಷ್ಟೇ ನಾವು ಎಂಬುದನ್ನು ಮರೆಯಬಾರದು. ಸಂಘಟನೆಯಲ್ಲಿ ಬದ್ಧತೆ, ಗಂಭೀರವಾಗಿ ತೊಡಗಿಸಿಕೊಳ್ಳಿ. ಜನಪರ ಕಾರ್ಯಕ್ರಮಗಳನ್ನು ರೂಪಿಸಿ. ರಾಜ್ಯ ಸರಕಾರದ ದುರಾಡಳಿತದಿಂದ ಜನರು ರೋಸಿ ಹೋಗಿದ್ದಾರೆ. ಜಿಲ್ಲೆಯ ರೈತರು ಇನ್ನಿಲ್ಲದ ಸಂಕಷ್ಟದಲ್ಲಿದ್ದಾರೆ. ಮುಖ್ಯವಾಗಿ ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ಕಬ್ಬು ಅರೆಯದ ಕಾರಣ ಸಮಸ್ಯೆಯಲ್ಲಿ ಸಿಲುಕಿದ್ದಾರೆ. ನಿಮ್ಮ ಜವಾಬ್ದಾರಿ ಹೆಚ್ಚಿದೆ. ಸದಾ ಜನರ ಜತೆ ನಿಂತು ದುಡಿಮೆ ಮಾಡಿ ಎಂದು ಅವರು ಸೂಚಿಸಿದರು.

ವೈಮನಸ್ಸು ಬಿಟ್ಟು ಕೆಲಸ ಮಾಡಿ: ಸಣ್ಣಪುಟ್ಟ ವೈಮನಸ್ಸು ಇದ್ದರೆ ಮೊದಲು ಬಿಡಿ. ಅದರಿಂದ ಪಕ್ಷದ ಬೆಳವಣಿಗೆಗೆ ಧಕ್ಕೆ ಆಗುತ್ತದೆ. ಯಾರೂ ಪಕ್ಷಕ್ಕೆ ಹಾನಿ ಆಗುವ ರೀತಿ ನಡೆದುಕೊಳ್ಳಬಾರದು. ಏನೇ ಸಮಸ್ಯೆ ಇದ್ದರೂ ಸೌಹಾರ್ದಯುತವಾಗಿ ಸಭೆ ನಡೆಸಿ ಬಗೆಹರಿಸಿಕೊಳ್ಳಿ. ಪಕ್ಷದ ಸಂಘಟನೆ ಹಾಗೂ ಸಾಂಸ್ಥಿಕ ನೇಮಕಗಳಲ್ಲಿ ಗುರುತರ ಬದಲಾವಣೆಗಳು ಆಗಲಿವೆ. ಮುಂದಿನ ದಿನಗಳಲ್ಲಿ ಪಕ್ಷದ ವರ್ಚಸ್ಸು, ಬೆಳವಣಿಗೆ ದೃಷ್ಟಿಯಿಂದ ಕೆಲಸ ಮಾಡಬೇಕು. ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲ. ಆಂತರಿಕ ಕಚ್ಚಾಟ, ಆಡಳಿತ ವಿರೋಧಿ ಅಲೆ ಸರ್ಕಾರವನ್ನು ಬಾಧಿಸುತ್ತಿದೆ. ನೀವೆಲ್ಲರೂ ಎಚ್ಚರಿಕೆಯಿಂದ ಕೆಲಸ ಮಾಡಬೇಕು ಎಂದು ಖಂಡತುಂಡವಾಗಿ ಸಚಿವರು ಹೇಳಿದರು.

ಯಜಮಾನ ಸುಬ್ಬೇಗೌಡ ನಿಧನ

ಚಿನಕುರಳಿ ಸ್ವಯಂಘೋಷಿತ ಬಂದ್



ಚಿನಕುರಳಿ, ಅ.31– ಚಿನಕುರಳಿ ಗ್ರಾಮದ ಯಜಮಾನರಾದ ಸುಬ್ಬೇಗೌಡ(90) ಅನಾರೋಗ್ಯದಿಂದ ಶುಕ್ರವಾರ ಮುಂಜಾನೆ ನಿಧನರಾದರು.

ಅನಾರೋಗ್ಯಕ್ಕೆ ಒಳಗಾಗಿದ್ದ ಯಜಮಾನ ಸುಬ್ಬೇಗೌಡ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿಯೇ ಶುಕ್ರವಾರ ಮುಂಜಾನೆ ನಿಧನರಾದರು. ಸುಬ್ಬೇಗೌಡರು ಗ್ರಾಮದ ಯಜಮಾನರಾಗಿ ಅಪಾರ ಗೌರವ ಸಂಪಾದಿಸಿದ್ದರು. ಹಾಗಾಗಿ ಯಜಮಾನ್ ಸುಬ್ಬೇಗೌಡ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೆ ಚಿನಕುರಳಿ ಗ್ರಾಮದಲ್ಲಿರುವ ಎಲ್ಲಾ ಅಂಗಡಿಮುಂಗಟ್ಟು, ಹೋಟೆಲ್‌ಗಳನ್ನು ಸ್ವಯಂ ಪ್ರೇರಿತರಾಗಿ ಬಂದ್ ಮಾಡುವ ಮೂಲಕ ಗೌರವ ಸೂಚಿಸಿದರು. ಚಿನಕುರಳಿ ಗ್ರಾಮದ ಸ್ವನಿವಾಸದ ಬಳಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಟಿಎಪಿಸಿಎಂಎಸ್ ನಿರ್ದೇಶಕ ಸಿ.ಎಸ್. ಗೋಪಾಲಗೌಡ, ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮೀ ಭಾಗವಹಿಸಿ ಅಂತಿದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವಾನ ಹೇಳಿ ಸಂತಾಪ ಸೂಚಿಸಿದರು.

ಮೃತರು ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣುಮಕ್ಕಳು ಸೇರಿದಂತೆ ಸೊಸೆಯಂದಿರು, ಮೊಮ್ಮಕ್ಕಳನ್ನು ಸೇರಿದಂತೆ ಅಪಾರ ಬಂಧುಗಳು ಅಗಲಿದ್ದಾರೆ.

ಶುಕ್ರವಾರ ಸಂಜೆ ಗ್ರಾಮದ ಹೊರವಲಯದಲ್ಲಿರುವ ಸ್ವಜಮೀನಿನಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮತ್ಸ್ಯ ಸಂಜೀವಿನಿ ಯೋಜನೆಯಡಿ ಸ್ವ–ಸಹಾಯ ಸಂಘಗಳಿಗೆ 9 ಲಕ್ಷ ಮೀನು ಮರಿಗಳ ವಿತರಣೆ



ಸಮಗ್ರ ಮೀನು ಸಾಕಾಣಿಕೆ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿದ ನಂದಿನಿ.

ಮಂಡ್ಯ, ಅ.31– ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ಮತ್ಸ್ಯ ಸಂಜೀವಿನಿ, ಕುಕ್ಕುಟ ಸಂಜೀವಿನಿ, ಕ್ಷೀರ ಸಂಜೀವಿನಿಯಂತಹ ಕಾರ್ಯಕ್ರಮಗಳು ಲಭ್ಯವಿದ್ದು, ಸದರಿ ಚಟುವಟಿಕೆಗಳನ್ನು ಬಳಸಿಕೊಂಡು ಸ್ವ–ಸಹಾಯ ಸಂಘಗಳ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಬೇಕು ಎಂದು, ಜಿಪಂ ಸಿಇಓ ನಂದಿನಿ ಕೆ.ಆರ್. ಅವರು ಕರೆ ನೀಡಿದರು.

ಗುರುವಾರ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಮಗ್ರ ಮೀನು ಸಾಕಾಣಿಕೆ ಕುರಿತ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿದ ಅವರು ಸ್ವ–ಸಹಾಯ ಸಂಘಗಳ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿಯೂ ಯಶಸ್ವಿಯಾಗಿ ಭಾಗವಹಿಸಬೇಕು ಆ ಮೂಲಕ ಉದ್ಯಮದ ಮಾದರಿಯಲ್ಲಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

9 ಲಕ್ಷ ಮೀನು ಮರಿಗಳ ವಿತರಣೆ: ಜಿಲ್ಲೆ ಆಸಕ್ತ 49 ಸ್ವ–ಸಹಾಯ ಸಂಘಗಳಿಗೆ 49 ಕೆರೆಗಳಲ್ಲಿ ಮೀನು ಸಾಕಾಣಿಕೆಗಾಗಿ 9 ಲಕ್ಷ ಮೀನು ಮರಿಗಳನ್ನು ವಿತರಿಸಲಾಗುತ್ತಿದ್ದು, ಸಂಜೀವಿನಿ ಸ್ವ–ಸಹಾಯ ಸಂಘದ ಮಹಿಳೆಯರು ಮೀನುಗಾರಿಕೆ ಮಾಡುವ ಮೂಲಕ ಹೆಚ್ಚಿನ ಆದಾಯ ಪಡೆದು ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಯೋಜನೆಯಡಿ ಅಂದಾಜು 245 ಮಹಿಳೆಯರಿಗೆ ಸ್ವ–ಉದ್ಯೋಗ ಕಲ್ಪಿಸಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಲಹೆ: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ನೀಡಲಾಗುವ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳದೆ ಆದಾಯೋತ್ಪನ್ನ ಚಟುವಟಿಕೆಗಳಿಗೆ ಮಾತ್ರ ಬಳಕೆ ಮಾಡಿಕೊಂಡು, ಇತರ ಸಂಘಗಳಿಗೆ ಮಾದರಿಯಾಗಬೇಕು ಎಂದರು.

ಮೀನು ಸೇವನೆಯಿಂದ ಆರೋಗ್ಯಕ್ಕೆ ಅನೇಕ ಲಾಭಗಳಿದ್ದು, ಮೀನುಗಳಲ್ಲಿನ ಒಮೆಗಾ ಫ್ಯಾಟ್ – 3 ಇಂದ ಮೆದುಳಿನ ಆರೋಗ್ಯ ಉತ್ತಮಗೊಳ್ಳುತ್ತದೆ ನಿಯಮಿತವಾದ ಮೀನು ಸೇವನೆಯು ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಿಸಿ ಹೃದಯಾಘಾತದ ಅಪಾಯವನ್ನು ಕಡಿಮೆ ಮಾಡುತ್ತದೆ. ಹೀಗೆ ಹತ್ತು ಹಲವು ಪ್ರಯೋಜನಗಳಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಾಗೂ ಮೀನು ಸೇವನೆಯ ಬಗೆಗಿನ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ವ್ಯಾಪಕ ಮಾಹಿತಿ ನೀಡಲು ಮೀನುಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮೀನುಗಾರಿಕೆ ಒಂದು ಲಾಭದಾಯಕ ಚಟುವಟಿಕೆಯಾಗಿದ್ದು, ತರಬೇತಿಯಲ್ಲಿ ತಿಳಿಸಲಾಗುವ ಮಾಹಿತಿಗಳನ್ನು ಪಡೆದು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು ಮೀನುಗಾರಿಕೆಯಲ್ಲಿ ಯಶಸ್ಸು ಗಳಿಸುವಂತೆ ಸ್ವ–ಸಹಾಯ ಸಂಘದ ಮಹಿಳೆಯರಿಗೆ ಶುಭ ಕೋರಿದರು. ತರಬೇತಿ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಪಂ ಉಪಕಾರ್ಯದರ್ಶಿ (ಅಭಿವೃದ್ಧಿ) ಲಕ್ಷ್ಮಿ, ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕರಾದ ಬಾಬಾ ಸಾಬ್ ಸೇರಿದಂತೆ ಇತರರು ಹಾಜರಿದ್ದರು.

ನಾಗಮಂಗಲದಲ್ಲಿ ಪೊಲೀಸರಿಂದ ಏಕತಾ ಓಟ



ನಾಗಮಂಗಲದಲ್ಲಿ ನಡೆದ ಏಕತಾ ಓಟದಲ್ಲಿ ಪಾಲ್ಗೊಂಡಿರುವ ಪೊಲೀಸರು.

ನಾಗಮಂಗಲ, ಅ.31– ಸ್ವತಂತ್ರ ಭಾರತದ ಮೊದಲ ಉಪ ಪ್ರಧಾನಿ ಹಾಗೂ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನದ ಅಂಗವಾಗಿ ಭಾರತವು ರಾಷ್ಟ್ರೀಯ ಏಕತಾ ದಿನವನ್ನು ಆಚರಿಸುತ್ತಿದೆ.

ಭಾರತದ ಉಕ್ಕಿನ ಮನುಷ್ಯ ಎಂದು ಹೆಸರುವಾಸಿ ಹೊಂದಿರುವ ಸರ್ದಾರ್ ವಲ್ಲಭಭಾಯ್ ಪಟೇಲ್ ರವರು 570ಕ್ಕೂ ಹೆಚ್ಚು ರಾಜಪ್ರಭುತ್ವಗಳನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಏಕೀಕರಣದ ಶಿಲ್ಪಿ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಜನ್ಮದಿನದ ಅಂಗವಾಗಿ ಏಕತೆಗಾಗಿ ಓಟ ಕಾರ್ಯಕ್ರಮವನ್ನು ನಾಗಮಂಗಲ ಪೊಲೀಸ್ ಇಲಾಖೆ ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ನಾಗಮಂಗಲ ಪಟ್ಟಣ ಪೊಲೀಸ್ ಠಾಣೆ, ಬೆಳ್ಳೂರು ಪೊಲೀಸ್ ಠಾಣೆ, ಗ್ರಾಮಾಂತರ ಪೊಲೀಸ್ ಠಾಣೆ, ಬಿಂಡಿಗನವಿಲೆ ಪೊಲೀಸ್ ಠಾಣೆ ಹಾಗೂ ಪೊಲೀಸ್ ಸಿಬ್ಬಂದಿವರ್ಗ ಮತ್ತು ಅಧಿಕಾರಿವರ್ಗ ಭಾಗವಹಿಸಿ ನಾಗಮಂಗಲ ಪಟ್ಟಣದ ಟಿ.ಬಿ ಬಡಾವಣೆಯಿಂದ ಮಂಡ್ಯ ವೃತ್ತದವರೆಗೆ ಏಕತೆಗಾಗಿ ಓಟ ಅಂಗವಾಗಿ ನೂರಾರು ಪೊಲೀಸ್ ಸಿಬ್ಬಂದಿ ಭಾಗವಹಿಸಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ನಾಗಮಂಗಲ ಡಿವೈಎಸ್‌ಪಿ ಚೆಲುವರಾಜು ಮಾತನಾಡಿ ನಮ್ಮ ದೇಶ ವಿವಿಧ ಭಾಷೆ ಜಾತಿ ಧರ್ಮ ಒಳಗೊಂಡದಂತೆ ಭಾರತೀಯರು ಏಕತೆಯಿಂದ ಬದುಕುತ್ತಿದ್ದೇವೆ. ಈ ದಿನ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಜನ್ಮದಿನವನ್ನು ಆಚರಣೆ ಮಾಡುತ್ತಿದ್ದು, ಈ ಸುದಿನದ ಕಾರ್ಯಕ್ರಮದ ಅಂಗವಾಗಿ ಇಲಾಖೆ ವತಿಯಿಂದ ಏಕತೆಗಾಗಿ ಓಟ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಮಹಾತ್ಮ ಗಾಂಧೀಜಿಯಿಂದ ಉಕ್ಕಿನ ಮನುಷ್ಯ ಎಂದೇ ಬಿರುದು ಪಡೆದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇಶದಲ್ಲಿ ಇದರ ಅಂಗವಾಗಿ ಈ ದಿನ ರಾಷ್ಟ್ರೀಯ ಏಕತಾ ಓಟ ದಿನ ಆಚರಿಸುತ್ತಿದ್ದೇವೆ. ಅವರು ಹಾಕಿಕೊಟ್ಟ ಉತ್ತಮ ಹಾದಿಯಲ್ಲಿ ನಾವೆಲ್ಲರೂ ಕೂಡ ನಡಿಯೋಣ ಎಂದು ತಿಳಿಸಿದರು.

ಸಿಪಿಐ ಹೇಮಂತ್ ಕುಮಾರ್, ಬಿಂಡಿಗನವಿಲೆ ಪೊಲೀಸ್ ಠಾಣೆ ನಿರೀಕ್ಷಕ ಮಾರುತಿ, ಗ್ರಾಮಾಂತರ ಠಾಣೆ ರಾಜೇಂದ್ರ ಪಟ್ಟಣ ಪೊಲೀಸ್ ಠಾಣೆ ಶಿವಕುಮಾರ್, ಬೆಳ್ಳೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್ ಹಾಗೂ ನೂರಾರು ಪೊಲೀಸ್ ಸಿಬ್ಬಂದಿಗಳು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಮತ್ತೊಬ್ಬ ರೈತ ಬಲಿ



ಕಾಡಂಚಿನ ಗ್ರಾಮದಲ್ಲಿ ಹುಲಿ ಹಾವಳಿಯನ್ನು ತಡೆಯುವಂತೆ ಆಗ್ರಹಿಸಿ ಗ್ರಾಮಸ್ಥರು ಹುಲಿ ದಾಳಿಗೆ ಬಲಿಯಾದ ದೊಡ್ಡನಿಂಗಯ್ಯ ಅವರ ಮೃತದೇಹ ತೆರವುಗೊಳಿಸದೆ ಅಹೋರಾತ್ರಿ ಧರಣಿ ನಡೆಸುತ್ತಿರುವುದು.

ಶುಕ್ರವಾರ ಹುಲಿ ದಾಳಿಗೆ ಬಲಿಯಾದವರು. ಅವರ ದೇಹ ಅರಣ್ಯ ಪ್ರದೇಶದ ಗಡಿಗೆ ತುಸು ದೂರದಲ್ಲಿ ಪತ್ತೆಯಾಗಿದೆ. ಅರಣ್ಯದಂಚಿನ 20 ಮೀಟರ್ ಅಂತರದಲ್ಲಿರುವ ತಮ್ಮ ಜಮೀನಿನಲ್ಲಿ ದನ ಮೇಯಿಸುತ್ತಿದ್ದಾಗ ದೊಡ್ಡನಿಂಗಯ್ಯ ಅವರ ಮೇಲೆ ಹುಲಿ ದಾಳಿ ಮಾಡಿ, ಅರಣ್ಯದೊಳಗೆ ಎಳೆದೊಯ್ದಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ದಾಳಿ ನಡೆಸಿ ಪರಾರಿ: ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಹುಲಿ ದಾಳಿ ಪ್ರಕರಣ ನಡೆದಿದ್ದು, ದೊಡ್ಡನಿಂಗಯ್ಯ ಅವರ ಮೇಲೆರಗುತ್ತಿದ್ದ ಹುಲಿಯನ್ನು ಅಲ್ಲಿಯೇ ಇದ್ದ ಕೆಲವರು ಗಮನಿಸಿದ್ದಾರೆ. ಎಲ್ಲರೂ ಕೂಗಿಕೊಂಡಾಗ ಹುಲಿ ಪರಾರಿಯಾಗಿದೆ. ಜನ ಸಮೀಪ ಬಂದು ನೋಡುವಷ್ಟರಲ್ಲಾಗಲೇ ದೊಡ್ಡನಿಂಗಯ್ಯ ಮೃತಪಟ್ಟಿದ್ದರು ಎಂದು ಕೆಲ ಗ್ರಾಮಸ್ಥರು ತಿಳಿಸಿದ್ದಾರೆ.

ಟ್ರೆಂಚ್ ದಾಟಿ ಮೃತದೇಹ ಹೊರಗೆ ತಂದ ಗ್ರಾಮಸ್ಥರು: ದೊಡ್ಡನಿಂಗಯ್ಯ ಅವರ ಮೃತದೇಹ ಕಾಡಂಚಲ್ಲಿ ಅರಣ್ಯ ಇಲಾಖೆ ತೆಗೆದಿರುವ 15 ಅಡಿ ಆಳದ ಟ್ರೆಂಚ್ ದಾಟಿ ಅರಣ್ಯ ಪ್ರದೇಶದಲ್ಲಿ ಇದ್ದದ್ದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಅರಣ್ಯ ಪ್ರದೇಶಕ್ಕೆ ನುಸುಳಿದ್ದ ಜಾನುವಾರುಗಳನ್ನು ಹೊಡೆದು ತರಲು ದೊಡ್ಡನಿಂಗಯ್ಯ ಅರಣ್ಯದೊಳಗೆ ಹೋಗಿದ್ದರೆ ಎಂಬ ಪ್ರಶ್ನೆ ಮೂಡಿದೆ.

15 ಕಿಮಿ ಅಂತರ: ಈ ಹಿಂದೆ ನಡೆದ ಹುಲಿ ದಾಳಿ ಸ್ಥಳದಿಂದ ಇಂದು ನಡೆದ ಹುಲಿ ದಾಳಿ ಸ್ಥಳಕ್ಕೆ 15 ಕಿ.ಮಿ ಅಂತರ ಇರುವುದರಿಂದ ಬೆಣ್ಣೆಗೆರೆಯಲ್ಲಿ ದಾಳಿ ನಡೆಸಿದ ಹುಲಿಗೂ ಕೂಡಗಿ(ಕುರ್ಣೆಗಾಲ)ಯಲ್ಲಿ ದಾಳಿ ನಡೆಸಿದ ಹುಲಿಗೂ ಸಂಬಂಧವಿಲ್ಲ. ಎರಡೂ ಪ್ರಕರಣದಲ್ಲೂ ದಾಳಿ ನಡೆಸಿರುವ ಹುಲಿ ಬೇರೆಯೇ ಆಗಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಭಯಗೊಂಡ ಅರಣ್ಯ ಸಿಬ್ಬಂದಿ, ರೊಚ್ಚಿಗೆದ್ದ ಗ್ರಾಮಸ್ಥರು: ಬೆಣ್ಣೆಗೆರೆ, ಮುಳ್ಳೂರು ವ್ಯಾಪ್ತಿಯಲ್ಲಿ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಸಿಬ್ಬಂದಿಗೆ ಕೂಡಗಿ–ಕುರ್ಣೆಗಾಲದಲ್ಲಿ ಹುಲಿ ದಾಳಿ ನಡೆಸಿರುವ ವಿಷಯ ತಿಳಿಯಿತು. ಎಲ್ಲರೂ ಅರಣ್ಯದಂಚಿನ ದಟ್ಟವಾದ ಪೊದೆಗಳಿರುವ ಸ್ಥಳದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ, ಮುಳ್ಳೂರು ಸಮೀಪದ ಕ್ಯಾಂಪ್‌ಗೆ ವಾಪಸ್ಸಾಗುವ ವೇಳೆಗೆ ಅರ್ಧಗಂಟೆಗೂ ಹೆಚ್ಚು ಸಮಯ ಬೇಕಾಯಿತು. ಪೊಲೀಸರ ರಕ್ಷಣೆಯಿಲ್ಲದೆ ಸ್ಥಳಕ್ಕೆ ಹೋದರೆ ಹಲ್ಲೆಯ ಆತಂಕ ಅರಣ್ಯ ಸಿಬ್ಬಂದಿಗಳಲ್ಲಿತ್ತು. ಆದರೆ, ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬರಲು ತಡ ಮಾಡಿದರು ಎಂದು ಗ್ರಾಮಸ್ಥರು ರೊಚ್ಚಿಗೆದ್ದಿದ್ದರು. ಬಳಿಕ ಸ್ಥಳಕ್ಕೆ ಪೊಲೀಸರು ಬಂದ ನಂತರ ಅರಣ್ಯ ಸಿಬ್ಬಂದಿ ಬಂದು ಗ್ರಾಮಸ್ಥರೊಂದಿಗೆ ಸಮಾಲೋಚಿಸಿದರು.

ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಉಪಟಳಕ್ಕೆ ಕಡಿವಾಣ ಹಾಕಬೇಕು. ರೈತರಿಗೆ ರಕ್ಷಣೆ ನೀಡಬೇಕು. ಬೆಳೆಹಾನಿ ತಡೆಗಟ್ಟಬೇಕು. ಬೆಳೆ ನಷ್ಟ ಅನುಭವಿಸಿದ ರೈತರಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ರಾತ್ರಿ 8 ಗಂಟೆಯಾದರೂ ಅರಣ್ಯಾಧಿಕಾರಿಗಳೊಂದಿಗೆ ಗ್ರಾಮಸ್ಥರು ಮಾತಿನ ಚಕಮಕಿ ನಡೆಯುತ್ತಲೆ ಇತ್ತು. ಮೃತದೇಹ ಹೊಲದಲ್ಲಿಯೆ ಇದ್ದು, ಅದನ್ನು ತೆರವುಗೊಳಿಸಲು ಗ್ರಾಮಸ್ಥರು ಅವಕಾಶ ನೀಡಿಲ್ಲ.

ಹುಲಿಗಳ ಆಕ್ರೋಶಕ್ಕೆ ಅಮಾಯಕರ ಬಲಿ

ಪಾಳು ಬಿದ್ದ ಭೂಮಿಯನ್ನೇ ಮರಿಗಳ ಆರೈಕೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದು, ಆಕಸ್ಮಿಕವಾಗಿ ಎದುರಾಗುವ ಜನ– ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದೆ.

ಸರಗೂರು ತಾಲೂಕಿನ ಬಡಗಲಪುರ, ಮುಳ್ಳೂರು, ಬೆಣ್ಣೆಗೆರೆ, ನಂಜನಗೂಡು ತಾಲೂಕಿನ ಆಂಜನಾಪುರ, ಈರೇಗೌಡನ ಹುಂಡಿ ಸೇರಿದಂತೆ ಕಾಡಂಚಿನ ಗ್ರಾಮಗಳಲ್ಲಿ ಬೀಳು ಬಿದ್ದಿರುವ ಜಮೀನಿನಲ್ಲಿ ಬೆಳೆದಿರುವ ದಟ್ಟಪೊದೆಗಳನ್ನೇ ಗರ್ಭಿಣಿ ಹುಲಿಗಳು ಕರುಳ ಕುಡಿಗಳ ಸುರಕ್ಷತೆಯ ಆರೈಕೆಗಾಗಿ ಆಯ್ಕೆ ಮಾಡಿಕೊಳ್ಳುತ್ತಿರುವುದು ಮಾನವ–ವನ್ಯಜೀವಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ. ಕಾಡಂಚಿನ ಸುರಕ್ಷಿತ ತಾಣದಲ್ಲಿ ಸುಮಾರು ಎರಡು ವರ್ಷ ವಾಸ್ತವ್ಯ ಹೂಡಿ ಮರಿಗಳನ್ನು ಪೋಷಿಸಿಕೊಂಡು ಮತ್ತೆ ಅರಣ್ಯ ಪ್ರವೇಶಿಸುತ್ತಿರುವ ಸಂಗತಿ ಬೆಳಕಿಗೆ ಬಂದಿದೆ.

ಮರಿಗಳಿರುವಾಗ ತಾಯಿ ಹುಲಿ ಹೆಚ್ಚು ಆಕ್ರಮಣಕಾರಿ. ಮರಿಗಳಿಗೆ ಅಪಾಯವಿದೆ ಎಂದು ಹತ್ತಿರ ಬಂದ ಜನ–ಜಾನುವಾರು ಮೇಲೆ ದಾಳಿ ನಡೆಸುತ್ತವೆ. ಹುಲಿಗಳ ಈ ನೈಸರ್ಗಿಕ ಸ್ವಭಾವವೇ ಅರಣ್ಯ ಇಲಾಖೆ ಹಾಗೂ ಕಾಡಂಚಿನ ಜನರ ನಡುವೆ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದ್ದು, ಹುಲಿಗಳ ಉಪಟಳಕ್ಕೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಇನ್ನು ಸರಿದಾರಿ ಕಂಡುಕೊಂಡಿಲ್ಲ ಎಂಬ ದೂರಿದೆ.

> **ಅಕ್ಕ–ತಂಗಿಯರು**
>
> ಬಡಗಲಪುರದಲ್ಲಿ ದಾಳಿ ನಡೆಸಿದ ಹುಲಿ ಹಾಗೂ ಬೆಣ್ಣೆಗೆರೆ ಬಳಿ ದಾಳಿ ನಡೆಸಿದ ಹುಲಿ ಒಂದೇ ತಾಯಿಯ ಮರಿಗಳಾಗಿವೆ ಎನ್ನಲಾಗಿದೆ. ಬೆಣ್ಣೆಗೆರೆಯಲ್ಲಿ ದಾಳಿ ನಡೆಸಿದ ಹುಲಿ 2015ರಿಂದಲೂ ನುಗು ವಲಯದಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ. ಕೊನೆ ಹಂತದ ಮರಿಗಳಿಗೆ ಜನ್ಮ ನೀಡಿದೆ. ಅದಕ್ಕೆ 10 ವರ್ಷ ವಯಸ್ಸಾಗಿರುವುದರಿಂದ ಈಗ ಜನಿಸಿದ ನಾಲ್ಕು ಮರಿಗಳ ಪಾಲನೆಯಲ್ಲಿರಬಹುದು ಎಂದು ಅಂದಾಜಿಸಲಾಗಿದೆ. ಅಂಜನಾಪುರದಲ್ಲಿ ಸಿಕ್ಕ ಹೆಣ್ಣು ಹುಲಿಗೆ 8 ವರ್ಷವಾಗಿದ್ದು, ಅದಕ್ಕೆ ಒಂದೂವರೆ ವರ್ಷದ ಮೂರು ಮರಿಗಳಿದ್ದವು ಎಂದು ಹೇಳಲಾಗುತ್ತಿದೆ. ಅವುಗಳಲ್ಲಿ ಒಂದು ಮರಿ ಈಗ ಸೆರೆ ಸಿಕ್ಕಿದ್ದು, ಇನ್ನೆರಡು ಮರಿಗಳು ಕಾಡಂಚಿನಲ್ಲಿಯೇ ಇರಬಹುದು ಎಂದು ಅಂದಾಜಿಸಲಾಗಿದೆ.

ತಾಯಿ–ಮರಿ ಸೆರೆ: ಬಡಗಲಪುರ ಗ್ರಾಮದ ಬಳಿ ಮಹದೇವೆಗೌಡ ಎಂಬುವರ ಮೇಲೆ ದಾಳಿ ನಡೆಸಿದ ಹುಲಿ ಮತ್ತು ಅದರ ಒಂದೂವರೆ ವರ್ಷದ ಹೆಣ್ಣು ಮರಿಯನ್ನು ಈಗಾಗಲೇ ಅರಣ್ಯ ಇಲಾಖೆ ಸುರಕ್ಷಿತವಾಗಿ ಸೆರೆ ಹಿಡಿದಿದೆ. ಅ.18ರಂದು ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಒಂದೂವರೆ ವರ್ಷದ ಹೆಣ್ಣು ಹುಲಿ ಮರಿ ಸೆರೆ ಸಿಕ್ಕಿತ್ತು. ಅದರ ಮುಂಗಾಲಿಗೆ ಗಾಯವಾಗಿತ್ತು. ಅ.26ರಂದು ಬೆಣ್ಣೆಗೆರೆ ಬಳಿ ರಾಜಶೇಖರ ಎಂಬುವರನ್ನು ಬಲಿ ಪಡೆದ ಹುಲಿಗಾಗಿ ಅ.28ರಂದು ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದಾಗ ನಂಜನಗೂಡು ತಾಲೂಕಿನ ಅಂಜನಾಪುರ–ಈರೇಗೌಡನಹುಂಡಿ ಬಳಿ 8 ವರ್ಷದ ಹೆಣ್ಣು ಹುಲಿ ಸೆರೆ ಸಿಕ್ಕಿತ್ತು.

ತಾಯಿ ಮಡಿಲಿಗೆ ಮಗಳು: ಅ.18 ರಂದು ಸೆರೆ ಸಿಕ್ಕ ಹುಲಿ ಮರಿ ಅ.28ರಂದು ಸೆರೆ ಸಿಕ್ಕ ಹುಲಿಯ ಮರಿಯಾಗಿದ್ದು, ಇದೀಗ ಪುನರ್ವಸತಿ ಕೇಂದ್ರದಲ್ಲಿ ತಾಯಿ–ಮಗಳನ್ನು ಒಂದು ಮಾಡುವ ಕಾರ್ಯ ಮುಂದುವರೆದಿದೆ. ತಾಯಿ ಹುಲಿ 2018ರಿಂದಲೂ ನುಗು, ಹೆಡಿಯಾಲ ವಲಯದಲ್ಲಿ ಸಂಚರಿಸುತ್ತಿತ್ತು.

ಎರಡು ಗಂಡುಮರಿಗಳ ರಕ್ಷಣೆ: ಬೆಣ್ಣೆಗೆರೆಯಲ್ಲಿ ರಾಜಶೇಖರ ಮೇಲೆ ದಾಳಿ ನಡೆಸಿದ ಹುಲಿಗೆ 35ರಿಂದ 40 ದಿನಗಳ ನಾಲ್ಕು ಮರಿಗಳಿವೆ ಎನ್ನಲಾಗಿದೆ. ಕೂಂಬಿಂಗ್ ನಡೆಸುತ್ತಿದ್ದ ಅರಣ್ಯ ಸಿಬ್ಬಂದಿ ದಟ್ಟ ಪೊದೆಯಲ್ಲಿದ್ದ ಹುಲಿಗಳ ಚೀರಾಟ ಕೇಳಿ ಪರಿಶೀಲಿಸಿದಾಗ ಎರಡು ಗಂಡು ಮರಿಗಳು ಸಿಕ್ಕಿವೆ. ಅದನ್ನು ತಾಯಿ ಮಡಿಲಿಗೆ ಸೇರಿಸುವ ಸತತ ಪ್ರಯತ್ನ ವಿಫಲವಾಗಿದೆ. ವಾಕ್ ಥ್ರೂ ಕೇಜ್‌ಯಿಟ್ಟು ತಾಯಿ ಹುಲಿ ಸೆರೆಗೆ ನಡೆಸಿದ ಯತ್ನ ವಿಫಲವಾಗಿದೆ. ಬೋನ್ ಬಳಿ 2–3 ಸಲ ಬಂದ ತಾಯಿ ಹುಲಿ ಬೋನಿಗೆ ಬೀಳದೆ ಪಲಾಯನಗೈದಿದೆ. ಇದರಿಂದ ಆ ಎರಡು ಗಂಡು ಮರಿಯನ್ನು ರಕ್ಷಣೆ ಮಾಡಿ, ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಕಳೆದ (ಅ.30) ರಾತ್ರಿ ರವಾನಿಸಲಾಗಿದೆ. ತಾಯಿ ಹುಲಿ ಇನ್ನೆರಡು ಮರಿಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿರುವ ಶಂಕೆಯಿದ್ದು, ಆ ಎರಡು ಮರಿಯೊಂದಿಗೆ ತಾಯಿ ಹುಲಿಯನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಕೂಂಬಿಂಗ್ ನಡೆಸುತ್ತಿದೆ.

ರಾಜ್ಯೋತ್ಸವ ಆಚರಣೆಯಾಗುತ್ತಿದೆ!

ಇನ್ನೂ ನಿರ್ಮಾಣವಾಗಿಲ್ಲ. ಈ ವಿಚಾರದಲ್ಲಿ ನಾವು ಬಹಳ ಹಿಂದುಳಿದಿದ್ದೇವೆ.

ಕಾರಣ, ನಮ್ಮ ಜನತೆಗೆ ಕನ್ನಡದ ಬಗ್ಗೆ ಪ್ರೀತಿ ಇಲ್ಲ. ಈ ನಿಟ್ಟಿನಲ್ಲಿ ಸರ್ಕಾರಕ್ಕೂ ಇಚ್ಛಾಶಕ್ತಿ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಕನ್ನಡದ ಹಿನ್ನಡೆ ಆಗುತ್ತಿದೆಯೇ ಹೊರತು, ಮುನ್ನಡೆಯನ್ನು ಕಾಣುತ್ತಿಲ್ಲ. ಈ ಬಗ್ಗೆ ಎಚ್ಚರವೇ ಇಲ್ಲವಾಗಿದೆ. ಕನ್ನಡದ ಜಾಗೃತಿಯೇ ಮರೆಯಾಗುತ್ತಿದೆ. ನಾವು ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಭಾಷೆಯ ಪರಿಸ್ಥಿತಿ ಇನ್ನೂ ಶೋಚನೀಯವಾಗುತ್ತದೆ.

'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ, ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ...' ಎಂದು ರಾಷ್ಟ್ರಕವಿ ಕುವೆಂಪು ಅವರು ಕನ್ನಡ ಭಾಷೆಯ ಮೇಲೆ ಹೊರ ಭಾಷೆಗಳ ಪ್ರಭಾವ ಮತ್ತು ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿ, ಕನ್ನಡಿಗರು ಜಾಗೃತರಾಗಬೇಕು ಎಂದು ಆಶಿಸಿದ್ದಾರೆ. ಆದರೆ ಕುವೆಂಪು ಅವರು ಹೇಳಿದ್ದನ್ನು ನಾವು ಅನುಷ್ಠಾನಕ್ಕೆ ತರುತ್ತಿಲ್ಲ.

ಎಲ್ಲಾ ಭಾಷಿಗರೂ ತಮ್ಮ ಭಾಷೆ ಬಗ್ಗೆ ಪ್ರೀತಿ–ಅಭಿಮಾನ ಹೊಂದಿದ್ದಾರೆ. ತಮಿಳುನಾಡಿನವರು ತಮ್ಮ ಭಾಷೆ ಬಗ್ಗೆ ವಿಶೇಷ ಪ್ರೀತಿ ಇಟ್ಟುಕೊಂಡಿದ್ದಾರೆ. ಈ ವಿಚಾರದಲ್ಲಿ ಕನ್ನಡಿಗರಾದ ನಾವು ಹಿಂದುಳಿದಿದ್ದೇವೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಸಿಕ್ಕಿರುವುದು ನಿಜ. ಆದರೆ ಆ ದಿಸೆಯಲ್ಲಿ ನಾವು ಹೆಚ್ಚು ಮುಂದುವರೆದಿಲ್ಲ. ಕೇಂದ್ರದಿಂದ ಸಿಗಬೇಕಾದಷ್ಟು ಧನ ಸಹಾಯವೂ ದೊರಕುತ್ತಿಲ್ಲ. ಆದರೆ ತಮಿಳುನಾಡಿಗೆ ಕೇಂದ್ರದಿಂದ ಬಹಳಷ್ಟು ಧನ ಸಹಾಯ ಸಿಗುತ್ತಿದೆ. ಶಾಸ್ತ್ರೀಯ ಭಾಷೆಯಾಗಿ ತಮಿಳನ್ನು ಬೆಳೆಸುತ್ತಿದ್ದಾರೆ. ನಮ್ಮಲ್ಲಿ ಅದು ಸಾಧ್ಯವಾಗುತ್ತಿಲ್ಲ ಎನ್ನುವುದು ವಿಷಾದದ ಸಂಗತಿ.

ನಮ್ಮಲ್ಲಿ ಎಷ್ಟೋ ಭಾಷೆಗಳು ಅಳಿದು ಹೋಗಿವೆ. ಅದರಂತೆ ಕನ್ನಡವೂ ಅಳಿವಿನ ಅಂಚಿನಲ್ಲಿದೆ. ಕನ್ನಡವನ್ನು ಕಳೆದುಕೊಂಡರೆ ನಮ್ಮ ಅಸ್ತಿತ್ವ ಹಾಗೂ ಸಂಸ್ಕೃತಿಯನ್ನೇ ಕಳೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಹಾಗಾಗಬಾರದು. ನಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಬೇಕು. ರಾಜ್ಯೋತ್ಸವವನ್ನು ಯಾಂತ್ರಿಕವಾಗಿ ಆಚರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಕನ್ನಡ ನಮ್ಮ ಉಸಿರಿನ ನುಡಿ. ಭಾಷೆಯೊಂದಿಗೆ ನಮ್ಮ ನಾಡಿನ ಅಸ್ಮಿತೆ ಉಳಿಸಿಕೊಳ್ಳುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಕನ್ನಡಕ್ಕಾಗಿ ಕೆಲಸ ಮಾಡುವ ಮೂಲಕ ನಾವೆಲ್ಲಾ ಅತ್ಯಂತ ಪ್ರೀತಿ–ಅಭಿಮಾನದಿಂದ ಅರ್ಥಪೂರ್ಣವಾಗಿ ರಾಜ್ಯೋತ್ಸವ ಆಚರಿಸೋಣ ಎಂದು ಡಾ.ಸಿಪಿಕೆ ಆಶಿಸಿದ್ದಾರೆ.

ಜಾತಿ ಗಣತಿ: ಮನೆ ಮನೆ ಸರ್ವೇ ಅಂತ್ಯ, ಒಟ್ಟು 6.13 ಕೋಟಿ ಜನರ ಸಮೀಕ್ಷೆ


ಬೆಂಗಳೂರು, ಅ. 31– ಸೆಪ್ಟೆಂಬರ್ 22ರಿಂದ ರಾಜ್ಯದಲ್ಲಿ ಆರಂಭವಾಗಿದ್ದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ಮನೆ ಮನೆ ಗಣತಿ ಕಾರ್ಯಕ್ಕೆ ತೆರೆ ಬಿದ್ದಿದೆ. ನ.10ರವರೆಗೂ ಆನ್‌ಲೈನ್ ಸಮೀಕ್ಷೆಯಲ್ಲಿ ಭಾಗಿಯಾಗಲು ಅವಕಾಶ ನೀಡಲಾಗಿದ್ದು, ರಾಜ್ಯಾದ್ಯಂತ ಈವರೆಗೆ ಶೇ.97.51 (ಜಿಬಿಎ ಹೊರತುಪಡಿಸಿ) ರಷ್ಟು ಸಮೀಕ್ಷೆ ನಡೆದಿದೆ ಎಂದು ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

ರಾಜ್ಯಾದ್ಯಂತ 6.13 ಕೋಟಿ ಜನರ ಸಮೀಕ್ಷೆ: ಜಿಬಿಎ ಹೊರತುಪಡಿಸಿ 1.48 ಕೋಟಿ ಕುಟುಂಬಗಳ ಪೈಕಿ 1.46 ಕೋಟಿ ಕುಟುಂಬಗಳ ಸಮೀಕ್ಷೆ ಕಾರ್ಯ ನಡೆದಿದೆ. 5.68 ಕೋಟಿ ಜನಸಂಖ್ಯೆ ಪೈಕಿ 5.54 ಕೋಟಿ ಜನರ ಗಣತಿ ಪೂರ್ಣಗೊಂಡಿದೆ. ಜಿಬಿಎ ವ್ಯಾಪ್ತಿಯಲ್ಲಿ 59 ಲಕ್ಷ ಜನರ ಸಮೀಕ್ಷೆ ಆಗಿರುವ ಸಾಧ್ಯತೆ ಇದ್ದು, ರಾಜ್ಯಾದ್ಯಂತ 6.13 ಕೋಟಿ ಜನರ ಸರ್ವೇ ಆಗಿರಬಹುದೆಂದು ತಿಳಿಸಲಾಗಿದೆ. 1.22 ಲಕ್ಷ ಸಿಬ್ಬಂದಿಯಿಂದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಕಾರ್ಯ ನಡೆದಿದೆ. ಸಮೀಕ್ಷೆಯಲ್ಲಿ ಸ್ವಯಂಪ್ರೇರಿತರಾಗಿ ಪಾಲ್ಗೊಳ್ಳಲು ಇನ್ನೂ ಅವಕಾಶವಿದ್ದು, ವದಂತಿಗಳಿಗೆ ಕಿವಿಗೊಡದೆ ಗಣತಿಯಲ್ಲಿ ಭಾಗಿಯಾಗುವಂತೆ ಮನವಿ ಮಾಡಲಾಗಿದೆ.

ಸೆ.22ರಿಂದ ಆರಂಭವಾಗಿದ್ದ ಜಾತಿಗಣತಿಯನ್ನು ಅ.7ರ ಒಳಗೆ ಮುಕ್ತಾಯಗೊಳಿಸಲು ಆರಂಭದಲ್ಲಿ ನಿರ್ಧರಿಸಲಾಗಿತ್ತು. ಆದರೆ, ಗಣತಿ ಕಾರ್ಯ ಬಾಕಿ ಉಳಿದ ಹಿನ್ನಲೆ ಅ.18ರವರೆಗೆ ವಿಸ್ತರಿಸಲಾಗಿತ್ತು. ಆದರೆ ಬೆಂಗಳೂರು ಸೇರಿ ಕೆಲ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಕುಂಟುತ್ತಾ ಸಾಗುತ್ತಿದ್ದ ಹಿನ್ನಲೆ ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಕೂಡ ಬರೆದಿದ್ದರು. ನಿಗದಿತ ಗುರಿ 16 ಮನೆಗಳ ಬದಲು ಸರಾಸರಿ 7–8 ಮನೆಗಳ ಸಮೀಕ್ಷೆ ಆಗುತ್ತಿರುವ ಬಗ್ಗೆ ಗಮನ ಸೆಳೆದಿದ್ದರು. ಅದಾಗಿಯೂ ಬಹುತೇಕ ಮನೆಗಳ ಸರ್ವೇ ಬಾಕಿ ಉಳಿದ ಹಿನ್ನಲೆ ಅವಧಿಯನ್ನ ಮತ್ತೆ ಹೆಚ್ಚಿಸಿ ಅ.31ಕ್ಕೆ ಡೆಡ್‌ಲೈನ್ ನೀಡಲಾಗಿತ್ತು. ಇಂದಿಗೆ ಆ ಅವಧಿ ಮುಗಿದ ಹಿನ್ನಲೆ, ಮನೆ ಮನೆಗೆ ತೆರಳಿ ಗಣತಿ ಮಾಡುವ ಕಾರ್ಯವನ್ನು ಅಂತ್ಯಗೊಳಿಸಲಾಗಿದೆ.

ನವೆಂಬರ್ ಅಂತ್ಯದಲ್ಲಿ ಸಂಪುಟ ಪುನಾರಚನೆ ಮೈಸೂರಿನಲ್ಲಿ ಶಾಸಕ ತನ್ವೀರ್ ಸೇಠ್ ಹೇಳಿಕೆ

ಮೈಸೂರು, ಅ.31(ಬಿಎಲ್ ಯು)– ನವೆಂಬರ್ ತಿಂಗಳಾಂತ್ಯದಲ್ಲಿ ಸಂಪುಟ ಪುನಾರಚನೆ ಆಗಬಹುದು ಎಂದು ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ತಿಳಿಸಿದರು.



ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಂಪುಟ ಪುನಾರಚನೆ ಬಗ್ಗೆ ಮಾತ್ರ ಚಿಂತನೆ ನಡೆದಿದೆ. ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಈ ಬಾರಿ ನನಗೂ ಅವಕಾಶ ದೊರೆಯಬಹುದು ಎಂದು ಹೇಳಿದರು.

ಮುಂದಿನ ಮುಖ್ಯಮಂತ್ರಿ ಸ್ಥಾನ ಅಲಂಕರಿಸಲು ಯಾರಿಗೆ ಎಷ್ಟೆ ಬೆಂಬಲ ಇರಬಹುದು, ಆದರೆ ಈ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನವೇ ಅಂತಿಮ. ಈ ಬಗ್ಗೆ ಯಾರು ಏನೇ ಅಭಿಪ್ರಾಯ ವ್ಯಕ್ತಪಡಿಸಿದರೂ ಅದು ಅವರ ವೈಯಕ್ತಿಕ ಎಂದು ತಿಳಿಸಿದರು. ನಾಯಕತ್ವ ಬದಲಾವಣೆ ಕುರಿತಂತೆ ಯಾರೂ ಮಾತನಾಡದಂತೆ ಹೈಕಮಾಂಡ್ ತಾಕೀತು ಮಾಡಿದೆ. ಆದರೂ ಯತೀಂದ್ರ ಸೇರಿದಂತೆ ಕೆಲವರು ತಮ್ಮದೆ ಆದ ಕೆಲವು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಕೆಲವರು ದಲಿತ ಸಿಎಂ ಬಗ್ಗೆ ಮಾತನಾಡಿದರೆ, ಮತ್ತೆ ಕೆಲವರು ಮತ್ತೊಬ್ಬರ ಹೆಸರು ಹೇಳಿದ್ದಾರೆ ಎಂದು ತನ್ವೀರ್ ಸೇಠ್ ಹೇಳಿದರು.

ಶಾಸಕರಿಗೆ ಮಾಜಿ ಸಚಿವ ರಾಜಣ್ಣ ನ.8ಕ್ಕೆ ಔತಣ ಕೂಟ

ಔತಣಕೂಟ ಏರ್ಪಡಿಸಿದ್ದಾರೆ. ಸಿದ್ದರಾಮಯ್ಯ ಅಧಿಕಾರದಲ್ಲಿ ಮುಂದುವರೆಯಬೇಕು. ಅಧಿಕಾರ ಹಸ್ತಾಂತರ ಬೇಡ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ನೀಡಿದ ಭರವಸೆ ಮತ್ತು ನಾಯಕತ್ವಕ್ಕೆ ಮತದಾರರು ಕಾಂಗ್ರೆಸ್ ಬೆಂಬಲಿಸಿದ್ದಾರೆ.

ಜನರ ತೀರ್ಪಿಗೆ ತಕ್ಕಂತೆ ಐದು ವರ್ಷ ಮುಖ್ಯಮಂತ್ರಿ ಆಗಬೇಕು. ಮುಂಬರುವ ವಿಧಾನಸಭಾ ಚುನಾವಣೆ ನಿಮ್ಮ ನಾಯಕತ್ವದಲ್ಲೇ ಎದುರಿಸಬೇಕೆಂಬ ನಿರ್ಣಯ ಕೈಗೊಂಡು ಸಿದ್ದರಾಮಯ್ಯ ಅವರಿಗೆ ತಿಳಿಸಲಿದ್ದಾರೆ. ಪಕ್ಷದ ವರಿಷ್ಠರ ಯಾವುದೇ ಒತ್ತಡಗಳಿಗೆ ಮಣಿಯು ವುದು ಬೇಡ. ಶಾಸಕರ ಬೆಂಬಲ ನಿಮಗಿದೆ. ಬೇಕಾದರೆ ಮತ್ತೊಮ್ಮೆ ಶಾಸಕಾಂಗ ಸಭೆ ಕರೆದು ಬಹುಮತ ಯಾರಿಗಿದೆ ಎಂಬುದನ್ನು ಪರೀಕ್ಷಿಸಿಕೊಳ್ಳಲಿ. ನೀವು ಏಕಾಂಗಿಯಾಗಿ ಯಾವ ನಿರ್ಧಾರವನ್ನೂ ಕೈಗೊಳ್ಳಬೇಡಿ. ನಾವು ನಿಮ್ಮ ಜೊತೆಯಲ್ಲಿದ್ದೇವೆ. ಅಗತ್ಯಬಿದ್ದರೆ ವರಿಷ್ಠರಿಗೂ ಮನವರಿಕೆ ಮಾಡಿಕೊಡುತ್ತೇವೆ ಎನ್ನಲಿದ್ದಾರೆ.

ಔತಣಕೂಟದ ವೇಳೆ ದಲಿತರ ಸಮಾವೇಶ ಎಲ್ಲಿ ನಡೆಸಬೇಕೆಂಬ ತೀರ್ಮಾನವನ್ನೂ ಸಭೆ ಕೈಗೊಳ್ಳಲಿದೆ. ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಅನುಷ್ಠಾನಗೊಳಿಸಿದ ಮುಖ್ಯಮಂತ್ರಿ ಅವರನ್ನು ಅಭಿನಂದಿಸುವ ನೆಪದಲ್ಲಿ ದಲಿತರ ಸಮಾವೇಶ ನಡೆಯಲಿದೆ.

ಸಿದ್ದರಾಮಯ್ಯ ನಂತರ ದಲಿತ ಸಮುದಾಯದ ನಾಯಕರಿಗೆ ಅವಕಾಶ ಮಾಡಿಕೊಡಬೇಕು ಎಂಬ ನಿರ್ಣಯವನ್ನು ಸಮಾವೇಶದಲ್ಲಿ ಕೈಗೊಳ್ಳಲಿದ್ದಾರೆ. ಸಮಾವೇಶವನ್ನು ನವೆಂಬರ್ 15ರೊಳಗೆ ದಾವಣಗೆರೆ ಅಥವಾ ಚಿತ್ರದುರ್ಗದಲ್ಲಿ ಮಾಡಬೇಕೆಂಬ ಬಗ್ಗೆ ಸಭೆ ತೀರ್ಮಾನಿಸಲಿದೆ. ಔತಣಕೂಟದ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ನಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಮುಖ್ಯಮಂತ್ರಿ ಯಾದಿಯಾಗಿ ಸಚಿವರು ಮತ್ತು ಶಾಸಕರಿಗೆ ಭೋಜನ ವ್ಯವಸ್ಥೆ ಮಾಡಲು ನಿರ್ಧರಿಸಿದ್ದೆ. ಇದೀಗ ಕಾಲ ಕೂಡಿ ಬಂದಿದೆ. ನನ್ನ ಮನೆಯಲ್ಲೇ ಔತಣಕೂಟ ಏರ್ಪಡಿಸಿದ್ದು, ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದಿದ್ದಾರೆ.

ಅಪಾಯಕಾರಿ ಪ್ರೋಟಿನ್ ಪೌಡರ್ ಸೇವನೆ

ಕ್ರೀಡಾ ಪಟುಗಳು, ಜಿಮ್ ವರ್ಕೌಟ್ ಮಾಡುವವರ ಆರೋಗ್ಯದ ಮೇಲೆ ಪರಿಣಾಮ; ಕೆಲವರ ಜೀವಕ್ಕೆ ಕುತ್ತು

ಮೈಸೂರಿನ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಿಂದ ಪ್ರೋಟಿನ್ ಪೌಡರ್ ಮಾದರಿ ಸಂಗ್ರಹ

ಮೈಸೂರು, ಅ.31(ಬಿಎಲ್‌ಯು)– ಕ್ರೀಡಾ ಪಟುಗಳು ಹಾಗೂ ಜಿಮ್ ವರ್ಕೌಟ್ ಮಾಡುವವರು ವಿವಿಧ ರೀತಿಯ ಪ್ರೋಟಿನ್ ಪೌಡರ್‌ಗಳನ್ನು ಸೇವಿಸುತ್ತಾರೆ. ಆದರೆ ಇವು ದೇಹಕ್ಕೆ ಅಪಾಯಕಾರಿಯಾಗಿದ್ದು, ಅಡ್ಡ ಪರಿಣಾಮ ಬೀರುತ್ತದೆ. ಅಷ್ಟೆ ಅಲ್ಲದೆ ಹಲವರ ಪ್ರಾಣಕ್ಕೆ ಕುತ್ತು ತಂದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಮೈಸೂರಿನ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಪ್ರೋಟಿನ್‌ಪೌಡರ್‌ಗಳ ಮಾದರಿಯನ್ನು ಸಂಗ್ರಹಿಸಿ ಸಂಶೋಧನಾಲಯಕ್ಕೆ ಕಳುಹಿಸುವ ಕಾರ್ಯಾಚರಣೆ ಆರಂಭಿಸಿದೆ.

ಮೈಸೂರಿನ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಅಂಕಿತ ಅಧಿಕಾರಿ ಡಾ.ಎಸ್.ಎಲ್. ರವೀಂದ್ರ ಅವರ ನೇತೃತ್ವದ ತಂಡ ವಿವಿದೆಡೆ ಪ್ರೋಟಿನ್ ಪೌಡರ್‌ಗಳ ಮಾದರಿಯನ್ನು ಸಂಗ್ರಹ ಮಾಡುತ್ತಿದೆ.

ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಐ) ಹಾಗೂ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ನಿರ್ದೇಶಕ ಶ್ರೀನಿವಾಸ್ ಅವರ ಆದೇಶದ ಮೇರೆಗೆ ಇಲಾಖೆ ಕಾರ್ಯ ಕೈಗೊಂಡಿದೆ

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಂದು ತಂಡ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಒಂದು ತಂಡ ಪ್ರೋಟಿನ್ ಪೌಡರ್‌ಗಳ ಮಾದರಿ ಸಂಗ್ರಹ ಮಾಡುತ್ತಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂತಿಷ್ಟು ವಾರ್ಡ್‌ಗಳೆಂದು ವಿಂಗಡಣೆ ಮಾಡಿ ಸಂಗ್ರಹಿಸಲಾಗುತ್ತಿದೆ. ಜಿಲ್ಲೆ ವ್ಯಾಪ್ತಿಯಲ್ಲಿ ಆಯಾ ತಾಲೂಕು ಕೇಂದ್ರದಲ್ಲಿ ಪ್ರೋಟಿನ್ ಪೌಡರ್‌ಗಳನ್ನು ಸಂಗ್ರಹ ಮಾಡಲಾಗುತ್ತಿದೆ.

ಪ್ರೋಟಿನ್ ಪೌಡರ್‌ಗಳ ಮಾದರಿ ಸಂಗ್ರಹಿಸಿದ ನಂತರ ಹೈದರಾಬಾದ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್‌ಗೆ ಕಳುಹಿಸಲಾಗುತ್ತದೆ. ಅಲ್ಲಿ ಪ್ರೋಟಿನ್ ಪೌಡರ್‌ಗಳ ಬಗ್ಗೆ ಸಂಶೋಧನೆ ನಡೆಸಿದ ನಂತರ ವೈಜ್ಞಾನಿಕವಾದ ವರದಿಯನ್ನು ಎಫ್‌ಎಸ್‌ಎಸ್‌ಐಗೆ ಸಲ್ಲಿಸಲಿದೆ.



ವಿವಿಧೆಡೆ ಪ್ರೋಟಿನ್ ಪೌಡರ್‌ಗಳ ಮಾದರಿಯನ್ನು ಸಂಗ್ರಹ ಮಾಡುತ್ತಿರುವುದು

ಇತ್ತೀಚಿಗೆ ಕ್ರೀಡಾ ಪಟುಗಳು ಹಾಗೂ ಜಿಮ್ ವರ್ಕೌಟ್ ಮಾಡುವರು ಪ್ರೋಟಿನ್ ಪೌಡರ್ ಸೇವಿಸುವುದು ಸಾಮಾನ್ಯವಾಗಿದೆ. ಸ್ನಾಯುಗಳ ಬೆಳವಣಿಗೆಯನ್ನು ವೃದ್ಧಿಸಲು, ತೂಕ ನಿರ್ವಹಿಸಲು, ಜಿಮ್ ನಂತರ ರೋಗ ನಿರೋಧ ಶಕ್ತಿ ಹೆಚ್ಚಿಸಲು, ತೂಕ ಕಡಿಮೆ ಮಾಡಿಕೊಳ್ಳಲು ಪ್ರೋಟಿನ್ ಪೌಂಡರ್ ಬಳಸಲಾಗುತ್ತಿದೆ.

ವೈದ್ಯರ ಸಲಹೆ ಪಡೆದು ಪ್ರೋಟಿನ್‌ಪೌಡರ್ ಸೇವಿಸಬೇಕು. ಯಾವ ಕಂಪನಿಯ ಪ್ರೋಟಿನ್ ಪೌಡರ್ ಖರೀದಿಸಬೇಕು, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು, ಎಷ್ಟು ದಿನ ಸೇವಿಸಬೇಕು ಎಂಬ ಬಗ್ಗೆ ವೈದ್ಯರ ಸಲಹೆ ಪಡೆಯಬೇಕು.

ಆದರೆ ಬಹಳಷ್ಟು ಕ್ರೀಡಾಪಟುಗಳು ಹಾಗೂ ಜಿಮ್ ವರ್ಕೌಟ್ ಮಾಡುವವರು ಈ ನಿಯಮ ಪಾಲಿಸುತ್ತಿಲ್ಲ. ಸ್ಪೋರ್ಟ್ಸ್ ಮಾಸ್ಟರ್ ಹಾಗೂ ಜಿಮ್ ಟ್ರೈನರ್ ಪೂರ್ವಾಗ್ರಹ ಪೀಡಿತರಾಗಿ ನೀಡುವ ಸಲಹೆ ಅನುಸರಿಸುತ್ತಾರೆ. ಅವರು ಹೇಳಿದಂತೆ ಪ್ರೋಟಿನ್ ಪೌಡರ್ ಸೇವನೆ ಮಾಡುತ್ತಿದ್ದಾರೆ.

ಹಾಲೊಡಕು, ಸಸ್ಯ ಆಧಾರಿತ ಪ್ರೋಟಿನ್ ಸೇರಿದಂತೆ ಇತರೆ ಪ್ರೋಟಿನ್‌ಪೌಡರ್‌ಗಳಿವೆ. ಆದರೆ ಈ ಪ್ರೋಟಿನ್ ಪೌಡರ್‌ಗಳ ಬಗ್ಗೆ ಸ್ಪೋರ್ಟ್ಸ್ ಮಾಸ್ಟರ್ ಹಾಗೂ ಜಿಮ್ ಟ್ರೈನರ್‌ಗಳಿಗೆ ವೈಜ್ಞಾನಿಕವಾಗಿ ಮಾಹಿತಿ ಇರುವುದಿಲ್ಲ. ಯಾವ ಕಂಪನಿಯ ಪ್ರೋಟಿನ್ ಪೌಡರ್‌ನ್ನು ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಎಂಬ ಬಗ್ಗೆ ಬಹಳಷ್ಟು ಜಿಮ್ ಟ್ರೈನರ್‌ಗಳಿಗೆ ತಿಳುವಳಿಕೆ ಇರುವುದಿಲ್ಲ. ಆದರೂ ಇದರ ಬಳಕೆ ಬಗ್ಗೆ ಶಿಷ್ಯರಿಗೆ ಸಲಹೆ ನೀಡುತ್ತಾರೆ.

ಹೀಗೆ ಅಪಾಯಕಾರಿ ಪ್ರೋಟಿನ್‌ಪೌಡರ್ ಸೇವನೆ ಮಾಡಿದವರು ಅಡ್ಡ ಪರಿಣಾಮ ಎದುರಿಸುತ್ತಿದ್ದಾರೆ. ಕೆಲವರ ಜೀವಕ್ಕೆ ಇದು ಕುತ್ತಾಗಿದೆ. ಅತಿಯಾದ ಪ್ರೋಟಿನ್ ಪೌಡರ್ ಸೇವನೆಯಿಂದ ಮೂತ್ರಪಿಂಡ ಮತ್ತು ಯಕೃತ್ತಿನ ಮೇಲೆ ಒತ್ತಡ ಉಂಟಾಗುತ್ತದೆ. ಅಲ್ಲದೆ ಜೀರ್ಣಕಾರಿ ಸಮಸ್ಯೆಗಳಿಗೆ ಕಾರಣವಾಗಬಹುದು. ಜೊತೆಗೆ ಮೂಳೆಗಳ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.

ಈ ಹಿನ್ನೆಲೆಯಲ್ಲಿ ಎಫ್‌ಎಸ್‌ಎಸ್‌ಐ ದೇಶಾದ್ಯಂತ ಪ್ರೋಟಿನ್ ಪೌಡರ್‌ಗಳ ಮಾದರಿಯನ್ನು ಸಂಗ್ರಹ ಮಾಡುತ್ತಿದೆ. ಅದರಂತೆ ಮೈಸೂರು ನಗರ ಹಾಗೂ ಎಲ್ಲಾ ತಾಲೂಕುಗಳಲ್ಲಿ ಕಾರ್ಯ ಬಿರುಸಿನಿಂದ ನಡೆಯುತ್ತಿದೆ.

ಮಸಾಲ ಪದಾರ್ಥ, ಬಣ್ಣ ಮಿಶ್ರಿತ ಕಲ್ಲು ಸಕ್ಕರೆ ಕೂಡ ಸಂಗ್ರಹ

ಪ್ರೋಟಿನ್ ಪೌಡರ್ ಮಾತ್ರವಲ್ಲದೆ ಎಲ್ಲಾ ರೀತಿಯ ಮಸಾಲಾ ಪದಾರ್ಥ ಹಾಗೂ ಬಣ್ಣದ ಕಲ್ಲು ಸಕ್ಕರೆಗಳ ಮಾದರಿಯನ್ನು ಕೂಡ ಸಂಗ್ರಹಿಸಲಾಗುತ್ತಿದೆ. ಮೆಣಸು, ಜೀರಿಗೆ ಸೇರಿದಂತೆ ಇತರೆ ಮಸಾಲ ಪದಾರ್ಥಗಳ ಮಾದರಿಯನ್ನು ಮೈಸೂರಿನ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಸಂಗ್ರಹ ಮಾಡುತ್ತಿದೆ. ಪುಡಿಯಾಗದ ಹಾಗೂ ಪುಡಿಯಾಗಿರುವ ಎರಡು ರೀತಿಯ ಮಸಾಲ ಪದಾರ್ಥಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ.

ಇವುಗಳಿಗೆ ಅಪಾಯಕಾರಿಯಾದ ರಾಸಾಯನಿಕ ಬಣ್ಣ ಬೆರೆಸಲಾಗುತ್ತಿದೆ ಎಂಬ ದೂರಿನ ಮೇರೆಗೆ ಇಲಾಖೆ ಈ ಕ್ರಮ ಕೈಗೊಂಡಿದೆ. ಇವುಗಳನ್ನು ಮೈಸೂರಿನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯಲಾಗುತ್ತದೆ. ಮಸಾಲ ಪದಾರ್ಥಗಳಲ್ಲಿ ಅಪಾಯಕಾರಿ ರಾಸಾಯನಿಕ ಇರುವುದು ಖಚಿತವಾದರೆ ಇವುಗಳ ಬಳಕೆ ನಿಷಿದ್ಧಗೊಳಿಸುವ ನಿಟ್ಟಿನಲ್ಲಿ ಕಠಿಣ ಕೈಗೊಳ್ಳಲಾಗುತ್ತಿದೆ.

ಬಣ್ಣ ಮಿಶ್ರಿತ ಕಲ್ಲು ಸಕ್ಕರೆಗಳ ಮಾದರಿಯನ್ನು ಕೂಡ ಸಂಗ್ರಹ ಮಾಡಲಾಗುತ್ತಿದೆ. ರಾಸಾಯನಿಕ ಬಣ್ಣ ಮಿಶ್ರಿತ ಸಕ್ಕರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆ ಮೈಸೂರು ನಗರ ಮತ್ತು ಎಲ್ಲಾ ತಾಲೂಕುಗಳಲ್ಲಿ ಬಣ್ಣ ಮಿಶ್ರಿತ ಕಲ್ಲು ಸಕ್ಕರೆಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ.



ಪ್ರೋಟಿನ್ ಪೌಡರ್‌ಗಳ ಮಾದರಿಯನ್ನು ಡಿಸೆಂಬರ್ ವೇಳೆಗೆ ಸಂಗ್ರಹ ಮಾಡುವಂತೆ ಇಲಾಖೆ ಗಡುವು ನೀಡಿದೆ. ನಿಗದಿತ ಗಡುವಿನಲ್ಲಿ ಇದನ್ನು ಸಂಗ್ರಹ ಮಾಡಿ ಮುಗಿಸುತ್ತೇವೆ. ಮೆಡಿಕಲ್ ಸ್ಟೋರ್ ಸೇರಿದಂತೆ ಎಲ್ಲೆಲ್ಲಿ ಪ್ರೋಟಿನ್ ಪೌಡರ್ ಮಾರಾಟ ಮಾಡಲಾಗುತ್ತಿದೆಯೋ ಅಂತಹ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಸಂಗ್ರಹ ಮಾಡುತ್ತಿದ್ದೇವೆ.
- ಡಾ.ರವೀಂದ್ರ, ಅಂಕಿತ ಅಧಿಕಾರಿ, ಮೈಸೂರು ನಗರ ಪಾಲಿಕೆ ವ್ಯಾಪ್ತಿ

ಕನ್ನೆಗೌಡನಕೊಪ್ಪಲು ಮಾರಮ್ಮನ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ

ಮೈಸೂರು, ಅ.31(ಎಂಕೆ)– ಮೈಸೂರು ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಸ್ಥಾನದ 18ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಅಗ್ರತೀರ್ಥ ಸಂಗ್ರಹ ಸಮೇತ ಗಣಪತಿ ಪೂಜಾಪೂರ್ವಕ ಪುಣ್ಯಾಹ, ಪಂಚಗವ್ಯ ಸಾಧನ, ಪ್ರೋಕ್ಷಣೆ, ವಾಸ್ತು ಪೂಜೆ, ಗಣಹೋಮ, ನವಗ್ರಹ ಮೃತ್ಯುಂಜಯ ಪೂಜೆಯೊಂದಿಗೆ, ಕುಂಭಾಭಿಷೇಕ ನೆರವೇರಿಸಲಾಯಿತು. ಶಿರಾ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ನಂಜಾವಧೂತ ಸ್ವಾಮೀಜಿ ಮಹೋತ್ಸವದಲ್ಲಿ ಭಾಗವಹಿಸಿ ಭಕ್ತಾದಿಗಳನ್ನು ಆಶೀರ್ವದಿಸಿದರು.

ಶುಕ್ರವಾರ ಬೆಳಗ್ಗೆ ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ದುರ್ಗಾ ಹೋಮ, ಸಪ್ತಮಾತೃಕಾ ಹೋಮ, ಕಳಸ ಹೋಮದ ನಂತರ ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥ ಸ್ವಾಮೀಜಿ ಸಮಕ್ಷಮದಲ್ಲಿ ಕುಂಭಾಭಿಷೇಕ ನೆರವೇರಿತು. ಬಳಿಕ ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿಯೊಂದಿಗೆ ಸಾವಿರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.


ಶಾಸಕ ಕೆ.ಹರೀಶ್‌ಗೌಡ ಅನ್ನಸಂತರ್ಪಣೆಗೆ ಚಾಲನೆ ನೀಡಿದರು. ಕನ್ನೇಗೌಡನ ಕೊಪ್ಪಲು ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಬಸಪ್ಪ, ಆರ್.ಮೂರ್ತಿ, ಕೆ.ಆರ್.ಚಿಕ್ಕಣ್ಣ, ಅಧ್ಯಕ್ಷ ಎಂ.ರಾಮೇಗೌಡ, ಉಪಾಧ್ಯಕ್ಷರಾದ ಆರ್.ಗಣೇಶ್, ಬಿ.ಈಶ್ವರ್, ಪ್ರಧಾನ ಕಾರ್ಯದರ್ಶಿ ಆರ್.ಬಸವರಾಜು, ಸಹ ಕಾರ್ಯದರ್ಶಿಗಳಾದ ಸಿ.ಶಿವಣ್ಣ, ರಂಗಸ್ವಾಮಿ, ಖಜಾಂಚಿ ಆರ್.ಶಿವಕುಮಾರ್, ಪಾಪಣ್ಣ ಮತ್ತಿತರರಿದ್ದರು.

ದಟ್ಟಗಳ್ಳಿಯಲ್ಲಿ ಮನೆ ಬೀಗ ಮುರಿದು ಕೋಟಿ ಮೌಲ್ಯದ ಚಿನ್ನಾಭರಣ, ಬೆಳ್ಳಿ ಪದಾರ್ಥ ಕಳವು

ಮೈಸೂರು, ಅ. 31 (ಆರ್‌ಕೆ)– ಮನೆ ಬೀಗ ಮುರಿದು ಒಳಗೆ ನುಸುಳಿದ ಕಳ್ಳರು ಸುಮಾರು ಕೋಟಿ ಬೆಲೆಬಾಳುವ 700 ಗ್ರಾಂ ಚಿನ್ನಾಭರಣ ಹಾಗೂ 3 ಕೆಜಿ ಬೆಳ್ಳಿ ಪದಾರ್ಥಗಳೊಂದಿಗೆ ಪರಾರಿಯಾಗಿರುವ ಘಟನೆ ಮೈಸೂರಿನ ದಟ್ಟಗಳ್ಳಿಯಲ್ಲಿ ಅಕ್ಟೋಬರ್ 25 ರಂದು ಸಂಭವಿಸಿದೆ.

ದಟ್ಟಗಳ್ಳಿ 3ನೇ ಹಂತದ ಕನಕದಾಸ ನಗರ ಜೆ. ಬ್ಲಾಕ್ ನಿವಾಸಿಯಾದ ಸಾಫ್ಟ್‌ವೇರ್ ಇಂಜಿನಿಯರ್ ವಿನಯ್ ಕುಮಾರ್ ಎಂಬುವರ ಮನೆಯಲ್ಲಿ ಕಳ್ಳತನವಾಗಿದ್ದು, ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿನಯ್‌ಕುಮಾರ್ ಅವರು ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಅಕ್ಟೋಬರ್ 20 ರಂದು ಮನೆಗೆ ಬೀಗ ಹಾಕಿಕೊಂಡು ಸಂಬಂಧಿಕರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲೆಂದು ಚಿಕ್ಕಮಗಳೂರಿಗೆ ಹೋಗಿ ಮರು ದಿನ (ಅಕ್ಟೋಬರ್ 21) ಮಧ್ಯಾಹ್ನ 3 ಗಂಟೆಗೆ ವಾಪಸ್ಸಾದರು. ಆ ವೇಳೆ ಮನೆ ಮಂಬಾಗಿಲ ಬೀಗ ಮುರಿದಿರುವುದು ಕಂಡು ಬಂದಿತು. ಮನೆಯೊಳಗೆ ಹೋಗಿ ನೋಡಿದಾಗ ಮಲಗುವ ಕೊಠಡಿ ಬೀಗ ಮುರಿದು ನಂತರ ಅಲ್ಲಿನ ವಾರ್ಡ್‌ರೋಬ್‌ನಲ್ಲಿದ್ದ ಸುಮಾರು 1 ಕೋಟಿ ಮೌಲ್ಯದ 4 ಚಿನ್ನದ ಲಾಂಗ್ ಸರ, 3 ಒಡವೆ ಸೆಟ್, 5 ಸೆಟ್ ಬಳೆ, 8 ಜೊತೆ ಕಿವಿ ಓಲೆ, 10 ರಿಂಗ್ ಸೇರಿ ಒಟ್ಟು 700 ಗ್ರಾಂ ಚಿನ್ನಾಭರಣ ಹಾಗೂ 3 ಕೆಜಿ ಬೆಳ್ಳಿ ಪದಾರ್ಥ ಕಳುವಾಗಿರುವುದು ತಿಳಿಯಿತು.



ಖದೀಮರು ಮನೆಯ ವಸ್ತುಗಳನ್ನೆಲ್ಲಾ ಚೆಲ್ಲಾ–ಪಿಲ್ಲಿ ಮಾಡಿ ಶೋಧಿಸಿದ್ದಾರೆ. ಹೊಸ ಮನೆ ನಿರ್ಮಿಸುವ ಉದ್ದೇಶದಿಂದ ತಮ್ಮ ಸಂಬಂಧಿಕರ ಒಡವೆಗಳನ್ನು ತರಿಸಿಕೊಂಡು ಮನೆಯಲ್ಲಿ ಇರಿಸಿಕೊಂಡಿದ್ದೆವು ಎಂದು ವಿನಯ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಮೋಹನ್ ಸಿಬ್ಬಂದಿಗಳೊಂದಿಗೆ ಧಾವಿಸಿ ಮಹಜರು ನಡೆಸಿದರು. ಶ್ವಾನದಳ ಹಾಗೂ ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಸಹ ಪರಿಶೀಲಿಸಿದರು. ಆ ಮನೆಯ ದೂರದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರ ದೃಶ್ಯಾವಳಿಗಳನ್ನು ಪಡೆದು ಅದರ ಸುಳಿವಿನ ಆಧಾರದ ಮೇಲೆ ಪೊಲೀಸರು ಆರೋಪಿಗಳ ಪತ್ತೆಗಾಗಿ ಮಧ್ಯಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ವಲ್ಲಭಭಾಯಿ ಪಟೇಲ್ ಜಯಂತಿ

ಮೈಸೂರಲ್ಲಿ ಬಿಜೆಪಿಯಿಂದ ಏಕತಾ ನಡಿಗೆ



ಮೈಸೂರು,ಅ.31(ಜಿಎ)–ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜಯಂತಿ ಅಂಗವಾಗಿ ಮೈಸೂರಿನಲ್ಲಿ ಮೈಸೂರು ನಗರ ಹಾಗೂ ಜಿಲ್ಲಾ ಬಿಜೆಪಿ ವತಿಯಿಂದ ಏಕತಾ ನಡಿಗೆ ಮೂಲಕ ಗೌರವ ನಮನ ಸಲ್ಲಿಸಲಾಯಿತು.

ಮೈಸೂರಿನ ಕೋರ್ಟ್ ಮುಂಭಾಗದ ಗಾಂಧಿ ಪುತ್ಥಳಿ ಮುಂಭಾಗದಿಂದ ಏಕತಾ ನಡಿಗೆ ಆರಂಭವಾಗಿ ಆರ್‌ಟಿಓ ವೃತ್ತ ಮೂಲಕ ಸಾಗಿ ರಾಮಸ್ವಾಮಿ ವೃತ್ತದಿಂದ ನಂತರ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಗೆ ತಲುಪಿತು. ಈ ವೇಳೆ ನಡಿಗೆ ಉದ್ದಕ್ಕೂ ವಲ್ಲಭಭಾಯಿ ಪಟೇಲ್ ಪರ ಘೋಷಣೆಗಳು ಮೊಳಗಿದವು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಸುಬ್ಬಣ್ಣ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಡಾ.ಅನಿಲ್ ಥಾಮಸ್, ವಕ್ತಾರ ಜಿ.ಮಹೇಶ್ ಸೇರಿದಂತೆ ಬಿಜೆಪಿ ಪದಾಧಿಕಾರಿಗಳು, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಮುದಾಯ ಮೈಸೂರು ರಂಗೋತ್ಸವ ಕಲಾ ಶಿಬಿರ ಆರಂಭ

ಅಕ್ಷರ ತಾಯಿ ದೃಶ್ಯ ಕಲೆ ಬೆಳೆಸಬೇಕಿದೆ: ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ ಅಭಿಮತ



ದೃಶ್ಯ ಕಲೆಯನ್ನು ಬಿಡಿಸುವ ಮೂಲಕ 'ಸಮುದಾಯ ಮೈಸೂರು ರಂಗೋತ್ಸವ'ದ ಕಲಾ ಶಿಬಿರವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ ಉದ್ಘಾಟಿಸಿದರು. ಸಮುದಾಯ ಕರ್ನಾಟಕ ಸಂಘಟನೆ ಅಧ್ಯಕ್ಷ ಹೆಚ್.ಜನಾರ್ಧನ್(ಜನ್ನಿ) ಮತ್ತಿತರರಿದ್ದರು.

ಮೈಸೂರು, ಅ.31(ಎಂಕೆ)– ಅಕ್ಷರದ ತಾಯಿಯಾಗಿರುವ ದೃಶ್ಯ ಕಲೆಯನ್ನು ನಮ್ಮ ಸಂಸ್ಕೃತಿ ಮತ್ತು ಅದರ ವಕ್ತಾರರು ಗಮನಿಸಲಿಲ್ಲ. ಮುಂದೆಯಾದರೂ ನಾವೆಲ್ಲರು ಬಹಳ ಜವಾಬ್ದಾರಿಯಿಂದ ದೃಶ್ಯಕಲೆಯನ್ನು ಬೆಳೆಸಬೇಕಿದೆ ಎಂದು ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ ಅಭಿಪ್ರಾಯಿಸಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರ ಆವರಣದಲ್ಲಿ ಸಮುದಾಯ ಕರ್ನಾಟಕದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ವಿವಿ ಸಂಶೋಧಕರ ಸಂಘ, ಕಾವಾ ಅಲ್ಯುಮ್ನಿ ಅಸೋಸಿಯೇಷನ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಹಕಾರದೊಂದಿಗೆ 'ಮನುಷ್ಯತ್ವದೆಡೆಗೆ ಸಮುದಾಯ–50' ಶೀರ್ಷಿಕೆಯಡಿ ಆಯೋಜಿಸಿರುವ 'ಸಮುದಾಯ ಮೈಸೂರು ರಂಗೋತ್ಸವ'ದ ಕಲಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ರಾಜಕಾರಣ ನಮ್ಮನ್ನು ಹೇಗೆ ನಿರ್ವಹಿಸುತ್ತಿದೆ ಎಂದರೆ ಸಾಮಾನ್ಯ ಜ್ಞಾನವನ್ನು ಸಾಂಸ್ಕೃತಿಕ ಜ್ಞಾನ ಆಳುತ್ತಿದೆ. ಇಂತಹ ಸಂದರ್ಭದಲ್ಲಿ ಸಂಸ್ಕೃತಿಯ ಕೊನೆಯ ಸಾಲಿನಲ್ಲಿರುವ ದೃಶ್ಯಕಲೆ ವೇದಿಕೆ ಕಲ್ಪಿಸಿರುವುದು ಶ್ಲಾಘನೀಯ. ಅದರ ಜೊತೆಗೆ ಮುಂದಾದರೂ ದೃಶ್ಯ ವಕ್ತಾರರಾದ ನಾವೆಲ್ಲರು ಬಹಳ ಜವಾಬ್ದಾರಿಯಿಂದ ದೃಶ್ಯಕಲೆಯನ್ನು ಬೆಳೆಸಿ, ಅದರ ಮಹತ್ವವನ್ನು ವಿಸ್ತರಿಸಬೇಕಿದೆ ಎಂದರು.

ಜಾನಪದ ಪರಂಪರೆಯಿಂದ ಬಂದಂತಹ ದೃಶ್ಯ ಕಲೆಯ ಮುಖ್ಯ ಆಶಯಕ್ಕೆ ಅನುಗುಣವಾಗಿ ಕಲಾವಿದರ ಕಾರ್ಯಚಟುವಟಿಕೆಗಳಿರಬೇಕು. ಶ್ರವಣಬೆಳಗೊಳದ ಬಾಹುಬಲಿ ಕಲಾಕೃತಿ ರೂಪುಗೊಂಡು 1200 ವರ್ಷಗಳಾದರೂ, ನಾವುಗಳು ಇಂದಿಗೂ ಆ ಕಲಾಕೃತಿಯನ್ನು ಸರಿಯಾಗಿ ನೋಡಿಲ್ಲ. ಬಾಹುಬಲಿ ಕಲಾಕೃತಿ ರಚನೆಯಾದ 600 ವರ್ಷಗಳ ನಂತರ ಹುಟ್ಟಿದ ಮೈಕಲ್ ಏಂಜಲೋ ಬಗ್ಗೆ ಮಾತನಾಡುತ್ತೇವೆ. ಆದರೆ, ಯಾವುದೇ ನಿರ್ವಹಣೆ ಇಲ್ಲದೆ 1200 ವರ್ಷಗಳಿಂದಿರುವ ನಮ್ಮದೇ ಕಲಾಕೃತಿ ಮತ್ತು ನಮ್ಮ ಕಲಾಕಾರರ ಬಗ್ಗೆ ಮಾತನಾಡುವುದಿಲ್ಲ. ಅಂತರ್ಗತವಾಗಿರುವ ಕಲಾಕೃತಿಯ ಮೌಲ್ಯವನ್ನು ತಿಳಿಸುವ ಕಾರ್ಯವನ್ನಾದರೂ ನಾವುಗಳು ಮಾಡಬೇಕಿದೆ ಎಂದರು.

ಕಲಾಕೃತಿಗಳ ಅನಾವರಣ: ನಂತರ ಕಲಾವಿದರಾದ ಬಿಂದುರಾಯ ಆರ್.ಬಿರಾದಾರ, ಅಜ್ಜಿ ಅಹಮದ್ ಖಾನ್, ಕೆ.ಸಿ.ಮಹದೇವ ಶೆಟ್ಟಿ, ಬಾದಲ್ ನಂಜುಂಡಸ್ವಾಮಿ, ಶಿವಕುಮಾರ್ ಕೆಸರಮಡು, ಹೆಚ್.ಕೆ.ವಿಶ್ವನಾಥ್, ಬಿ.ಎಲ್.ಮೋಹನ್ ಕುಮಾರ್, ವಿಶ್ವಕರ್ಮ ಆಚಾರ್ಯ, ಬಿ.ಎಲ್.ಮಹೇಶ್, ಎಂ.ಎಲ್.ಮಾಧವಿ, ಶಿವರಾಜು, ರೂಪೇಶ್ ನಾಣಯ್ಯ, ಡಾ.ಚರಿತ, ಹೆಚ್.ಟಿ.ಮಂಜುನಾಥ್, ಸುರೇಶ್ ಕೆಂಪೇಗೌಡ ಹಾಗೂ ಕೆ.ಸಂಗೀತ 'ಮನುಷ್ಯತ್ವದೆಡೆಗೆ ಸಮುದಾಯ' ಶೀರ್ಷಿಕೆಯಡಿ ಕಲಾಕೃತಿಗಳನ್ನು ಚಿತ್ರಿಸಿ, ಅನಾವರಣಗೊಳಿಸಿದರು.

ಸಮುದಾಯ ಕರ್ನಾಟಕ ಸಂಘಟನೆ ಅಧ್ಯಕ್ಷ ಹಾಗೂ ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ), ಕಾವಾ ಅಲ್ಯುಮ್ನಿ ಅಸೋಸಿಯೇಷನ್ ಅಧ್ಯಕ್ಷ ಆರ್.ಹೆಚ್.ಮಂಜುಪ್ರಸಾದ್, ಸಮುದಾಯ ಕರ್ನಾಟಕ ಉಪಾಧ್ಯಕ್ಷ ಬಿ.ಐ.ಈಳಿಗೇರ, ಸಹ ಕಾರ್ಯದರ್ಶಿ ಜನಾರ್ಧನ್ ಕೆಜಿಎಫ್ ಮತ್ತಿತರರಿದ್ದರು.

ಮೈಸೂರಿನ ಶಾಸ್ತ್ರೀಯ ಕನ್ನಡ ಭಾಷಾ ಮಾನ್ಯತಾ ದಿನಾಚರಣೆ

ಸಂಶೋಧನಾ ಸಂಸ್ಥೆಗೆ ಪ್ರಾಚೀನ ಗ್ರಂಥ, ಪುಸ್ತಕ ಶಿಖರ ಪ್ರಾಯ

ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಬಣ್ಣನೆ

ಮೈಸೂರು, ಅ.31(ಬಿಎಲ್ ಯು)– ಒಂದು ಸಂಶೋಧನಾ ಸಂಸ್ಥೆಗೆ ಪ್ರಾಚೀನ ಗ್ರಂಥ ಮತ್ತು ಪುಸ್ತಕಗಳು ಶಿಖರ ಪ್ರಾಯ ಎಂದು ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊಮಲ್ಲೇಪುರಂ ಜಿ.ವೆಂಕಟೇಶ್ ಪ್ರತಿಪಾದಿಸಿದರು.

ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಇಂದು ನಡೆದ ಶಾಸ್ತ್ರೀಯ ಕನ್ನಡ ಭಾಷಾ ಮಾನ್ಯತಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನಾ ಸಂಸ್ಥೆಗೆ ಕಟ್ಟಡ ನೆಪ ಮಾತ್ರ, ಆದರೆ ಅಲ್ಲಿ ನಡೆಯುವ ಸಂಶೋಧನಾ ಕಾರ್ಯ ಆ ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುತ್ತದೆ ಎಂದು ಹೇಳಿದರು.

ಕಳೆದ ಹತ್ತು ಸಾವಿರ ವರ್ಷಗಳಿಂದ ಜ್ಞಾನೋಪಾಸನೆ ನೀರಿನಂತೆ ಹರಿಯುತ್ತಿದೆ. ಈ ಹಿನ್ನೆಲೆ ಜ್ಞಾನ ಎಂಬುದು ನಿಂತ ನೀರಲ್ಲ. ಅದು ನಿರಂತರವಾಗಿ ಹರಿಯುವ ಶುದ್ಧ ನೀರು ಎಂದು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಈ ಹಿನ್ನೆಲೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರು ಮಾನಸ ಗಂಗೋತ್ರಿ ಎಂಬ ಹೆಸರು ನಾಮಕರಣ ಮಾಡಿದರು. ಈ ಮೂಲಕ ಜ್ಞಾನ ಪರಿಣಾಮಕಾರಿಯಾಗಿ ಪಸರಿಸುತ್ತಿದೆ ಜ್ಞಾನದ ಮೂಲಕ ಸ್ವಾಸ್ಥ್ಯ ಸಮಾಜದ ಅರಿವು ಉಂಟಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಶುಕ್ರವಾರ ನಡೆದ ಶಾಸ್ತ್ರೀಯ ಕನ್ನಡ ಭಾಷಾ ಮಾನ್ಯತಾ ದಿನಾಚರಣೆ ಕಾರ್ಯಕ್ರಮವನ್ನು ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊಮಲ್ಲೇಪುರಂ ಜಿ.ವೆಂಕಟೇಶ್ ಉದ್ಘಾಟಿಸಿದರು.

ಕಳೆದ 17 ವರ್ಷದ ಹಿಂದೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆಯಿತು. ಅಲ್ಲಿಂದ ಇಲ್ಲಿವರೆಗೆ ಇಲ್ಲಿ ಬಹಳಷ್ಟು ಸಂಶೋಧನೆ, ವಿಚಾರ ಸಂಕಿರಣ, ಶಿಬಿರಗಳು ನಡೆಯುತ್ತಿವೆ ಎಂದು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಪ್ರಶಂಸೆ ವ್ಯಕ್ತಪಡಿಸಿದರು.

ತರುವಾಯ ಮಾತನಾಡಿದ ಕನ್ನಡ ಶಾಸ್ತ್ರೀಯ ಸ್ಥಾನಮಾನ ಕೇಂದ್ರದ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್, ಕಳೆದ 17 ವರ್ಷಗಳಲ್ಲಿ ನಮ್ಮ ಕೇಂದ್ರ ಪರಿಣಾಮಕಾರಿ ಕೆಲಸ ಮಾಡಿದೆ. ಆದರೂ ಇನ್ನು ಮಾಡಬೇಕಾಗಿರುವ ಕೆಲಸ ಕಾರ್ಯಗಳು ಬಹಳಷ್ಟಿವೆ ಎಂದು ಹೇಳಿದರು.

ಪ್ರಾಚೀನ ಕನ್ನಡದ ಪಠ್ಯಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವುದು, ಶಾಸ್ತ್ರೀಯ ಪಠ್ಯಗಳ ಅಧ್ಯಯನ, ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕನ್ನಡ ಭಾಷೆಯ ಮಹತ್ವದ ಬಗ್ಗೆ ಪ್ರಚಾರ ಮಾಡಲು ಕನ್ನಡ ಶಾಸ್ತ್ರೀಯ ಸ್ಥಾನಮಾನ ಕೇಂದ್ರ ನಿರ್ಧರಿಸಿದೆ ಎಂದು ಪ್ರೊ.ತಳವಾರ್ ತಿಳಿಸಿದರು.

ಹಿರಿಯ ವಿದ್ವಾಂಸರಾದ ಡಾ.ತಾರಾನಾಥ್ ಹಾಗೂ ಶಂಕರ್ ದೇವನೂರು ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಭಾರತೀಯ ಭಾಷಾ ಸಂಸ್ಥಾನದ ಉಪ ನಿರ್ದೇಶಕ ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಡೀಸ್, ಪ್ರಭಾರ ನಿರ್ದೇಶಕಿ ಪ್ರೊ. ಉಮಾರಾಣಿ ಪುಷ್ಪಸ್ವಾಮಿ, ಶಾಸ್ತ್ರೀಯ ಭಾಷಾ ಕೋಶದ ಸಂಶೋಧಕ ಡಾ.ಎಲ್.ಆರ್.ಪ್ರೇಮ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶ - ವಿದೇಶ

ತೆಲಂಗಾಣ ನೂತನ ಸಚಿವರಾಗಿ ಅಜರುದ್ದೀನ್ ಪ್ರಮಾಣ ವಚನ



ಹೈದರಾಬಾದ್: ಕಾಂಗ್ರೆಸ್ ನಾಯಕ ಮತ್ತು ಮಾಜಿ ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಅವರು ಶುಕ್ರವಾರ ತೆಲಂಗಾಣ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಜಿಷ್ಣು ದೇವ್ ವರ್ಮಾ ಅವರು ಮೊಹಮ್ಮದ್ ಅಜರುದ್ದೀನ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಮಾರಂಭದಲ್ಲಿ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸಿದ್ದರು. ಅಜರುದ್ದೀನ್ ಅವರ ಸೇರ್ಪಡೆಯೊಂದಿಗೆ, ರೇವಂತ್ ರೆಡ್ಡಿ ಸಂಪುಟದ ಒಟ್ಟು ಬಲ 16ಕ್ಕೆ ಏರಿದೆ.

145 ಕೆಜಿ ತೂಕ ಎತ್ತಿ ಕಂಚಿನ ಪದಕ ಗೆದ್ದ 7 ತಿಂಗಳ ಗರ್ಭಿಣಿ ಕಾನ್‌ಸ್ಟೆಬಲ್!

ನವದೆಹಲಿ: ಆಂಧ್ರಪ್ರದೇಶದಲ್ಲಿ ನಡೆದ ಭಾರ ಎತ್ತುವ ಸ್ಪರ್ಧೆಯಲ್ಲಿ ಏಳು ತಿಂಗಳ ಗರ್ಭಿಣಿಯಾಗಿರುವ ದೆಹಲಿ ಪೊಲೀಸ್ ಕಾನ್‌ಸ್ಟೆಬಲ್ ಸೋನಿಕಾ ಯಾದವ್ 145 ಕೆಜಿ ತೂಕ ಎತ್ತಿ ಕಂಚಿನ ಪದಕ ಗೆದ್ದಿದ್ದಾರೆ.



ಸದ್ಯ ಸೋನಿಕಾ ಅವರ ಸಾಧನೆ ದೇಶದಾದ್ಯಂತ ಸುದ್ದಿಯಾಗಿದೆ. 30 ವರ್ಷ ವಯಸ್ಸಿನ ಸೋನಿಕಾ ದೆಹಲಿಯ ಉತ್ತರ ಜಿಲ್ಲೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಅ.17ರಂದು ನಡೆದ ಸ್ಪರ್ಧೆಯಲ್ಲಿ ಒಟ್ಟು 145 ಕೆಜಿ ಭಾರ ಎತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಹಲವು ಭಾರ ಎತ್ತುವ ಸ್ಪರ್ಧೆಗಳಲ್ಲಿ ಸೋನಿಕಾ ಸ್ಪರ್ಧಿಸಿದ್ದಾರೆ. ತರಬೇತಿ ಮತ್ತು ಶಿಸ್ತು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಿದ್ಧವಾಗಿರಲು ಸಹಾಯ ಮಾಡಿತು ಎನ್ನುತ್ತಾರೆ ಸೋನಿಕಾ.

ಸ್ಪರ್ಧೆಯೊಂದಕ್ಕೆ ತರಬೇತಿ ಪಡೆಯುವ ವೇಳೆ ಗರ್ಭಿಣಿಯಾಗಿರುವುದು ತಿಳಿದುಬಂದಿತ್ತು, ವೈದ್ಯರ ಸಲಹೆ ಕೇಳಿದಾಗ, ಭಾರ ಎತ್ತುವುದನ್ನು ಮುಂದುವರಿಸಬಹುದು, ಆದರೆ ತೂಕದ ಪ್ರಮಾಣವನ್ನು ಕಡಿತಗೊಳಿಸಿ ಎಂದಿದ್ದರು. 145 ಕೆ.ಜಿ ನಾನು ಸಾಮಾನ್ಯವಾಗಿ ಎತ್ತುವ ತೂಕಕ್ಕಿಂತ ಕಡಿಮೆಯಾಗಿದೆ. ಹೀಗಾಗಿ ಮಗುವಿಗಾಗಲಿ, ಗರ್ಭಕೋಶಕ್ಕಾಗಲಿ ಯಾವುದೇ ತೊಂದರೆಯಾಗಿಲ್ಲ ಎಂದಿದ್ದಾರೆ.

ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಗೆ ಹೃದಯ ಸ್ತಂಭನ

ಜೀವ ಉಳಿಸಿದ ಕೇರಳ ನರ್ಸ್‌ಗಳು

ಕೊಚ್ಚಿ: ಕೊಚ್ಚಿಯಿಂದ ಅಬುಧಾಬಿಗೆ ಪ್ರಯಾಣಿಸುತ್ತಿದ್ದ ಕೇರಳದ ಇಬ್ಬರು ನರ್ಸ್‌ಗಳು, ತಮ್ಮ ಮೊದಲ ಅಂತರರಾಷ್ಟ್ರೀಯ ವಿಮಾನ ಪ್ರಯಾಣದಲ್ಲಿ ಹೃದಯ ಸ್ತಂಭನಕ್ಕೆ ಒಳಗಾದ ಸಹ ಪ್ರಯಾಣಿಕನ ಜೀವ ಉಳಿಸಿದ್ದು, ಅವರ ಕಾರ್ಯಕ್ಕೆ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

ಯುಎಇಯಲ್ಲಿ ತಮ್ಮ ಹೊಸ ಕೆಲಸಕ್ಕೆ ಸೇರಲು ಏರ್ ಅರೇಬಿಯಾ ವಿಮಾನ 3L128 ನಲ್ಲಿ ಪ್ರಯಾಣಿಸುತ್ತಿದ್ದ ವಯನಾಡ್‌ನ 26 ವರ್ಷದ ಅಭಿಜಿತ್ ಜೀಸ್ ಮತ್ತು ಚೆಂಗನ್ನೂರಿನ 29 ವರ್ಷದ ಅಜೀಶ್ ನೆಲ್ಸನ್ ಅವರು ಕೇರಳದ ಸಹ ಪ್ರಯಾಣಿಕರೊಬ್ಬರು ಉಸಿರಾಟದ ತೊಂದರೆ ಅನುಭವಿಸುತ್ತಿರುವುದನ್ನು ಗಮನಿಸಿದ್ದಾರೆ.

ತಕ್ಷಣ ಇಬ್ಬರೂ ಆ ವ್ಯಕ್ತಿಯ ಸಹಾಯಕ್ಕೆ ಧಾವಿಸಿ ಎರಡು ಸುತ್ತು ಸಿಪಿಆರ್ ಮಾಡಿದರು. ಪ್ರಯಾಣಿಕ ನಾಡಿಮಿಡಿತವನ್ನು ಮರಳಿ ಪಡೆಯುವವರೆಗೆ ಮತ್ತು ಮತ್ತೆ ಉಸಿರಾಡಲು ಆರಂಭಿಸುವವರೆಗೆ ಸತತ ಸಿಪಿಆರ್ ಮಾಡಿದರು ಎಂದು ವರದಿ ತಿಳಿಸಿದೆ.

ವಿಮಾನದಲ್ಲಿದ್ದ ವೈದ್ಯ ಡಾ. ಆರಿಫ್ ಅಬ್ದುಲ್ ಖಾದಿರ್ ಸಹ ರೋಗಿಯನ್ನು ಸ್ಥಿರಗೊಳಿಸುವಲ್ಲಿ ಇಬ್ಬರಿಗೂ ಸಹಾಯ ಮಾಡಿದರು ಎಂದು ಅಭಿಜಿತ್ ಹೇಳಿರುವುದಾಗಿ ಖಲೀಜ್ ಟೈಮ್ಸ್ ವರದಿ ಮಾಡಿದೆ.

ಮೋದಿ ಮೆಚ್ಚುಗೆ ಗಳಿಸಿದ ಭಾರತೀಯ ತಳಿಯ ಶ್ವಾನಗಳು

ನವದೆಹಲಿ, ಅ. 31: ಇಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಪ್ರಯುಕ್ತ ಗುಜರಾತ್‌ನ ಏಕತಾ ನಗರದಲ್ಲಿ ಆಯೋಜಿಸಲಾಗಿದ್ದ ಪರೇಡ್‌ನಲ್ಲಿ ಭಾರತೀಯ ತಳಿಯ ಶ್ವಾನಗಳ ಪ್ರದರ್ಶನವಿತ್ತು. ಮೇಡ್ ಇನ್ ಇಂಡಿಯಾ ಸಂಕಲ್ಪಕ್ಕೆ ಪ್ರಧಾನಿ ಮೋದಿ ಸರ್ಕಾರ ಬದ್ಧವಾಗಿದೆ. ಸಾಮಾನ್ಯವಾಗಿ ಪೊಲೀಸ್ ಇಲಾಖೆಯಲ್ಲಿ, ಮಿಲಿಟರಿಯಲ್ಲಿ ವಿದೇಶಿ ತಳಿಗಳ ನಾಯಿಗಳಿಗೆ ಟ್ರೈನಿಂಗ್ ಕೊಟ್ಟು ಬಳಸಲಾಗುತ್ತದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ನಮ್ಮ ಭಾರತೀಯ ಸ್ಥಳೀಯ ಜಾತಿಯ ನಾಯಿಗಳಿಗೆ ತರಬೇತಿ ನೀಡಿ ಸೇನೆಯಲ್ಲಿ ಬಳಸಿಕೊಳ್ಳಲು ಸೂಚನೆ ನೀಡಿದ್ದರು. ಅದರಂತೆ ಭಾರತೀಯ ತಳಿಗಳಾದ ಮುಧೋಳ ಮತ್ತು ರಾಂಪುರ ಹೌಂಡ್ ತಳಿಯ ನಾಯಿಗಳಿಗೆ ತರಬೇತಿ ನೀಡಿ ಸೇನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಇಂದು ಏಕತಾ ನಗರದಲ್ಲಿ ನಡೆದ ಮುಧೋಳ ಮತ್ತು ರಾಂಪುರ ಹೌಂಡ್ ತಳಿಯ ನಾಯಿಗಳ ಕಸರತ್ತು ಮತ್ತು ಪ್ರದರ್ಶನ ಪ್ರಧಾನಿ ನರೇಂದ್ರ ಮೋದಿಯವರ ಮೆಚ್ಚುಗೆಗೆ ಪಾತ್ರವಾಗಿದೆ.



ಉಕ್ರೇನ್‌ನ ವಿದ್ಯುತ್ ಕೇಂದ್ರಗಳ ಮೇಲೆ ರಷ್ಯಾ ಬೃಹತ್ ದಾಳಿ: ಆರು ಮಂದಿ ಸಾವು

ಕೀವ್: ವಿದ್ಯುತ್ ಕೇಂದ್ರಗಳು ಹಾಗೂ ವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ರಷ್ಯಾ, ಉಕ್ರೇನ್‌ನಾದ್ಯಂತ ದೊಡ್ಡ ಪ್ರಮಾಣದ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದ್ದು, ಕನಿಷ್ಠ ಆರು ಮಂದಿ ಸಾವನ್ನಪ್ಪಿದ್ದಾರೆ. ಹಾಗೂ ಮಕ್ಕಳು ಸೇರಿದಂತೆ ಹಲವಾರು ಜನರು ಗಾಯಗೊಂಡಿದ್ದಾರೆ. ಜೊತೆಗೆ ಬಹುತೇಕ ಪ್ರದೇಶಗಳಲ್ಲಿ ವ್ಯಾಪಕ ವಿದ್ಯುತ್ ಕಡಿತಕ್ಕೆ ಕಾರಣವಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸೋಶಿಯಲ್ ಮೀಡಿಯಾದಲ್ಲಿ ಮಾಹಿತಿ ನೀಡಿದ್ದು, ರಾಜಧಾನಿ ಕೀವ್ ಸೇರಿದಂತೆ ಒಂಬತ್ತು ಪ್ರದೇಶಗಳಲ್ಲಿ ನಾಗರಿಕರು ಮತ್ತು ಇಂಧನ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ರಷ್ಯಾದ ಪಡೆಗಳು ದಾಳಿ ನಡೆಸಿವೆ ಎಂದು ಹೇಳಿದ್ದಾರೆ. ದಾಳಿಯಲ್ಲಿ ರಷ್ಯಾ 653 ಡ್ರೋನ್‌ಗಳು ಮತ್ತು ವಿವಿಧ ರೀತಿಯ 52 ಕ್ಷಿಪಣಿಗಳನ್ನು ಉಡಾಯಿಸಿದೆ ಎಂದು ವರದಿಯಾಗಿದೆ.



ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಾಧನೆ ಸಾರ್ವಕಾಲಿಕ ದಾಖಲೆ

ಮಡಿಕೇರಿ, ಅ.31– ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಂಸ್ಮರಣಾ ದಿನಾಚರಣೆ ಶುಕ್ರವಾರ ನಡೆಯಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಮೆರವಣಿಗೆ ಹೊರಟು ಜನರಲ್ ತಿಮ್ಮಯ್ಯ ವೃತ್ತ, ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ಕೋಟೆಗೆ ಆಗಮಿಸಿ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಗಲ್ಲಿಗೇರಿಸಿದ ಸ್ಥಳದಲ್ಲಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ವಿಶ್ರಾಂತ ಪ್ರಾಂಶುಪಾಲ, ನಂಗಾರು ನಿಂಗರಾಜು, ಶಾಸಕರಾದ ಡಾ.ಮಂತರ್‌ಗೌಡ, ಪೊನ್ನಣ್ಣ, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಜಿ. ಮೋಹನ್ ದಾಸ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ವೈ ರಾಜೇಶ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಎಸ್‌ಪಿ ಕೆ.ರಾಮರಾಜನ್, ಅಡಿಷನಲ್ ಎಸ್‌ಪಿ ಬಾರಿಕೆ ದಿನೇಶ್ ಕುಮಾರ್, ಕೊಡಗು ಗೌಡ ಸಮಾಜಗಳ ಒಕ್ಕೂಟಗಳ ಅಧ್ಯಕ್ಷ ಆನಂದ ಕರಂದ್ಲಾಜೆ, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಕೊಲ್ಯದ ಗಿರೀಶ್, ಲಕ್ಷ್ಮೀನಾರಾಯಣ ಕಜೆಗದ್ದೆ, ಪ್ರಮುಖರಾದ ಸೂರ್ತಲೆ ಸೋಮಣ್ಣ, ಅಕಾಡೆಮಿ ಸದಸ್ಯರು ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಪ್ರತಿಮೆಗೆ ಪುಷ್ಪಗುಚ್ಚ ಅರ್ಪಿಸಿ ಗೌರವ ನಮನ ಸಲ್ಲಿಸಿದರು.


ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಂಸ್ಮರಣಾ ದಿನಾಚರಣೆ ಅಂಗವಾಗಿ ಮೆರವಣಿಗೆ ನಡೆಯಿತು.

ಶಾಸಕಎ.ಎಸ್.ಪೊನ್ನಣ್ಣ ಮಾತನಾಡಿ, ಗುಡ್ಡೆಮನೆ ಅಪ್ಪಯ್ಯ ಗೌಡರು ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ್ದು, ಸದಾ ಸ್ಮರಿಸುವಂತಾಗಬೇಕು. ಗುಡ್ಡಗಾಡು ಪ್ರದೇಶ ಹೊಂದಿರುವ ಜಿಲ್ಲೆ ಸ್ವಾತಂತ್ರ್ಯ ಪೂರ್ವದಲ್ಲಿ ಹೇಗಿತ್ತು, ಸ್ವಾತಂತ್ರ್ಯ ನಂತರ ಯಾವ ರೀತಿ ಬೆಳವಣಿಗೆ ಹೊಂದಿದೆ ಎಂಬುದನ್ನು ಊಹಿಸಿಕೊಳ್ಳುವುದು ಕಷ್ಟ ಸಾಧ್ಯ. ಅಂತಹ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು, ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ವಾತಂತ್ರ್ಯ ಹೋರಾಟ ಮತ್ತು ಸಾಧನೆ ಸಾರ್ವಕಾಲಿಕ ದಾಖಲೆ ಎಂದರು

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಪ್ರತಿನಿತ್ಯ ಸ್ಮರಿಸುವಂತಾಗಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಗುಡ್ಡೆ ಮನೆ ಅಪ್ಪಯ್ಯ ಗೌಡರು ಸೇರಿದಂತೆ ಹಲವರು ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ್ದಾರೆ. ಆದರೆ ಇಂದು ನಾವುಗಳೇ ಕಚ್ಚಾಡುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿ ಗುಡ್ಡೆಮನೆ ಅಪ್ಪಯ್ಯ ಗೌಡರ ಪ್ರತಿಮೆ ಬಳಿ ಉದ್ಯಾನವನ ಸಮರ್ಪಕವಾಗಿ ಆಗಲಿ ಎಂದು ಆಶಿಸಿದರು.

ವಿಶ್ರಾಂತ ಪ್ರಾಂಶುಪಾಲರು, ಇತಿಹಾಸ ಪ್ರಾಧ್ಯಾಪಕ ನಂಗಾರು ನಿಂಗರಾಜು ಮಾತನಾಡಿದರು. ಗುಡ್ಡೆಮನೆ ಅಪ್ಪಯ್ಯ ಗೌಡರ ಕುರಿತು ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಸಂತ ಮೈಕಲರ ಶಾಲೆಯ ಸ್ನೇಹ ಕೆ.ಎಫ್ (ಪ್ರಥಮ), ಸಂತ ಜೋಸೆಫರ ಶಾಲೆಯ ಲ್ಯಾನ್ಸಿ ಪೊನ್ನಮ್ಮ ಟಿ.ಟಿ.(ದ್ವಿತೀಯ), ಸಂತ ಜೋಸೆಫರ ಶಾಲೆಯ ರಿಧಿ ಎಸ್.ನಾಯಕ್(ತೃತೀಯ), ಬಹು ಮಾನ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಪ್ರಮುಖರಾದ ಸೂರ್ತಲೆ ಸೋಮಣ್ಣ, ಅಂಬೆಕಲ್ಲು ವಿನೋದ್, ಸಾಹಿತ್ಯ ಅಕಾಡೆಮಿ ಸದಸ್ಯರಾದ ಪಿ.ಎಂ.ಸಂದೀಪ್, ಮೋಹನ್ ಪೊನ್ನಚನ, ಚಂದ್ರಶೇಖರ್ ಪೇರಾಲು, ತೇಜಕುಮಾರ್ ಕುಡೆಕಲ್ಲು, ಚಂದ್ರಾವತಿ ಬಡ್ಡಡ್ಕ, ಲತಾ ಪ್ರಸಾದ್ ಕುದ್ಪಾಜೆ, ಪಿ.ಎಸ್. ಕಾರ್ಯಪ್ಪ, ಡಾ.ಎನ್.ಎ. ಜ್ಞಾನೇಶ್, ಸೂದನ ಎಸ್.ಈರಪ್ಪ, ವಿನೋದ್ ಮೂಡಗದ್ದೆ, ಗೋಪಾಲಕೃಷ್ಣ ಕೆ.ಸಿ., ಕುದುಪಜೆ ಕೆ.ಪ್ರಕಾಶ್, ರಿಜಿಸ್ಟ್ರಾರ್ ಚಿನ್ನಸ್ವಾಮಿ, ಕಸಂ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ವಿವಿಧ ಗೌಡ ಸಮಾಜಗಳ ಪ್ರಮುಖರು ಇತರರು ಇದ್ದರು. ಅರೆಭಾಷೆ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಸ್ವಾಗತಿಸಿದರು.

ಸಶಕ್ತ ರಾಷ್ಟ್ರ ನಿರ್ಮಾಣಕ್ಕೆ ಕಾರಣರಾಗಿದ್ದ ಪಟೇಲ್



ಏಕತಾ ದಿನದ ಅಂಗವಾಗಿ ನಗರದಲ್ಲಿ ಭಾರತೀಯ ಜನತಾ ಪಾರ್ಟಿಯಿಂದ 'ಏಕತಾ ನಡಿಗೆ' ನಡೆಯಿತು.

ಮಡಿಕೇರಿ, ಅ.31–'ಉಕ್ಕಿನ ಮನುಷ್ಯ' ಎಂದು ಕರೆಸಿಕೊಂಡ ಸರ್ದಾರ್ ವಲ್ಲಭಭಾಯಿ ಪಟೇಲ್‌ರ ಜನ್ಮದಿನದ ಏಕತಾ ದಿನದ ಅಂಗವಾಗಿ ನಗರದಲ್ಲಿ ಬಿಜೆಪಿಯಿಂದ 'ಏಕತಾ ನಡಿಗೆ' ಕಾರ್ಯಕ್ರಮ ನಡೆಯಿತು.

ನಗರದ ಸುದರ್ಶನ ವೃತ್ತದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ, ಪಾರಿವಾಳವನ್ನು ಹಾರಿ ಬಿಡುವ ಮೂಲಕ ಏಕತಾ ನಡಿಗೆಗೆ ಬಿಜೆಪಿ ಮುಖಂಡರು ಚಾಲನೆ ನೀಡಿದರು. ಸುದರ್ಶನ ವೃತ್ತದಿಂದ ಆರಂಭಗೊಂಡ ಏಕತಾ ನಡಿಗೆ ಜನರಲ್ ಕೆಎಸ್. ತಿಮ್ಮಯ್ಯ ವೃತ್ತದಲ್ಲಿ ಮಹಾನ್ ಸೇನಾಧಿಕಾರಿಗೆ ಗೌರವ ನಮನ ಸಲ್ಲಿಸುವ ಮೂಲಕ ಅಂತ್ಯಗೊಂಡಿತು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ವಾತಂತ್ರ್ಯ ದೊರೆತ ಆರಂಭದಲ್ಲಿ ರಾಷ್ಟ್ರದ ವಿವಿದೆಡೆಗಳಲ್ಲಿ ಭಾರತದ ಒಕ್ಕೂಟಕ್ಕೆ ಸೇರದ ಪ್ರಾಂತ್ಯಗಳಲ್ಲಿ ತಮ್ಮದೆ ಆಳ್ವಿಕೆ ನಡೆಸುತ್ತಿದ್ದ 552ಕ್ಕೂ ಹೆಚ್ಚಿನ ರಾಜರೊಂದಿಗೆ ಮಾತುಕತೆ ನಡೆಸಿ ಅವರ ಮನವೊಲಿಸಿ ಒಕ್ಕೂಟದ ಪ್ರಜಾ ಪ್ರಭುತ್ವ ವ್ಯವಸ್ಥೆಯಡಿ ತರುವ ಅತ್ಯಂತ ಮಹತ್ವದ ಕೆಲಸವನ್ನು ಮಾಡಿದ್ದಾರೆ. ಆ ಮೂಲಕ ಸಶಕ್ತ ರಾಷ್ಟ್ರ ನಿರ್ಮಾಣಕ್ಕೆ ಕಾರಣರಾಗಿದ್ದಾರೆ ಎಂದರು

ಪ್ರಧಾನಿ ಸ್ಥಾನ ವಂಚಿತರು: ವಿಧಾನ ಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಪಟೇಲ್ ಅವರು ಸ್ವತಂತ್ರ ಭಾರತದ ಮೊಟ್ಟ ಮೊದಲ ಪ್ರಧಾನ ಮಂತ್ರಿಗಳಾಗಬೇಕಾಗಿತ್ತು. ಅಂದು ನಡೆದ ಷಡ್ಯಂತ್ರಗಳಿಂದ ಅದು ಅವರಿಗೆ ದೊರಕಲಿಲ್ಲ. ಹೀಗಿದ್ದರೂ ಭಾರತದ ಅಖಂಡತೆಗಾಗಿ ಪಟೇಲರು ನಡೆಸಿದ ಕಾರ್ಯವನ್ನು ನಾವೆಂದಿಗೂ ಮರೆಯುವಂತಿಲ್ಲ. ಹೈದ್ರಾಬಾದ್ ಅನ್ನು ಆಳುತ್ತಿದ್ದ ನಿಜಾಮ ಒಕ್ಕೂಟ ಸೇರ್ಪಡೆಯನ್ನು ವಿರೋಧಿಸಿದಾಗ ಆತನ ವಿರುದ್ಧ ಯುದ್ಧವನ್ನು ಸಾರುವ ಮೂಲಕ ಒಕ್ಕೂಟ ವ್ಯವಸ್ಥೆ ತಂದ ಕೀರ್ತಿ ಪಟೇಲರಿಗೆ ಸಲ್ಲಬೇಕೆಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು. ಏಕತಾ ನಡಿಗೆಯಲ್ಲಿ ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ರಾಬಿನ್ ದೇವಯ್ಯ, ನಗರ ಸಭಾ ಅಧ್ಯಕ್ಷೆ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪಕ್ಷದ ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಬಾಂಡ್ ಗಣಪತಿ, ಬಿ.ಕೆ. ಅರುಣ್ ಕುಮಾರ್, ನಾಗೇಶ್ ಕುಂದಲ್ಪಾಡಿ, ನಗರಸಭಾ ಸದಸ್ಯರಾದ ಅನಿತಾ ಪೂವಯ್ಯ, ಕೆ.ಎಸ್. ರಮೇಶ್, ಎಸ್.ಸಿ.ಸತೀಶ್, ಅರುಣ್ ಶೆಟ್ಟಿ, ಸವಿತಾ ರಾಕೇಶ್, ಮಂಜುಳಾ, ಉಷಾ ಕಾವೇರಪ್ಪ, ಉಮೇಶ್ ಸುಬ್ರಮಣಿ, ತಾಪಂ ಮಾಜಿ ಅಧ್ಯಕ್ಷೆ ತೆಕ್ಕಡೆ ಶೋಭಾ ಮೋಹನ್ ಸೇರಿದಂತೆ ಹಲವು ಗಣ್ಯರು, ಪಾಲ್ಗೊಂಡಿದ್ದರು.

ಪಟೇಲ್ ಜನ್ಮದಿನದ ಸ್ಮರಣಾರ್ಥ ರಾಷ್ಟ್ರೀಯ ಏಕತಾ ಮೆರವಣಿಗೆ



ಶಾಸಕ ಎಎಸ್.ಪೊನ್ನಣ್ಣ ನೇತೃತ್ವದಲ್ಲಿ ವಿದ್ಯಾರ್ಥಿಗಳು, ಪೊಲೀಸರು ಕಾಲ್ನಡಿಗೆ ಜಾಥಾ ನಡೆಸಿದರು

ವಿರಾಜಪೇಟೆ, ಅ.31–ಭಾರತದ ಸಾರ್ವಭೌಮತೆ ಉಳಿಸಿಕೊಳ್ಳಲು ದೇಶದ ನಾಗರಿಕರಲ್ಲಿ ಏಕತೆ ಭಾವನೆ ಅತೀ ಮುಖ್ಯವಾಗಿದೆ. ಶಿಸ್ತು ಪ್ರಾಮಾಣಿಕತೆ ಹಾಗೂ ಪ್ರಬುದ್ಧತೆಗೆ ಹೆಸರಾಗಿರುವ ನಮ್ಮ ಪೊಲೀಸರು ಸಮಾಜದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎಂಬುದನ್ನು ಖಾತ್ರಿ ಪಡಿಸಲು ಸದಾ ಎಚ್ಚರದಿಂದ ಇರಬೇಕು ಎಂದು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹೇಳಿದರು.

ಜಿಲ್ಲಾ ಪೊಲೀಸ್ ವಿರಾಜಪೇಟೆ ವೃತ್ತ, ನಗರ ಠಾಣೆ ಮತ್ತು ಗ್ರಾಮಾಂತರ ಠಾಣೆ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಏಕತಾ ದಿನ'ದ ಅಂಗವಾಗಿ ನಗರದ ತಾಲೂಕು ಮೈದಾನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ ಬ್ರಿಟಿಷರ ಕಪಿಮುಷ್ಟಿಯಿಂದ ಸ್ವಾತಂತ್ರ್ಯ ಹೋರಾಟಗಾರರು ನಮಗೆ ತಂದುಕೊಟ್ಟ ಸ್ವಾತಂತ್ರ ಭಾರತದ ಸ್ವರ್ಣ ಯುಗವನ್ನು ಮುಂದುವರಿಸಲು ಪ್ರತಿಯೊಬ್ಬ ಭಾರತೀಯನು ಒಗ್ಗಟ್ಟಾಗಿ ಇರುವುದು. ದೇಶದ ವಿಷಯ ಬಂದ ಸಂದರ್ಭದಲ್ಲಿ ಪ್ರಜೆಗಳಾದ ನಮ್ಮೊಳಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಮೂಡಬಾರದು ಎಂದರು.

ರಾಷ್ಟ್ರೀಯ ಏಕತಾ ದಿನ ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿ ಹೆಚ್.ಎಸ್.ಪ್ರಮೋದ್, ಕಾವೇರಪ್ಪ, ಲತಾ, ವಾಣಿಶ್ರೀ, ಹಾಗೂ ಕೊಡವ ಸಮಾಜ, ವಕೀಲರ ಸಂಘ, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಕ್ಲಬ್ ಮಹೇಂದ್ರ ಮುಖಂಡರು ಪದಾಧಿಕಾರಿಗಳು, ಮತ್ತು ದಂತ ವೈದ್ಯಕೀಯ ಕಾಲೇಜು, ಕಾವೇರಿ ಕಾಲೇಜ್, ಸಂತ ಅನ್ನಮ್ಮ ಕಾಲೇಜು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಂಶುಲ್ಲ ಉಲಾಮ, ಶಾಲಾ ಕಾಲೇಜು ವಿದ್ಯಾರ್ಥಿಗಳು ಪೊಲೀಸ್ ಇಲಾಖೆಯೊಂದಿಗೆ ತಾಲೂಕು ಮೈದಾನದಿಂದ ಕಾಲ್ನಡಿಗೆ ಜಾಥಾ ಹೊರಟು ಖಾಸಗಿ ಬಸ್ ನಿಲ್ದಾಣ, ಗೋಣಿಕೊಪ್ಪ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿಂದ ದೊಡ್ಡಟ್ಟಿ ಚೌಕಿ, ಮುಖ್ಯ ರಸ್ತೆ ಮೂಲಕ ಗಡಿಯಾರ ಕಂಬದ ಬಳಿಯಿಂದ ಮಹಿಳಾ ಸಮಾಜದವರೆಗೆ ಮೆರವಣಿಗೆ ನಡೆಸಿ ಜಾಗೃತಿ ಮೂಡಿಸಿದರು.

ಎಪಿಸಿಎಂಎಸಿ ಚುನಾವಣೆ
ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಜಯಭೇರಿ

ಕುಶಾಲನಗರ: ತಾಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಎಚ್.ಬಿ.ಚಂದ್ರಪ್ಪ ಜಯಭೇರಿ ಬಾರಿಸುವ ಮೂಲಕ ಮೇಲುಗೈ ಸಾಧಿಸಿದ್ದಾರೆ.

ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದಾರೆ. ಹೆಬ್ಬಾಲೆ ವಿಭಾಗದಿಂದ ಸಾಮಾನ್ಯ ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಮಾಜಿ ಅಧ್ಯಕ್ಷ ಎಚ್.ಬಿ. ಚಂದ್ರಪ್ಪ, ಹಿಂದುಳಿದ ವರ್ಗ (ಬಿಸಿಎಂ–ಎ) ಮೀಸಲು ಕ್ಷೇತ್ರದಿಂದ ಬಿಜೆಪಿ ಬೆಂಬಲತ ಎಚ್. ಎನ್. ಮಹಾದೇವ, ಮಹಿಳಾ ಮೀಸಲು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಎಚ್.ಟಿ. ಚಂದ್ರಕಲಾ, ಕುಶಾಲನಗರ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಲ್ಲಿ ಕಾರ್ಜುನ, ಎಸ್‌ಸಿ ಮೀಸಲು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ನಂದಕುಮಾರ್, ಮಹಿಳಾ ಮೀಸಲು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಪಾರ್ವತಿ, ಸುಂಟಿಕೊಪ್ಪ ವಿಭಾಗದಿಂದ ಎ. ತರಗತಿ ಕ್ಷೇತ್ರದಿಂದ ಎಂ.ಎನ್.ಕುಮಾರಪ್ಪ, ಎಸ್‌ಟಿ ಕ್ಷೇತ್ರದಿಂದ ಡಿ.ಕೆ.ಗಂಗಾಧರ್ ಹಾಗೂ ಸಾಮಾನ್ಯ ಕ್ಷೇತ್ರದಿಂದ ಎನ್.ಸಿ. ಪೊನ್ನಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟೇಲ್ ಜನ್ಮದಿನದ ಅಂಗವಾಗಿ ಏಕತಾ ಓಟ



ನಾಪೋಕ್ಲು, ಅ31–ಸರ್ದಾರ್ ವಲ್ಲಭಭಾಯಿ ಪಟೇಲ್ 150ನೇ ಜನ್ಮದಿನದ ಅಂಗವಾಗಿ ಏಕತಾ ಓಟವನ್ನು ನಾಪೋಕ್ಲುವಿನಲ್ಲಿ ಶುಕ್ರವಾರ ಆಯೋಜಿಸಲಾಗಿತ್ತು.

ಪೊಲೀಸ್ ಠಾಣೆಯ ಸಹಾಯಕ ಠಾಣಾಧಿಕಾರಿ ಫ್ರಾನ್ಸಿಸ್ ನೇತೃತ್ವದಲ್ಲಿ ಪೊಲೀಸರು ಹಾಗೂ ಗ್ರಾಪಂ ಸದಸ್ಯ ಮಾಚೇಟಿರ ಕುಸು ಕುಶಾಲಪ್ಪ, ಅಶ್ರಫ್ ಕೆ ವೈ ಪಟ್ಟಣದ ಬಸ್ ನಿಲ್ದಾಣದಿಂದ ಮಾರುಕಟ್ಟೆವರೆಗೆ ಏಕತಾ ಓಟವನ್ನು ನಡೆಸಿ ಏಕತಾ ಸಂದೇಶವನ್ನು ಸಾರಿದರು. ಸ್ಥಳೀಯ ಪೊಲೀಸ್ ಠಾಣೆ ಸಿಬ್ಬಂದಿಗಳು, ಸಾರ್ವಜನಿಕರು, ಆಟೋ ಚಾಲಕರು ಉಪಸ್ಥಿತರಿದ್ದರು.

ಮಲೆಯೂರಲ್ಲಿ ಮೂರು ದಿನಗಳ ಪಂಚಕಲ್ಯಾಣಕ್ಕೆ ವಿದ್ಯುಕ್ತ ಚಾಲನೆ


ಕನಕಗಿರಿ ಕ್ಷೇತ್ರದಲ್ಲಿ ಧಾಮಸಂಪ್ರೋಕ್ಷಣೆಯನ್ನು ಧರ್ಮಾಧಿಕಾರಿ ಡಿ.ವೀರೇಂದ್ರಹೆಗಡೆ ಉದ್ಘಾಟಿಸಿದರು. ಕನಕಗಿರಿ ಕ್ಷೇತ್ರದ ಶ್ರೀಗಳು, ಶ್ರವಣಬೆಳಗೊಳ ಜೈನಮಠದ ಮತ್ತು ಆರತಿಪುರ ಜೈನಮಠದ ಸ್ವಾಮೀಜಿಗಳು, ಡಿ.ಸುರೇಂದ್ರಕುಮಾರ್, ವೀರೇಂದ್ರಹೆಗಡೆ ಪುತ್ರಿ ಶ್ರದ್ಧಾ ಅಮಿತ್ ಮೊದಲಾದವರು ಉಪಸ್ಥಿತರಿದ್ದರು.

ಚಾಮರಾಜನಗರ. ಅ.31–ಹೊಸ ಮಂದಿರಗಳನ್ನು ನಿರ್ಮಾಣ ಮಾಡುವುದಕ್ಕಿಂತಲೂ ಶಿಥಿಲಾವಸ್ಥೆಯಲ್ಲಿರುವ ಹಳೇ ದೇವಾಲಯಗಳನ್ನು ಗುರುತಿಸಿ ಅವುಗಳನ್ನು ಜೀರ್ಣೋದ್ದಾರ ಮಾಡುವುದಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ, ರಾಜ್ಯ ಸಭೆ ಸದಸ್ಯ ಡಿ.ವೀರೇಂದ್ರಹೆಗಡೆ ತಿಳಿಸಿದ್ದಾರೆ

ತಾಲೂಕಿನ ಮಲೆಯೂರು ಗ್ರಾಮದಲ್ಲಿ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್, ಪ್ರಾಚ್ಯವಸ್ತು ಸಂಗ್ರಹಾಲಯ, ಪರಂಪರೆ ಇಲಾಖೆ. ಧಾರ್ಮಿಕ ದತ್ತಿ ಇಲಾಖೆ, ಭಕ್ತಾದಿಗಳ ಸಹಕಾರದೊಂದಿಗೆ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ಶಿಲಾ ಬಸದಿ ಭ 1008 ಆದಿನಾಥ ತೀರ್ಥಂಕರರ ಶಿಲಾ ಜಿನಬಿಂಬ ಪುನರ್ ಪ್ರತಿಷ್ಠಾಪನೆ ಹಾಗೂ ಧಾಮ ಸಂಪ್ರೋಕ್ಷಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾವಿರಾರು ವರ್ಷಗಳ ಹಿಂದೆ ರಾಜಮಹಾರಾಜರೋ, ಚಕ್ರವರ್ತಿಗಳೋ, ದೇವಾಲಯ ನಿರ್ಮಾಣ ಮಾಡಿರುತ್ತಾರೆ. ಕಾಲಕಳೆದಂತೆ ಅವು ಶಿಥಿಲಾವಸ್ಥೆ ತಲುಪುತ್ತವೆ. ಅದು ಶಿವದೇವಾಲಯವಾಗಲೀ, ವಿಷ್ಣು ದೇವಾಲಯವೇ ಆಗಲೀ, ನಾವು ನೋಡುವುದಿಲ್ಲ. ಅದರ ಯಥಾಸ್ಥಿತಿ ಕಾಪಾಡಿಕೊಂಡು. ಅದನ್ನು ಜೀರ್ಣೋದ್ಧಾರ ಮಾಡುವುದು ಜವಾಬ್ದಾರಿಯಾಗಿದೆ ಎಂದರು.

ಆರತಿಪುರ ಜೈನಮಠದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಎಲ್ಲ ಪ್ರಾಣಿ ಪಕ್ಷಿಗಳು ಹುಟ್ಟುತ್ತವೆ. ಸಾಯುತ್ತವೆ. ಆದರೆ ಅವುಗಳಲ್ಲಿ. ಮನುಷ್ಯನ ಲ್ಲಿರುವಷ್ಟು ಸ್ವಾರ್ಥಲಾಲಸೆ ಇರುವುದಿಲ್ಲ. ಜಗತ್ತಿನ ಎಲ್ಲ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠ, ಮನುಷ್ಯ ಬದುಕಿರುವಾಗ ನಾಲ್ಕು ಜನರಿಗೆ ಉಪಯೋಗವಾಗುವ ಕೈಂಕರ್ಯ ಮಾಡಬೇಕು. ಪರೋಪಕಾರಂ ಇದು ಶರೀರ ಎಂಬ ಹಿರಿಯರ ವಾಣಿಯನ್ನು ಜೀವನ ದುದ್ದಕ್ಕೂ ಪಾಲನೆ ಮಾಡಬೇಕು ಎಂದರು.

ಕನಕಗಿರಿ ಕ್ಷೇತ್ರದ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ಪಂಚ ಕಲ್ಯಾಣ ಕನ್ನಡಕವಿಗಳಿಗೆ ವರ್ಣನೆಯ ಹಬ್ಬವಾದರೆ, ನಮಗೆ ಅದು ಆಚರಣೆಯ ಹಬ್ಬ, ಪಂಪ, ರನ್ನ. ಪೊನ್ನ. ಜನ್ನ ನಾಗಚಂದ್ರ ಕವಿಗಳು ತಮ್ಮ ಕಾವ್ಯಗಳಲ್ಲಿ ಪಂಚಕಲ್ಯಾಣಗಳಿಗೆ ಆದ್ಯತೆ ನೀಡಿದ್ದಾರೆ ಎಂದರು. ಶ್ರವಣ ಬೆಳಗೊಳ ಜೈನ ಮಠದ ಮದಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಆಶೀರ್ವಚನ ನೀಡಿದರು. ಇದಕ್ಕೂ ಮೊದಲು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಧರ್ಮಸ್ಥಳ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, 108 ಪುಣ್ಯಸಾಗರ ಮುನಿ ಮಹಾರಾಜರನ್ನು ಪೂರ್ಣಕುಂಭ, ಛತ್ರಿ ಚಾಮರಗಳ ಸಮೇತ ಮಂಗಳ ವಾದ್ಯಗಳ ನಿನಾದದೊಂದಿಗೆ ಜೀರ್ಣೋದ್ಧಾರಗೊಂಡಿರುವ ನೂತನ ಆದಿನಾಥ ತೀರ್ಥಂಕರರ ಬಸದಿಗೆ ಬರಮಾಡಿಕೊಳ್ಳಲಾಯಿತು.

ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ನೇಮಿರಾಜ್ ಪ್ರಾಸ್ತಾವಿಕ ಮಾತನಾಡಿದರು. ರಾಷ್ಟ್ರೀಯ ಜೈನ್ ಮಿಲನ್ ಅಧ್ಯಕ್ಷ ಡಿ.ಸುರೇಂದ್ರಕುಮಾರ್, ಶ್ರದ್ಧಾ ಅಮಿತ್, ಮಾಜಿ ಶಾಸಕ ಸಿ.ಎಸ್. ನಿರಂಜನ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಎಂ ಬದಲಾವಣೆ ಬಗ್ಗೆ ಪ್ರತಿಕ್ರಿಯೆ ನೀಡಲ್ಲ: ಸಚಿವ ಮಧು ಬಂಗಾರಪ್ಪ


ಶಾಸಕ ಎ.ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಮುಖ್ಯಶಿಕ್ಷಕರ ನಿಯೋಗದಿಂದ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಕೊಳ್ಳೇಗಾಲ. ಅ.31–ನಮ್ಮ ವರಿಷ್ಠರು ಎಲ್ಲರೂ ಬಾಯಿಮುಚ್ಚಿಕೊಂಡಿರಿ ಎಂಬ ಸಂದೇಶ ಸಾರಿದ್ದಾರೆ, ನೀವು ಯಾವುದೆ ರೀತಿಯ ಪ್ರಶ್ನೆಗಳನ್ನು ಕೇಳಿದರೂ ನಾವು ಇದನ್ನೇ ಹೇಳುವುದು, ಸಿಎಂ ಬದಲಾವಣೆ ಸೇರಿದಂತೆ ಯಾವುದೆ ವಿಚಾರಕ್ಕೂ ನಾನು ಪ್ರತಿಕ್ರಿಯೆ ನೀಡಲ್ಲ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು

ಕೊಳ್ಳೇಗಾಲದಲ್ಲಿ ಪ್ರವಾಸಿ ಮಂದಿರಕ್ಕೆ ಆಗಮಿಸಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಿಷ್ಠರು ನಮ್ಮನ್ನೆಲ್ಲ ಬಾಯಿ ಮುಚ್ಚಿಕೊಂಡು ಇರಿ ಯಾವುದೆ ವಿಚಾರಕ್ಕೂ ಉತ್ತರಿಸಬೇಡಿ ಅಂದಿದ್ದಾರೆ, ಮಾಧ್ಯಮದವರೇ ನವೆಂಬರ್ ಕ್ರಾಂತಿ, ಸಿ ಎಂ ಬದಲಾವಣೆ ವಿಚಾರದಲ್ಲಿ ಜ್ಯೋತಿಷಿಗಳಾಗಿದ್ದಾರೆ, ಹಾಗಾಗಿ ಇಂತಹ ಚಾಳಿ ಬಿಡಬೇಕು ಎಂದರು.

ದೈಹಿಕ ಶಿಕ್ಷಕರು ಹಾಗೂ ಶಿಕ್ಷಕರ ಕೊರತೆ ನೇಮಕ ವಿಚಾರದಲ್ಲಿ ಮುಖ್ಯಮಂತ್ರಿಗಳು ಅಗತ್ಯ ಕ್ರಮಕೈಗೊಳ್ಳುತ್ತಾರೆ. ಚಿಲಕವಾಡಿಯಲ್ಲಿ ಶಿಕ್ಷಕರ ವಸತಿ ಸಮುಚ್ಚಯ ಹಲವಾರು ವರುಷಗಳಿಂದ ಉಪಯೋಗಕ್ಕೆ ಬಾರದಿರುವುದರ ಕುರಿತು ನನ್ನ ಗಮನಕ್ಕೆ ಬಂದಿಲ್ಲ, ಈ ರೀತಿಯಾಗಿದ್ದರೆ ಅಗತ್ಯ ಕ್ರಮವಹಿಸುವೆ ಎಂದರು

ಮನವಿ ಸಲ್ಲಿಕೆ : ಪಟ್ಟಣ ವ್ಯಾಪ್ತಿಯಲ್ಲಿರುವ ಮುಡಿಗುಂಡದ ಆದರ್ಶ ವಿದ್ಯಾಲಯ ಕಟ್ಟಡಕ್ಕಾಗಿ ರೇಷ್ಮೆ ಇಲಾಖೆಗೆ ಸೇರಿದ ಸ್ಥಳವನ್ನು ಶಾಲಾ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲು ಅನುದಾನ ಒದಗಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರಿಗೆ ಶುಕ್ರವಾರ ಶಾಲಾಭಿವೃದ್ಧಿ ಸಮಿತಿಯಿಂದ ಮನವಿ ಸಲ್ಲಿಸಲಾಯಿತು

ಪ್ರವಾಸಿ ಮಂದಿರಕ್ಕೆ ಆಗಮಿಸಿದ ಸಚಿವರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಮುಖ್ಯಶಿಕ್ಷಕರ ನಿಯೋಗದಿಂದ ಸಚಿವರನ್ನು ಭೇಟಿಯಾಗಿ ಮನವಿ ಸಲ್ಲಿಸುವ ಜೊತೆಗೆ ಚರ್ಚಿಸಿದರು. ರೇಷ್ಮೆ ಇಲಾಖೆಗೆ ಸೇರಿದ 5 ಎಕರೆ ಪ್ರದೇಶದಲ್ಲಿ ಶಾಲಾ ಕಟ್ಟಡ ನಿರ್ಮಿಸಿದ್ದು, ನೂರಾರು ಮಕ್ಕಳ ಶೈಕ್ಷಣಿಕ ಬದುಕು ರೂಪಿಸಲಾಗುತ್ತಿದೆ. ಹೀಗಾಗಿ ಉದ್ದೇಶಿತ ಭೂಮಿಯನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರ ಮಾಡಬೇಕಿದ್ದು, ಈ ಹಿನ್ನೆಲೆಯಲ್ಲಿ ಇಲಾಖೆಯಿಂದ ಅಗತ್ಯ ಅನುದಾನ ಒದಗಿಸಿಕೊಡುವಂತೆ ಮನವರಿಕೆ ಮಾಡಿ ಕೊಡಲಾಯಿತು. ಮನವಿಗೆ ಸ್ಪಂದಿಸಿದ ಸಚಿವರು ಅಗತ್ಯ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ, ಎಸ್‌ಡಿಎಂಸಿ ಅಧ್ಯಕ್ಷ ಲಿಂಗರಾಜು, ಮಾಜಿ ಅಧ್ಯಕ್ಷ ಪ್ರಕಾಶ, ಸದಸ್ಯರಾದ ಸುರೇಶ, ಪ್ರಕಾಶ, ಗಿರೀಶ, ಮುಖ್ಯಶಿಕ್ಷಕಿ ಆರ್.ಪ್ರಿಯದರ್ಶಿನಿ ಇದ್ದರು

ನ.5, ಶಿವಪುರ ಕಲ್ಲುಕಟ್ಟೆಹಳ್ಳ ಜಲಾಶಯದಿಂದ ಬಿಜೆಪಿ ಪಾದಯಾತ್ರೆ

ಗುಂಡ್ಲುಪೇಟೆ, ಅ.31 (ಸೋಮ್.ಜಿ)– ರೈತರ ಹಿತದೃಷ್ಟಿಯಿಂದ ಕಾಲ್ನಡಿಗೆ ನಡೆಸುವ ಮೂಲಕ ಕೆರೆಗಳಿಗೆ ನದಿಮೂಲದಿಂದ ನೀರು ತುಂಬಿಸುವ ವಿಚಾರದಲ್ಲಿ ಬೇಜವಾಬ್ದಾರಿಯಲ್ಲಿರುವ ಅಧಿಕಾರಿಗಳು ಮತ್ತು ಶಾಸಕರನ್ನು ಎಚ್ಚರಿಸುವ ಕೆಲಸ ಬಿಜೆಪಿ ಮಾಡಲಿದೆ ಎಂದು ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.


ಪಟ್ಟಣದ ಪ್ರವಾಸಿಮಂದಿರದಲ್ಲಿ ಸಿ.ಎಸ್.ನಿರಂಜನಕುಮಾರ್ ಪಾದಯಾತ್ರೆಯ ಕರಪತ್ರ ಬಿಡುಗಡೆ ಮಾಡಿದರು. ಸಿ.ಮಹದೇವಪ್ರಸಾದ್, ಎಲ್.ಸುರೇಶ್, ಎನ್.ಮಲ್ಲೇಶ್, ರೇವಣ್ಣ, ನವೀನ್ ಮೌರ್ಯ ಇದ್ದರು.

ಸರ್ಕಾರವನ್ನು ಎಚ್ಚರಿಸುವ ಸಲುವಾಗಿ ನ.5ರಂದು ತಾಲೂಕಿನ ಶಿವಪುರ ಕಲ್ಲುಕಟ್ಟೆಹಳ್ಳ ಜಲಾಶಯದಿಂದ ಪಾದಯಾತ್ರೆ ಹೊರಟು ಪಟ್ಟಣದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಮೈಸೂರು ಕೊಡಗು ಸಂಸದ ಯದುವೀರ್ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಲಿದ್ದಾರೆ. ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್. ಮಹೇಶ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಳ್ಳಲಿದ್ದಾರೆ. ಮುಂದಿನ ಅಧಿವೇಶನದಲ್ಲಿ ವಿರೋಧಪಕ್ಷದ ನಾಯಕರ ಮೂಲಕ ವಿಷಯ ಪ್ರಸ್ತಾಪಿಸಿ ತಾಲೂಕಿಗೆ ನ್ಯಾಯ ದೊರಕುವಂತೆ ಮಾಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಾಲಿ ಶಾಸಕರು ಕೆಲವೇ ಕೋಟಿ ಅನುದಾನ ತಂದು ರಸ್ತೆಗಳ ಗುಂಡಿ ಮುಚ್ಚಲು ಸಾಧ್ಯವಾಗದಿದ್ದರೂ 475 ಕೋಟಿ ವೆಚ್ಚದ ಯೋಜನೆಯ ಟೆಂಡರ್ ಕರೆಯಲಾಗುತ್ತಿದೆ ಎನ್ನುತ್ತಿದ್ದಾರೆ ಎಂದು ಲೇವಡಿ ಮಾಡಿದರು. ಮಂಡಲಾಧ್ಯಕ್ಷ ಸಿ.ಮಹದೇವ ಪ್ರಸಾದ್, ಮಾಜಿ ಅಧ್ಯಕ್ಷರಾದ ಎಲ್.ಸುರೇಶ್, ಎನ್. ಮಲ್ಲೇಶ್, ಪುರಸಭೆ ಸದಸ್ಯ ನಾಗೇಶ್, ತಾಪಂ ಮಾಜಿ ಸದಸ್ಯ ರೇವಣ್ಣ ಮುಖಂಡ ನವೀನ್ ಮೌರ್ಯ, ಮಾಧ್ಯಮ ಸಂಚಾಲಕ ಹುಂಡೀಪುರ ಮಂಜುನಾಥ್, ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದ್ದರು.

ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ ಆಚರಣೆ

ಚಾಮರಾಜನಗರ, ಅ.31 –ಜಿಲ್ಲಾಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮವನ್ನು ನ.1 ರ ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಧ್ವಜಾರೋಹಣ ನೆರವೇರಿಸಿ, ಬಳಿಕ ರಾಜ್ಯೋತ್ಸವದ ಸಂದೇಶ ನೀಡುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ರಾಜ್ಯೋತ್ಸವ ಜಿಲ್ಲಾ ಸನ್ಮಾನಕ್ಕೆ 10 ಸಾಧಕರ ಆಯ್ಕೆ

ಚಾಮರಾಜನಗರ: ಕನ್ನಡ ರಾಜ್ಯೋತ್ಸವ ಅಂಗವಾಗಿ ಜಿಲ್ಲಾಡಳಿತದ ವತಿಯಿಂದ ವಿವಿಧ ಕ್ಷೇತ್ರಗಳ 10 ಸಾಧಕರನ್ನು ಜಿಲ್ಲಾ ಸನ್ಮಾನಕ್ಕೆ ಆಯ್ಕೆ ಮಾಡಲಾಗಿದೆ.

ಮಧುಸೂಧನ್ ಮಂಗಲ ಗ್ರಾಮ–ಶಿಲ್ಪ ಕಲಾಕೃತಿ, ಡಾ.ಕೃಷ್ಣಮೂರ್ತಿ ಚಮರಂ, ಚೆನ್ನಮಲ್ಲಪುರ–ಸಾಹಿತ್ಯ, ಸಿನಿಮಾ, ರಾಮಣ್ಣ, ಕೆಲ್ಲಂ ಬಳ್ಳಿ–ಜಾನಪದ, ವೆಂಕಟರಮಣಸ್ವಾಮಿ, ಗಾಳಿಪುರ–ರಂಗಭೂಮಿ, ಸಿ.ಶಂಕರ್, ಅಂಕನಶೆಟ್ಟಿಪುರ–ಸಾಹಿತ್ಯ ಮತ್ತು ಸಮಾಜಸೇವೆ, ಸಿ.ಮಾದೇಗೌಡ, ಬಿಳಿಗಿರಿರಂಗನಬೆಟ್ಟ–ಸಮಾಜಸೇವೆ, ನಂದೀಶ್, ಯಳಂದೂರು–ಪತ್ರಿಕೋದ್ಯಮ, ಕು.ಅಕ್ಷತಾಜೈನ್, ಚಾಮರಾಜನಗರ– ಭರತ ನಾಟ್ಯ, ಮಹೇಶ್ ಕುಮಾರ್, ಹೆಗ್ಗವಾಡಿಪುರ–ನಾಟಿ ಔಷಧಿ, ತೊಳಸಮ್ಮ, ರಾಮಸಮುದ್ರ–ಜಾನಪದ ಮತ್ತು ಕಲಾ ಸೇವೆ.

ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪಟೇಲರ ಜನ್ಮದಿನಾಚರಣೆ


ವಲ್ಲಭಬಾಯಿ ಪಟೇಲ್ ಜನ್ಮದಿನಾಚರಣೆ ಹಾಗೂ ಮಾಜಿ ಪ್ರಧಾನಿ ಇಂದಿರಾ ಗಾಂಧೀಜಿ ಪುಣ್ಯಸ್ಮರಣೆಯಲ್ಲಿ ವಿ.ಆರ್. ಸುದರ್ಶನ್ ಪುಷ್ಪಾರ್ಚನೆ ನೆರವೇರಿಸಿದರು.

ಚಾಮರಾಜನಗರ, ಅ.31– ಅಖಂಡ ಭಾರತ ನಿರ್ಮಿಸಲು ಶ್ರಮಿಸಿದ ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ಸರ್ದಾರ್ ವಲ್ಲಭ ಬಾಯ್ ಪಟೇಲ್ ಹಾಗೂ ಮಾಜಿ ಪ್ರಧಾನಿ ದಿ.ಇಂದಿರಾಗಾಂಧಿ ಅವರು ದೇಶಕ್ಕೆ ನೀಡಿದ ಜನಪರ ಕಾರ್ಯಕ್ರಮಗಳನ್ನು ಸ್ಮರಣೆ ಮಾಡುವ ಅಗತ್ಯವಿದೆ ಎಂದು ಮಾಜಿ ಉಪಸಭಾಪತಿ ವಿ.ಆರ್ ಸುದರ್ಶನ್ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಏರ್ಪಡಿಸಿದ ಸರ್ದಾರ್ ವಲ್ಲಭಬಾಯಿ ಪಟೇಲ್ ಜನ್ಮದಿನಾಚರಣೆ ಹಾಗೂ ಮಾಜಿಪ್ರಧಾನಿ ಇಂದಿರಾಗಾಂಧಿ ಪುಣ್ಯಸ್ಮರಣೆ ಮಹಾನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಭಾರತ ದೇಶದ ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಅವರು ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಕಟ್ಟುವ ಕೆಲಸಮಾಡಿದರು. ಅವರ 20ಅಂಶದ ಕಾರ್ಯಕ್ರಮಗಳು ಇಂದಿಗೂ ಜನಪ್ರಿಯವಾಗಿವೆ ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಮಾತನಾಡಿದರು. ಚುಡಾ ಅಧ್ಯಕ್ಷ ಮಹಮದ್ ಅಸ್ಗರ್‌ಮುನ್ನಾ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಎಸ್‌ಗುರುಸ್ವಾಮಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್,ಮಹದೇವ್, ನಗರ ಸಭಾ ಸದಸ್ಯ ಸ್ವಾಮಿ, ಎ.ಪಿ.ಎಂ.ಸಿ ಅಧ್ಯಕ್ಷ ಗುರುಸ್ವಾಮಿ, ಸದಸ್ಯ ಬಸುಮರಿ, ಜಿ.ಪಂ ಮಾಜಿ ಸದಸ್ಯ ಕೆರಹಳ್ಳಿ ನವೀನ್, ಗ್ರಾ.ಪಂ ಅಧ್ಯಕ್ಷ ಶೇಖರಪ್ಪ, ರೋಪೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಮುಖಂಡರಾದ ನಸ್ರುಲ್‌ಖಾನ್, ಮೋಹನ್ ನಗು, ಕೆ.ಕೆ.ಹುಂಡಿ ನಾಗರಾಜು, ಮುಕುಂದ ವರ್ಮ, ತೋಟೇಶ್, ರವಿಗೌಡ, ಮಹಾಂತಾಲ ಪುರ ಮಹದೇವಸ್ವಾಮಿ, ರಾಜೇಶ್ ಗೌಡಳ್ಳಿ, ಸೇವಾದಳದ ಅಧ್ಯಕ್ಷ ಜಯರಾಜು, ಮಧು, ಪುಟ್ಟಸ್ವಾಮಿ ಮುತ್ತಿಗೆ, ರವಿ, ಪ್ರಕಾಶ್, ರಾಮಕೃಷ್ಣ, ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA Site for Sale
ಲಲಿತಾದ್ರಿಪುರ ಪಕ್ಕದ BVL PREMIO ಬಡಾವಣೆಯಲ್ಲಿ 40x60 ಸೈಟ್.
Mob: 9886048471

ಬೇಕಾಗಿದ್ದಾರೆ
ಕಾರ್ ಡ್ರೈವರ್ ಬೇಕಾಗಿದ್ದಾರೆ. 12,000 ಸಂಬಳದ ಜೊತೆಗೆ ಊಟ ಮತ್ತು ತಿಂಡಿ ಕೊಡಲಾಗುತ್ತದೆ.
Mob : 9448293548

LUXURY HOUSE FOR SALE
DTS Rao Layout, Sathagally. Brand new luxury three floors 37 squares. Ground 2 BHK, First and Second 3BHK Duplex. Own borewell 2 car parking with all modern facility. Contact
9986494502 / 9986742260

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

MUDA Site for SALE
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಪಕ್ಕ ನ್ಯಾಯಾಂಗ ಬಡಾವಣೆಯಲ್ಲಿ ಸೈಟ್‌ಗಳು ಲಭ್ಯ
Mob: 9886048471

ಶ್ರೀ ಗೌರಿಶಂಕರ ಟ್ರಾವೆಲ್ಸ್
12–12–2025 (7 ದಿನ): ದೆಹಲಿ, ಆಗ್ರಾ, ಮಥುರಾ, ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಗಯಾ.
17–1–2026 (4 ದಿನ): ಭೀಮಾಶಂಕರ, ಶಿರಡಿ, ನಾಸಿಕ್, ಎಲ್ಲೋರ, ಘೃಷ್ಣೇಶ್ವರ, ತ್ರಯಂಬಕೇಶ್ವರ.
(ವಿಮಾನ, AC ಬಸ್, ಊಟ, ರೂಂ)
Mob: 9448499538

ಜಮೀನು ಮಾರಾಟಕ್ಕಿದೆ
ಟಿ. ನರಸೀಪುರ–ನಂಜನಗೂಡು ರಸ್ತೆಯಲ್ಲಿ 1 ½ km ನರಸೀಪುರದಿಂದ
1) 28 ಗುಂಟೆ ಹೊಲ (6 ಲಕ್ಷ ಗುಂಟೆಗೆ)
2) 40x80 ಸೈಟು (60 ಲಕ್ಷ) (N/F)
3) 33½ x 33½ ಸೈಟು 20 ಲಕ್ಷ (S/F), Contact
9740231679, 9632389061
8088857608, 9108291938

ಬೇಕಾಗಿದ್ದಾರೆ
ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸ : ಹೂಟಗಳ್ಳಿ, ಸಂಬಳ : 23,000/–
7676563406

ವೃದ್ಧಾಶ್ರಮ
ಹಿರಿಯ ನಾಗರಿಕರು, ಹಾಸಿಗೆ ಹಿಡಿದವರು, ಅಂಗವಿಕಲರು ಮತ್ತು ಪಾರ್ಶ್ವವಾಯು ಪೀಡಿತ ರೋಗಿಗಳಿಗೆ. ವೈದ್ಯಕೀಯ ಸೌಲಭ್ಯಗಳೊಂದಿಗೆ ಸಹಾನುಭೂತಿಯ ಆರೈಕೆ, ಪೌಷ್ಟಿಕ ಆಹಾರ ಮತ್ತು ಮನೆಯ ವಾತಾವರಣವನ್ನು ನೀಡುತ್ತೇವೆ.
CALL : 9110455297/9591557126

SITES FOR SALES
"ನ್ಯಾಯಾಂಗ ಬಡಾವಣೆ" ಕೇರ್ಗಳ್ಳಿ ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹಿಂಭಾಗ North facing 30'x 40'
ವಾಜಮಂಗಳ "ಆರಾಧ್ಯ ಗಾರ್ಡೆನಿಯಾ" West facing 40'x 60'
77950 55551
Direct Owner / Slightly Negotiable

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570 001
ದೂರವಾಣಿ: 9902639593

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– ₹ 10,800(24CT)
9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7975101020

ಮನೆ ಬಾಡಿಗೆಗೆ ಇದೆ
2 BHK ಎಲ್ಲಾ ಸೌಲಭ್ಯದೊಂದಿಗೆ ಯಶೋಧರನಗರ, ಅಮೃತನಂದ ಮಯಿ ಶಾಲೆ ಮತ್ತು ಟೆಲಿಕಾಮ್ ಲೇಔಟ್ ಹತ್ತಿರ, (ಗದ್ದಿಗೆ ಮುಖ್ಯರಸ್ತೆ) ಬೋಗಾದಿ (ಉತ್ತರ ಮೈಸೂರು) ಸಸ್ಯಹಾರಿಗಳಿಗೆ ಮಾತ್ರ
8867565003

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

HOUSE FOR RENT
Duplex house with 3 BHK and inside car parking facility available for rent in Teachers Layout near Siddartha Layout
Contact No:
9845753036

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್/ಫೇಲ್ ಆದಂತಹವರಿಗೆ. ಸಂಬಳ: 20,000 ರಿಂದ 45,000.
8095133188

RAI ESTATES
RERA APPROVED — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಸುವರ್ಣ ಯಾತ್ರಾ
7 ದಿನಗಳ ಅಂಡಮಾನ್ ಪ್ರವಾಸ 12–11–25
10 ದಿನಗಳ ಕಾಶಿ, ಅಯೋಧ್ಯಾ, ನೇಪಾಳ ಮುಕ್ತಿನಾಥ ಪ್ರವಾಸ 18–11–25
9 ದಿನಗಳ ರಾಜಸ್ಥಾನ ಪ್ರವಾಸ 18–11–25
7 ದಿನಗಳ 2 ಜ್ಯೋತಿರ್ಲಿಂಗ ಪ್ರವಾಸ ಕಾಶಿ ಬಾಬಾ ಬೈದ್ಯನಾಥ, ಅಯೋಧ್ಯ 28/11/25
ಸುವರ್ಣ ಯಾತ್ರಾ
9019462508 / 9008381022

SITE FOR SALE (MUDA) APPROVED
30X40 Just 1 Km to Sri Rampura Ring Road Circle, Mysuru
8050345574

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಸರ್ ಪ್ರತಿಷ್ಠಿತ ಕಾಲೇಜು, ಕಾರ್‌ಷೋರೂಂ, ಛತ್ರಕ್ಕೆ, ಮೈಸೂರು ಸಿಟಿ ಸುತ್ತಮುತ್ತ, ಊಟ ವಸತಿ ಸೌಲಭ್ಯವಿದೆ. ಆಕರ್ಷಕ ಸಂಬಳವಿರುತ್ತದೆ.
9964263516, 8123563128

ಜಮೀನು ಬೇಕಾಗಿದೆ
3 ರಿಂದ 4 ಎಕರೆ ಬೇಕಾಗಿದೆ, ಮೈಸೂರು ನಿಂದ 15 km ಒಳಗಡೆ ಮಧ್ಯವರ್ತಿಗೆ ಅವಕಾಶ ಇಲ್ಲ.
9141944033
8550085550

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಮತ್ತು ಕುವೆಂಪುನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : ಸೂಪರ್‌ವೈಸರ್ 23000 + W/o ಗಾರ್ಡ್ 22000 + W/o ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819, 9620777819

LAND FOR SALE ಜಮೀನು ಮಾರಾಟಕ್ಕಿದೆ
15 ಗುಂಟೆ ಕನ್ವರ್ಷನ್ ಆಗಿರುವ ಜಮೀನು ಜೆ.ಪಿ.ನಗರ ರಿಂಗ್ ರೋಡ್ ಹತ್ತಿರ ಹಾಗೂ A ಝೋನ್ ಪಕ್ಕದಲ್ಲಿದೆ. ಆಸಕ್ತರು ಸಂಪರ್ಕಿಸಿ
7411501819

ಜಮೀನು ಮಾರಾಟಕ್ಕಿದೆ
ಮೈಸೂರಿನ ಆಂದೋಲನ ಸರ್ಕಲ್‌ನಿಂದ ಸ್ವಲ್ಪ ದೂರದ ಬಲ್ಲಹಳ್ಳಿ ಗ್ರಾಮದಲ್ಲಿ 8.5 ಎಕರೆ ಮಾರಾಟಕ್ಕಿದೆ. 3 ಬೋರ್, 70 ತೆಂಗು, 15 ಮಾವು, ಮನೆ, ಕೊಟ್ಟಿಗೆ, ತಂತಿ ಬೇಲಿ ಹಾಕಿರುವ ಕೆಂಪು ಮಣ್ಣಿನ ಉತ್ತಮ ದಾರಿ ಸಂಪರ್ಕ ಹೊಂದಿರುವ ಜಮೀನು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 9036284426

EAST FACE MUDA APPROVED
40x60 SITE FOR SALE NITYANANDASAGARA HUILALU, MYSORE
Mob: 8217851695

ನಿವೇಶನ ಮಾರಾಟಕ್ಕಿದೆ
50x38 S/F ಪಾರ್ಕ್ ಹತ್ತಿರ, TSK ಸೆರೆನಿಟಿ, ಬೆಳವಾಡಿ.
8971192531, 9242901974

House for Rent
* 40x60 at Saraswathipuram & Kuvempunagar.
* 30x40 at Ramakrishna Nagar.
Call: 7353430309

ಹೊಸ ಮನೆ ಮಾರಾಟಕ್ಕೆ
20x30 ಹೊಸ ಮನೆ 2 BHK ಮಾರಾಟಕ್ಕೆ ಇದೆ. ಶಾಂತವೇರಿ ಗೋಪಾಲಗೌಡನಗರ, ಮೈಸೂರು, ಸಂಪರ್ಕಿಸಿ
9844212414

Ready for Construction
East face 30x40 MUDA Approved site for sale in Paramanandasagara Phase-1, Huilalu, Elwala, Mysore.
Mob: 8217851695

ಪೂರಿ ಜಗನ್ನಾಥ್ ಟೂರ್ 3D/2N
ಪೂರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್ ರಾಜ್‌ಹನ್ಸ್ ಐಲ್ಯಾಂಡ್, ಗೋಲ್ಡನ್ ಬೀಚ್, ಚಿಲಿಕಾ ಲೇಖ್, ಮುಕ್ತೇಶ್ವರ್
29-12-2025 ರಿಂದ 28,500/-

ಅಯೋಧ್ಯೆ, ಕಾಶಿ 6D/5N
ಗಯಾ, ಬೋದ್‌ಗಯಾ, ಪ್ರಯಾಗ್‌ರಾಜ್, ಸಾರಾನಾಥ್
13-11-2025 ರಿಂದ 38,000/-
Call : 7259226593

SITE FOR SALE
30x40 NORTH Site for sale in SUNCITY HOME IN ELWALA, MYSORE READY TO BUILT WITH BORE.
Mob: 8217851695

News Paper Bag Cover
$10^1/_2$ / 12 and $6^1/_2$/9 (Plastic bag ban) ದಿನಸಿ ಅಂಗಡಿಗೆ & ಹೋಟೆಲ್ ಫುಡ್ ಪಾರ್ಸಲ್‌ಗೆ Carry Bag ಎಲ್ಲಾ ಪದಾರ್ಥಗಳನ್ನು ಪಾರ್ಸಲ್‌ಗೆ ಸೂಕ್ತವಾಗಿದೆ. Per Kg. 80/-
Order: 9972098064

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ. (II Marriages also)
Mob: 9343175000

ಸೈಟು ಮಾರಾಟಕ್ಕಿದೆ
* 30x32 N/F, 46 ಲಕ್ಷ, ವಿಜಯನಗರ 4ನೇ ಹಂತ ಪಕ್ಕ,
* 30x40 W/F, 85 ಲಕ್ಷ, ರಾಜರಾಜೇಶ್ವರಿ ನಗರ, ದಟ್ಟಗಳ್ಳಿ,
* 30x40 E/F, 35 ಲಕ್ಷ, ಸುವರ್ಣನಗರ, ಮೈಸೂರು
Mob: 9845765573

OFFICE SPACE OR GODOWN FOR RENT
1) 1800 sq.ft.
2) 800 sq.ft.
Near Nanjumalige Circle.
Mob: 7892987932

Urgent Site for Sale
ANANDA SAGARA MUDA Approved 30x40 East Facing. Price: Rs. 48 Lakhs. Site No. 368. Contact:
JK, 8951144240

SITE FOR SALE
40x60 S/F SBM & others Bank Layout, close to Srirampura Ring Road.
Mob: 8217786985

ತಕ್ಷಣ ಬೇಕಾಗಿದ್ದಾರೆ
GWF ಸಂಸ್ಥೆಯಲ್ಲಿ ಆಫೀಸಿನಲ್ಲಿ ಕೆಲಸ ಮಾಡಲು 15 ಜನ ಯುವತಿಯರು ಬೇಕಾಗಿದ್ದಾರೆ. PUC, Degree, ITI. ವಯೋಮಿತಿ: 20 – 30 ವರ್ಷ. ಸಂಬಳ: 10,000 – 12,000.
6364897012, 6362925318

House for Sale
30x40 N/F, #138, 3 BHK, ದ್ವಾರಕನಗರ, ಶ್ರೀರಾಂಪುರ ರಿಂಗ್ ರೋಡ್ ಹತ್ತಿರ.
Mob: 8217786985

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಸಂಸ್ಥೆಯಲ್ಲಿ ಹೋಮ್ ನರ್ಸಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ, ಉಚಿತ ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ ಸರ್ಕಾರಿ ನೊಂದಯಿತಾ ಸಂಸ್ಥೆ
9739292222, 9035685593

ನಿವೇಶನ ಮಾರಾಟಕ್ಕಿದೆ
ಮೈಸೂರಿನ ಗೆಜ್ಜಗಳ್ಳಿಯಲ್ಲಿರುವ 1300 ಚ. ಅಡಿಯುಳ್ಳ ನಿವೇಶನ 1 ಚ.ಅಡಿಗೆ 2,500/– ರೂ.ಗಳಂತೆ ತಕ್ಷಣಕ್ಕೆ ಮಾರಾಟಕ್ಕಿದೆ. *'ಬಿ' ಖಾತಾ ಹೊಂದಿರುವ ಈ ಸೈಟು ಜೆ.ಪಿ. ನಗರ ರಿಂಗ್ ರೋಡಿನಿಂದ 1 ಕಿ.ಮೀ. ಅಂತರದಲ್ಲಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
Mob: 9880774703

ಸೈಟು ಮಾರಾಟಕ್ಕಿದೆ
East face 20x40, 20x45 11B Khatha, 5300/- per sq.ft. Clear Documents. R.R. ನಗರ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ, ದಟ್ಟಗಳ್ಳಿ, ಮೈಸೂರು
Mob: 9036283882

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿರುವ & ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್‌ಗಳಿಗೆ 7th, 10th, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹ, ಯುವಕ, ಯುವತಿಯರಿಗೆ ವಸತಿ, ಊಟದೊಂದಿಗೆ ಸಂಬಳ + ಓಟಿ ಸೇರಿ. 19,000 ರಿಂದ 25,000. H.R. ಸ್ನೇಹ
9916744622, 9916788422

Available for Rent
2 BHK flats are available for rent. Preethi Enclave Apartment, No. 411, 3rd Stage, Contour Road, Gokulam, Mysore.
Mob: 9448286820

MUDA Site for Sale
30x50 S/F PRAGATHI DREAMS Fully Developed K.R.S. Road, Basthipura. Price: 53 Lakhs Surrounding by houses
Mob: 9845826797

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ: Full Time (ಉಚಿತ ಊಟ, ವಸತಿಯೊಂದಿಗೆ) Day: 8 am to 6 pm. Night : 7 pm to 7 am. ಸೌಲಭ್ಯಗಳು: ESI, PF, and Attendance Bonus.
ಸಂಪರ್ಕಿಸಿ: 9741637711, 08214242351, 9606714441

SITE FOR SALE
30x40 East face Tranquil Layout (Attach R.T. Nagar)
Call: 9880273834

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು, ಊಟ ಮತ್ತು ವಸತಿ ಇರುತ್ತದೆ
9900944982, 9535744143

ನಮ್ಮಲ್ಲಿ ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್, ಸೋಲಾರ್ ಸರ್ವೀಸ್ ಮಾಡಿಕೊಡಲಾಗುತ್ತದೆ
Mob: 8197383645

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್
ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

WANTED
Housekeeping boys for Mysore / Sagar - Shimoga.
Contact:
Mob: 9482174640

ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಅಂತರದಲ್ಲಿ 1–2 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:
Mob: 6364795551

ಮನೆ ಬಾಡಿಗೆಗೆ ಇದೆ
1st Floor, North face, East face door, #11984, Vijayanagar 4th Stage, 2nd Phase, Mysore. 2 bedrooms house 2 bathrooms, kitchen, hall, solar facility. Contact:
Mob: 9886377165

FOR RENT
2 BHK, fully furnished, No. 1555, Vijayanagar 2nd Stage, H.T. Double Road, Mysore-570 017.
Mob: 9663604699

ಮುಡಾ ನಿವೇಶನ ಮಾರಾಟಕ್ಕಿದೆ
ಅಳತೆ 30x46 ದಕ್ಷಿಣ ದಿಕ್ಕು 60 ಅಡಿರಸ್ತೆ, ತ್ರಿಪುರಾಂಬ ರೈಲ್ವೆ ಬಡಾವಣೆ, ನಗರ್ತಹಳ್ಳಿ, ಮೈಸೂರು. (ಮೈಸೂರು ಬಸ್‌ಸ್ಟ್ಯಾಂಡ್‌ನಿಂದ 12km)
9880746963

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಸರ್ ESI- PF ಸೌಲಭ್ಯವಿದೆ. ಮೇಟಗಳ್ಳಿ ಮತ್ತು ಬೋಗಾದಿ, ಕೂರ್ಗಳ್ಳಿ ಏರಿಯಾದಲ್ಲಿ, ಸಂಪರ್ಕಿಸಿ
9035367083, 6361548626

30x50 ಡ್ಯೂಪ್ಲೆಕ್ಸ್ ಮನೆ
30x50 ಡ್ಯೂಪ್ಲೆಕ್ಸ್ ಮನೆ 3 ಬೆಡ್‌ರೂಂ, 10 ವರ್ಷದ ಹಳೇ ಮನೆ, 60 ಅಡಿ ರಸ್ತೆ, ಆದಿತ್ಯ ಸರ್ಕಲ್ ಹತ್ತಿರ ಹಾಗೂ 30x50 ಸೈಟು. ಸಂಪರ್ಕಿಸಿ: ಶ್ರೀ ಬನಶಂಕರಿ ಎಂಟರ್‌ಪ್ರೈಸಸ್ ಮಹಾಮನೆ ಸರ್ಕಲ್
Mob: 9945042875

SITE FOR SALE
40x40 South East Corner Site Rs. 44 Lakh. MUDA & RERA Approved Bank Loan Available Next to LBS Nagara Before JSS Layout 4th Stage Behind Chamundi Hill
Call 9964923399

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರು ಶೋರೂಂ ಹಾಗೂ ಬೈಕ್ ಶೋರೂಂಗಳಿಗೆ, Cashier, Receptionist, HR, Admin, Account, ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. (18K-38K), SSLC, PUC, Degree.
Mob: 63667 18368

ಬೇಕಾಗಿದ್ದಾರೆ
ಹೋಂ ನರ್ಸಿಂಗ್, ಅಡುಗೆ ಕೆಲಸ ಹಾಗೂ ಮನೆ ಕೆಲಸ ಮಾಡಲು ಮಹಿಳೆಯರು, ಪುರುಷರು ಬೇಕಾಗಿದ್ದಾರೆ. 24 ಗಂಟೆ ಹಾಗೂ 8 ಗಂಟೆಗಳಿಗೆ ...ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
Mob: 8152983530

FOR RENT / LEASE
4 BHK, 3 washroom, 40x60 Duplex house for rent / lease Subhashnagar, Opp. Alpha Hospital, Bangalore-Mysore Road, Mysore. Contact:
7676805050, 7795747575
Brokers Excuse please

ಮಾರಾಟಕ್ಕಿದೆ
ತಿಂಗಳಿಗೆ 10 ಲಕ್ಷ ಆದಾಯವಿರುವ ಬ್ಯುಸಿನೆಸ್ ಮಾರಾಟಕ್ಕಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
7204803535, 7019959784

ಮನೆ ಮಾರಾಟಕ್ಕಿದೆ
30x50 ಕಾರ್ನರ್ ಸೈಟ್‌ನಲ್ಲಿ ಪೂರ್ಣ ಗ್ರಾನೈಟ್ ಉಪಯೋಗಿಸಿ ಕಟ್ಟಿದ 3 BHK ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಶ್ರೀರಾಂಪುರ–ಪರಸಯ್ಯನಹುಂಡಿ ಪೊಲೀಸ್ ಚೆಕ್‌ಪೋಸ್ಟ್ ಎದುರು ರಸ್ತೆ– ರಿಂಗ್ ರಸ್ತೆಯಿಂದ ಕೇವಲ 200 ಮೀಟರ್– ನಾಗಮ್ಮ ವಸತಿ ಬಡಾವಣೆ– MUDA Approved Semi - furnished - Water Softner- Solar Own borewell, Rain water harvesting etc. etc.
Owner-9448072218

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

House for Rent
2BHK with Dining Hall Vitrified Flooring Solar & Electric Geyser @ Vijayanagar 3rd Stage
9916314393

SUNZONE SOLAR SYSTEM


Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮನೆ ಮಾರಾಟಕ್ಕಿದೆ
30x40 ಮನೆ ಮಾರಾಟಕ್ಕಿದೆ 3 BHK ಡೂಪ್ಲೆಕ್ಸ್ ಹೋಂ ಥಿಯೇಟರ್ ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ, ದಟ್ಟಗಳ್ಳಿ
9738884777, 9900251194

DOCUMENT LOST
K.M. Prakash, residing at Mysore have Lost Possession certificate, No.SR1339/71-72 Dated 10/11/1971 of the chairman, city improvement trust board, Mysore, Finders please contact
9900558972

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ವಾಟ್ಸಾಪ್ ಟೈಪಿಂಗ್, ಜ್ಯುವಲರಿ ಪ್ಯಾಕಿಂಗ್ ಹಾಗೂ ಇನ್ನಿತರ ಕರಕುಶಲ ವಸ್ತುಗಳ ಪ್ಯಾಕಿಂಗ್ ಕೆಲಸಗಳು ಲಭ್ಯ ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಗಳಿಸಿ ತಿಂಗಳಿಗೆ 25000 ದಿಂದ 30,000 ದವರೆಗೆ ವಯಸ್ಸಿನ ಮಿತಿ ಇಲ್ಲಾ.
7411972678, 7829483767

SITE FOR SALE
30x50 S/F KBL WOODROSE, SHANTHAVERI GOPALGOWDA NAGARA (DIRECT OWNER)
9972958878

ಮಾರಾಟಕ್ಕಿದೆ
ಕಡಿಮೆ ಬೆಲೆಯಲ್ಲಿ ಭೂಮಿ ತುರ್ತಾಗಿ ಮಾರಾಟಕ್ಕಿದೆ. ನಿವೇಶನಗಳ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ 0–34 ಗುಂಟೆ ಮತ್ತು 0–14 ಗುಂಟೆ ಭೂಮಿಯನ್ನು ಭುಗತಗಳ್ಳಿ ಗ್ರಾಮದ ವಸಂತ ನಗರದಲ್ಲಿ ಮಾರಾಟಕ್ಕಿದೆ. ಮತ್ತು ದೇವಗಳ್ಳಿ 0–24 ಗುಂಟೆ ಮತ್ತು 0–11, ಗುಂಟೆ ಭೂಮಿಯನ್ನು ಉಯಿಲಾಳು ಗ್ರಾಮದಲ್ಲಿ ತುರ್ತಾಗಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಆಸಕ್ತಿವುಳ್ಳವರು ಕೂಡಲೇ ಸಂಪರ್ಕಿಸಿ ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
ಸಂಪರ್ಕಿಸಿ 9538735662, 9739097007, 9741144199

ತುರ್ತಾಗಿ ಬೇಕಾಗಿದ್ದಾರೆ
ಅನುಭವವುಳ್ಳ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಮಹಿಳೆಯರು ಕಚೇರಿಯ ಕೆಲಸಕ್ಕೆ ಬೇಕಾಗಿರುತ್ತಾರೆ. ಸಮಯ: 1ನೇ ಶಿಫ್ಟ್ 09:30 ರಿಂದ 03:00 ರವರೆಗೆ 7000/– ರಿಂದ 8000/– ಭತ್ಯೆ ಮತ್ತು 2ನೇ ಶಿಫ್ಟ್ ಮಧ್ಯಾಹ್ನ 3:00 ರಿಂದ 09:00 ರವರೆಗೆ 7000/– ರಿಂದ 8000/– ರವರೆಗೆ ಅನುಭವವುಳ್ಳವರು ಮಾತ್ರ ಸಂಪರ್ಕಿಸಿ
9169999009 / 9008810004

ಬೇಕಾಗಿದ್ದಾರೆ
ನೋಟರಿ ವಕೀಲರು ತುರ್ತಾಗಿ ಬೇಕಾಗಿರುತ್ತಾರೆ ಅನುಭವವುಳ್ಳ ನೋಟರಿ ಮಹಿಳೆಯರು ವಕೀಲರು ದಾಖಲೆ ಪತ್ರ ವ್ಯವಹಾರದ ನೋಟರಿಸ್ ಮಾಡಲು ಕಛೇರಿಯಲ್ಲಿ ಸೇವೆ ಸಲ್ಲಿಸಲು ತುರ್ತಾಗಿ ಬೇಕಾಗಿರುತ್ತಾರೆ. ಗೌರವಧನದ ರೂಪದಲ್ಲಿ ಮಾಸಿಕ 25,000/– ರಿಂದ 30,000/– ರೂ.ಗಳು ನೀಡಲಾಗುವುದು ಸಮಯ ಬೆಳಗ್ಗೆ 10:00 ರಿಂದ 02:00 ವರೆಗೆ ಮತ್ತು 04:00 ರಿಂದ 09:00 ರವರೆಗೆ ಸಂಪರ್ಕಿಸಿ
9169999009 / 9008810004

ಮೈಸೂರು ಮಿತ್ರ — ಓದುಗರ ಗಮನಕ್ಕೆ
46
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಬೇಡಿಕೆ ಈಡೇರಿಸುವ ಭರವಸೆ ನೀಡಿದ ಅಧಿಕಾರಿಗಳು

ಪ್ರತಿಭಟನೆ ಕೈಬಿಟ್ಟ ಸುಜ್ಜಲೂರು, ಬೇವಿನಹಳ್ಳಿ ಗ್ರಾಮಸ್ಥರು

ತಿ.ನರಸೀಪುರ, ಅ.31– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಕಳೆದ ಎರಡು ದಿನಗಳಿಂದ ತಾಪಂ ಕಚೇರಿ ಆವರಣದಲ್ಲಿ ಸುಜ್ಜಲೂರು ಮತ್ತು ಬೇವಿನಹಳ್ಳಿ ಗ್ರಾಮಸ್ಥರು ದಸಂಸ ನೇತೃತ್ವದಲ್ಲಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಹಿಂಪಡೆದಿದ್ದಾರೆ.

ತಾಲೂಕಿನ ಸುಜ್ಜಲೂರು ಗ್ರಾಮದಲ್ಲಿ ಚರಂಡಿಯನ್ನು ಸ್ವಚ್ಛಗೊಳಿಸುವುದಾಗಿ ಹಾಗೂ ಬೇವಿನಹಳ್ಳಿ ಗ್ರಾಮದಲ್ಲಿ ಹಕ್ಕುಪತ್ರ ಹೊಂದಿರುವ ನಿವೇಶನ ಫಲಾನುಭವಿಗಳಿಗೆ ಇ ಖಾತ ಮಾಡಿಕೊಡುವುದಾಗಿ ಅಧಿಕಾರಿಗಳು ನೀಡಿದ ಭರವಸೆ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಟ್ಟಿದ್ದಾರೆ.

ತಾಲೂಕು ಆಡಳಿತ ಸೌಧದ ರಸ್ತೆಯಲ್ಲಿ ನಿನ್ನೆಯಿಂದ ಪ್ರತಿಭಟನಾ ಧರಣಿ ಕುಳಿತಿದ್ದ ಗ್ರಾಮಸ್ಥರು ಹಾಗೂ ದಸಂಸ ಪದಾಧಿಕಾರಿಗಳು ಇಂದು ತಾಲೂಕು ಕಚೇರಿ ಮುಂಭಾಗದ ಮೆಟ್ಟಿಲುಗಳಲ್ಲಿ ಪ್ರತಿಭಟನೆಯನ್ನು ಮುಂದುವರೆಸಿ ತಹಸೀಲ್ದಾರ್ ಮತ್ತು ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದ್ದರು.



ಗ್ರಾಮಸ್ಥರು, ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಎರಡನೇ ದಿನವೂ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ರೂವಾರಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಸುಜ್ಜಲೂರು ಗ್ರಾಮದಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿರುವ ಚರಂಡಿಯಲ್ಲಿ ತ್ಯಾಜ್ಯ ನೀರು ಹರಿದು ಹೋಗದೆ ನಿವಾಸಿಗಳ ಬದುಕನ್ನು ನರಕಕ್ಕೆ ತಳ್ಳಿದೆ. ಮತ ಕೊಟ್ಟ ಜನರು ಹಲವು ವರ್ಷಗಳಿಂದ ಚರಂಡಿ ನೀರಿನ ಮಧ್ಯೆ ಅಸಹನೀಯ ಜೀವನ ಸಾಗಿಸುತ್ತಿದ್ದರೂ ಜನಪ್ರತಿನಿಧಿಗಳು ಎನಿಸಿಕೊಂಡಿರುವ ಶಾಸಕ ಹಾಗೂ ಸಂಸದರ ಮನೆಗಳಿಗೆ ಅಲೆದರು ಸಮಸ್ಯೆಯನ್ನೇ ಪರಿಹರಿಸಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿಯೇ ಬೇವಿನಹಳ್ಳಿ ಗ್ರಾಮದಲ್ಲಿ ಅರ್ಹ ನಿವೇಶನ ರಹಿತರನ್ನು ಆಯ್ಕೆಮಾಡಿ ನಿವೇಶನಗಳನ್ನು ಹಂಚಿ 2014 ರಲ್ಲಿಯೇ ಹಕ್ಕುಪತ್ರಗಳನ್ನು ನೀಡಿದ್ದರೂ ಅಷ್ಟು ಫಲಾನುಭವಿಗಳಿಗೆ ಇ– ಖಾತ ಮಾಡಿಕೊಡದೆ ಅನ್ಯಾಯ ಮಾಡುತ್ತಿದೆ ಎಂದರು.

ಸ್ಥಳಕ್ಕೆ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಹಾಗೂ ತಾಪಂ ಯೋಜನಾಧಿಕಾರಿ ರಂಗಸ್ವಾಮಿ ಆಗಮಿಸಿ ಸುಜ್ಜಲೂರು ಚರಂಡಿ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಸಂಬಂಧ ನ್ಯಾಯಾಲಯ ಪ್ರಕರಣ ಗುರುವಾರ ಇತ್ಯರ್ಥವಾದ ಹಿನ್ನೆಲೆಯಲ್ಲಿ ಶುಕ್ರವಾರದಿಂದಲೇ ಚರಂಡಿ ನಿರ್ಮಾಣ ಕಾಮಗಾರಿಯನ್ನು ಆರಂಭಿಸುತ್ತೇವೆ. ಬೇವಿನಹಳ್ಳಿ ನಿವೇಶನ ಹಂಚಿಕೆ ಸಂಬಂಧ ದಾಖಲೆಗಳು ಪತ್ತೆಯಾಗಿದ್ದು, ಮುಂದಿನ ಕೆಲವು ದಿನಗಳಲ್ಲಿ ಇ ಖಾತಾ ಆಗದಿರುವ ಸಮಸ್ಯೆಯನ್ನು ಪರಿಹರಿಸುತ್ತೇವೆ ಎಂಬ ಭರವಸೆ ನೀಡಿದ್ದರಿಂದ ಎರಡು ದಿನಗಳ ಕಾಲ ನಡೆದ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಪ್ರತಿಭಟನೆಯನ್ನು ಬೆಂಬಲಿಸಿ ದಸಂಸ ಹಿರಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಸಂ.ಸಂಚಾಲಕ ಶಂಭುಲಿಂಗಸ್ವಾಮಿ, ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಮುಖಂಡರಾದ ಬನ್ನಹಳ್ಳಿ ಹುಂಡಿ ಉಮೇಶ್, ಬಿಲಿಗೆರೆಹುಂಡಿ ಸಿದ್ದರಾಜು, ಶಾಂತಕುಮಾರ, ರವಿ, ಸುಜ್ಜಲೂರು ಬಸವರಾಜು, ಬಸವಯ್ಯ, ಮಹೇಶ್, ಕುಮಾರ್, ಸಿದ್ದೇಶ, ಶಿವಯ್ಯ, ಮಹದೇವ, ಬೇವಿನಹಳ್ಳಿ ಲತಾ, ಪದ್ಮ ಮಹದೇವಮ್ಮ, ನಂಜಯ್ಯ, ಮರಿನಂಜ, ದೊರೆಸ್ವಾಮಿ ಹಾಗೂ ಇತರರು ಇದ್ದರು.

ಸಾಲದ ಬಾಧೆ ತಾಳಲಾರದೆ ರೈತ ಆತ್ಮಹತ್ಯೆ

ಕೆ.ಆರ್.ನಗರ, ಅ.31– ಸಾಲಬಾಧೆಯಿಂದ ಮನನೊಂದ ರೈತರೊಬ್ಬರು ಕ್ರಿಮಿನಾಶಕ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೆಬ್ಬಾಳು ಹೋಬಳಿ ಮಳಲಿ ಗ್ರಾಮದಲ್ಲಿ ನಡೆದಿದೆ.



ಮಳಲಿ ಗ್ರಾಮದ ಪುಟ್ಟ ಮಾದೇಗೌಡ(46) ಆತ್ಮಹತ್ಯೆಗೆ ಶರಣಾದ ದುರ್ದೈವಿ. ರೈತ ಪುಟ್ಟಮಾದೇಗೌಡರು ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಮಳಲಿ ಗ್ರಾಮದಲ್ಲಿ ಒಂದೂವರೆ ಎಕರೆ ಕೃಷಿ ಜಮೀನು ಹೊಂದಿದ್ದು, ಶುಂಠಿ ಹಾಗೂ ಹೊಗೆಸೊಪ್ಪು ಬೆಳೆದಿದ್ದರು. ಜಮೀನು ಅಭಿವೃದ್ಧಿಗಾಗಿ ಮಾವತ್ತೂರಿನ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 3.60 ಲಕ್ಷ ಸಾಲ ಹಾಗೂ ಶುಂಠಿ ಮತ್ತು ಹೊಗೆಸೊಪ್ಪು ಬೆಳೆಯಲು ಕೈಸಾಲ 4 ಲಕ್ಷ ಮತ್ತು ಚಿನ್ನ ಅಡವಿಟ್ಟು 4.60 ಲಕ್ಷ ಸಾಲ ಮಾಡಿದ್ದರು ಎನ್ನಲಾಗಿದೆ.

ಧಾರಾಕಾರವಾಗಿ ಸುರಿದ ಮಳೆಗೆ ಶುಂಠಿ ಮತ್ತು ಹೊಗೆಸೊಪ್ಪು ಬೆಳೆ ಹಾನಿಯಾಗಿತ್ತು. ಇದರಿಂದ ಲಕ್ಷಾಂತರ ರೂ. ನಷ್ಟವುಂಟಾದ ಹಿನ್ನೆಲೆಯಲ್ಲಿ ಕೆಲವು ದಿನಗಳಿಂದ ಚಿಂತೆಗೀಡಾಗಿದ್ದರು. ಇದರ ಜೊತೆಗೆ ಸಾಲಗಾರರ ಕಾಟ ಹೆಚ್ಚಾಗಿತ್ತು. ಇದರಿಂದ ಮನನೊಂದು ಬುಧವಾರ ಜಮೀನಿನ ಬಳಿ ಕ್ರಿಮಿನಾಶಕ ಔಷಧಿಯ ಮಾತ್ರೆ ಸೇವಿಸಿದ್ದಾರೆ. ಗ್ರಾಮಸ್ಥರೊಬ್ಬರು ಕುಟುಂಬದವರಿಗೆ ಮಾಹಿತಿ ನೀಡಲಾಗಿ ಅಸ್ವಸ್ಥಗೊಂಡಿದ್ದ ರೈತನನ್ನು ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕರೆತರಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಸಂಜೆ ಮೃತಪಟ್ಟಿದ್ದಾರೆ. ಈ ಸಂಬಂದ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಕೊಳ್ಳಲಾಗಿದೆ.

ಕಾಡು ಪ್ರಾಣಿಗಳ ಹಾವಳಿ ತಡೆಗೆ ಶಾಶ್ವತ ಪರಿಹಾರ ಬೇಕು

ಸರಗೂರು, ಅ.31– ತಾಲೂಕಿನ ಹಳೇ ಹೆಗ್ಗುಡಿಲು ಗ್ರಾಮಕ್ಕೆ ಶುಕ್ರವಾರ ಅರಣ್ಯ ಅಧಿಕಾರಿಗಳೊಂದಿಗೆ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ ಭೇಟಿ ನೀಡಿ, ಕಾಡಾನೆ ಹೊರ ಬರುವ ಮೊಳೆಯೂರು ವಲಯ ಅರಣ್ಯ ವ್ಯಾಪ್ತಿಯ ತಲೆಬುರುಡೆ ಹಳ್ಳದ ಜಾಗವನ್ನು ವೀಕ್ಷಿಸಿ, ಶಾಶ್ವತ ಪರಿಹಾರಕ್ಕಾಗಿ ಅರಣ್ಯ ಇಲಾಖೆಯನ್ನು ಒತ್ತಾಯಿಸಿದರು.



ಹಳೇ ಹೆಗ್ಗುಡಿಲು ಗ್ರಾಮಕ್ಕೆ ಅರಣ್ಯ ಅಧಿಕಾರಿಗಳೊಂದಿಗೆ ಚಂದನ್‌ಗೌಡ ಭೇಟಿ ನೀಡಿದ್ದರು.

ಕಾಡಂಚಿನ ಗ್ರಾಮಗಳ ರೈತರು ತಾವು ಬೆಳೆದ ಬೆಳೆಯನ್ನು ಮನೆಗೆ ತರಲು ತುಂಬಾ ಹರಸಾಹಸ ಪಡಬೇಕಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ. ಆನೆಗಳು ಕಾಡಿನಿಂದ ಹೊರ ಬರುವ ಜಾಗವೇ ತಲೆ ಬುರುಡೆ ಹಳ್ಳವಾಗಿದ್ದು, ಇದಕ್ಕೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಕಾಡುಪ್ರಾಣಿಗಳ ಹಾವಳಿ ತಡೆಗೆ ಇಲಾಖೆ ಕ್ರಮಕೈಗೊಂಡರೆ ರೈತರು ನೆಮ್ಮದಿಯಿಂದ ಬದುಕಲು ಸಾಧ್ಯವಾಗಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ನಂತರ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ, ಕಾಡುಪ್ರಾಣಿಗಳ ಹಾವಳಿ ತುಂಬಾ ಜಾಸ್ತಿಯಾಗಿದೆ. ಹದಿನೈದು ದಿನಗಳಲ್ಲಿ ಮೂವರು ರೈತರ ಪ್ರಾಣ ಹಾನಿಯಾಗಿದೆ. ಕಾಡುಪ್ರಾಣಿಗಳಿಂದ ರೈತರ ರಕ್ಷಣೆ ಇಲ್ಲದಾಗಿದೆ. ಏಕಾಏಕಿ ದಾಳಿ ನಡೆಸುತ್ತಿರುವ ಪ್ರಾಣಿಗಳು ಅನ್ನದಾತ ಜೀವವನ್ನು ಕಸಿದುಕೊಳ್ಳುತ್ತಿವೆ. ಇದಕ್ಕೆ ಬೆಲೆ ಇಲ್ಲವೆ? ಇಲಾಖೆ ಸರಕಾರದ ನಿಯಮಾನುಸಾರವಾಗಿ ಪ್ರಾಣಿಗಳ ರಕ್ಷಣೆಗೆ ಮುಂದಾಗಬೇಕು. ಶಾಶ್ವತವಾದ ಪರಿಹಾರಕ್ಕೆ ಮುಂದಾಗಬೇಕು. ಆ ಮೂಲಕ ಬೆಳೆ, ಜೀವ ರಕ್ಷಣೆಗೆ ಮುಂದಾಗಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಫ್ ಪ್ರಭಾಕರನ್, ಮೊಳೆಯೂರು, ಸರಗೂರು ವಲಯ ವ್ಯಾಪ್ತಿಯಲ್ಲಿ 5 ಕಿ.ಮೀ.ದೂರ ರೈಲ್ವೆ ಬ್ಯಾರಿಕೇಟ್ ಅಳವಡಿಕೆಗೆ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ ಮಂಜೂರಾತಿ ಆದೇಶ ಬಂದಕೂಡಲೇ ಟೆಂಡರ್ ಕರೆದು ಕಾಮಗಾರಿ ಆರಂಭಿಸಿ, ಶಾಶ್ವತ ಪರಿಹಾರಕ್ಕೆ ಕ್ರಮವಹಿಸಲಾಗುವುದು ಎಂದರು.

ದೊಡ್ಡಬೈರನ ಕುಪ್ಪೆಯಲ್ಲಿ ಅಂಗನವಾಡಿ ಹಬ್ಬ ಆಚರಣೆ

ಶಾಲಾ ಮಕ್ಕಳಲ್ಲಿ ಶಿಕ್ಷಣ ಬಲಪಡಿಸಲು ವಿಶೇಷ ಕಾರ್ಯಕ್ರಮ

ಹೆಚ್.ಡಿ.ಕೋಟೆ: ಶಾಲಾ ಪೂರ್ವ ಶಿಕ್ಷಣವನ್ನು ಬಲಪಡಿಸಲು ಅಂಗನವಾಡಿ ಹಬ್ಬವನ್ನು ಕಾಕನಕೋಟೆ ಭಾಗದಲ್ಲಿ ನಡೆಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ಬಿ.ಬಸವರಾಜ್ ತಿಳಿಸಿದರು.

ತಾಲೂಕಿನ ಗಡಿ ಭಾಗವಾದ ದೊಡ್ಡಬೈರನ ಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಿ ಬಿ ಕುಪ್ಪೆ ಗ್ರಾಮ ಮಕ್ಕಳ ಜಾಗೃತಿ ಸಂಸ್ಥೆ, ಪಂಚಾಯಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೆಚ್‌ಸಿಎಲ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಎನ್ ಬೆಳತೂರು ಬಿ ವೃತ್ತದ ಅಂಗನವಾಡಿ ಹಬ್ಬದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಗನವಾಡಿಗಳಲ್ಲಿ ಶಾಲಾ ಪೂರ್ವ ಶಿಕ್ಷಣದ ಪ್ರಾಮುಖ್ಯತೆಯನ್ನು ಗಡಿ ಪ್ರದೇಶದ ಜನರಿಗೆ ಹಾಗೂ ಗಿರಿಜನರ ಸಮುದಾಯಕ್ಕೆ ತಿಳಿಸುವ ಸಲುವಾಗಿ ಹಾಗೂ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟವನ್ನು ಬಲಪಡಿಸಲು ಈ ಕಾರ್ಯಕ್ರಮವನ್ನು ನಡೆಸಲಾಗಿದೆ ಎಂದರು.

ಪೋಷಕರು ಭಾಗವಹಿಸಿ ಮಕ್ಕಳಿಗೆ ಅಂಗನವಾಡಿಯಲ್ಲಿ ಸಿಗುತ್ತಿರುವ ಶಾಲಾ ಪೂರ್ವ ಶಿಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಮಕ್ಕಳ ಜಾಗೃತಿ ಸಂಸ್ಥೆಯು ಮೈಸೂರು ಜಿಲ್ಲೆಯಲ್ಲಿ ಶಾಲಾ ಪೂರ್ವ ಶಿಕ್ಷಣವನ್ನು, ಸೌಲಭ್ಯ ವಂಚಿತ ಪ್ರದೇಶಗಳಿಗೆ ಹಾಗೂ ಎಲ್ಲಾ ಸಮುದಾಯಕ್ಕೂ ತಲುಪಿಸುವಲ್ಲಿ ಶ್ರಮಪಡುತ್ತಿದ್ದು ಸಂಬಂಧಪಟ್ಟ ಸ್ಥಳೀಯರು ಹಾಗೂ ಪೋಷಕರು ಶಾಲಾ ಪೂರ್ವ ಶಿಕ್ಷಣದ ಮಹತ್ವ ಅರಿತು ಅಂಗನವಾಡಿಗಳಿಗೆ ಮಕ್ಕಳನ್ನು ಕಳಿಸಬೇಕು ಎಂದು ತಿಳಿಸಿದರು.



ದೊಡ್ಡಬೈರನ ಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಅಂಗನವಾಡಿ ಹಬ್ಬದ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಬಿ.ಬಸವರಾಜ್ ಉದ್ಘಾಟಿಸಿದರು.

ಮಕ್ಕಳ ಜಾಗೃತಿ ಸಂಸ್ಥೆಯ ಸಂಸ್ಥಾಪಕರಾದ ಜಾಯ್ ಶ್ರೀನಿವಾಸನ್ ಮಾತನಾಡಿ, ಪ್ರತಿ ಮಗುವಿಗೂ ತಾನು ಹುಟ್ಟಿರುವ ಜಾಗ ಬೆಳೆಯುತ್ತಿರುವ ಪ್ರದೇಶ ಅಡ್ಡಿಯಾಗದೆ, ಕಲಿಕೆಗೆ ಹೆಚ್ಚಿನ ಅವಕಾಶಗಳು ಸಿಗಬೇಕು. ಇದೇ ನಮ್ಮ ಮಕ್ಕಳ ಜಾಗೃತಿಯ ಗುರಿ, ತಾಲೂಕಿನಾದ್ಯಂತ ಶಾಲಾಪೂರ್ವ ಶಿಕ್ಷಣವನ್ನು ಬಲಪಡಿಸುವುದೇ ನಮ್ಮ ಮುಖ್ಯ ಉದ್ದೇಶ. ಇಂದಿನ ಹಬ್ಬ ಇದಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿಡಿಪಿಓ ದೀಪಾ, ಮೈಸೂರು ಗ್ರಾಮೀಣ ಸಿಡಿಪಿಓ ತಿಬ್ಬಯ್ಯ, ಅಂಗನವಾಡಿ ಮೇಲ್ವಿಚಾರಕಿ ರಚಿತಾ, ಚಿನ್ನಮ್ಮ, ಗಾಯತ್ರಿ, ಡಿ.ಬಿ.ಕುಪ್ಪೆ ಅಧ್ಯಕ್ಷ ಸುಬ್ರಹ್ಮಣ್ಯ, ಅಭಿವೃದ್ಧಿ ಅಧಿಕಾರಿ ಸ್ವಾಮಿ, ಉಪಾಧ್ಯಕ್ಷೆ ಚಿಕ್ಕಮ್ಮ, ಸದಸ್ಯರಾದ ದೇವೇಶೇಗೌಡ, ಸದಸ್ಯರಾದ ವೆಂಕಟೇಗೌಡ, ಶಿವಲಿಂಗ, ಪುರುಷೋತ್ತಮ, ಚೆಲುವೇಗೌಡ, ರಮೇಶ, ಜಯ, ಶಾರದಾ, ಜಯಮ್ಮ, ರತ್ನಮ್ಮ, ಕಮಲಮ್ಮ, ರತ್ನಮ್ಮ, ಜಯಮ್ಮ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ಡಿ.ಬಿ.ಕುಪ್ಪೆ ಭಾಗದ ರಾಜಸ್ವ ನಿರೀಕ್ಷಕರಾದ ಗೌಸು, ಮಕ್ಕಳ ಜಾಗೃತಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ರಂಗರಾಜನ್, ಸುನೇನ ಛತ್ರಪತಿ. ನಿರ್ದೇಶಕರಾದ ರೋಹಿತ್, ಯೋಜನಾಧಿಕಾರಿಗಳಾದ ಅಮೃತ, ಪರಿಶಿಷ್ಟ ಕಲ್ಯಾಣಾ ಅಭಿವೃದ್ಧಿ ಇಲಾಖೆ ನಾಗರಾಜ್, ಬುಡಕಟ್ಟು ಕೃಷಿಕರ ಸಂಘದ ಕೆಂಚಯ್ಯ, ವಿವಿಧ ಸಂಸ್ಥೆಯ ರಾಧಿಕಾ, ದೀಪಿಕಾ, ಮಾರ್ಚಲಿನ್, ಎಚ್.ದಿವ್ಯ, ನವೀನ್‌ಕುಮಾರ್, ಸಿಬ್ಬಂದಿ, ಪೋಷಕರು, ಎನ್.ಬೆಳ್ತೂರು ಬಿ. ವೃತ್ತದ ಶಿಕ್ಷಕಿಯರು, ಸಹಾಯಕಿಯರು ಭಾಗವಹಿಸಿದರು.

ಹುಣಸೂರಲ್ಲಿ ಪೊಲೀಸರಿಂದ ಏಕತಾ ಓಟ



ಹುಣಸೂರು, ಅ.31– ಉಕ್ಕಿನ ಮನುಷ್ಯ ವಲ್ಲಭಭಾಯಿ ಪಟೇಲ್ ಜನ್ಮ ದಿನದ ಅಂಗವಾಗಿ, ರಾಷ್ಟ್ರೀಯ ಏಕತಾ ಓಟವನ್ನು ಆಚರಿಸುತ್ತಿರುವುದು ಅವರ ಕಾರ್ಯ ವೈಖರಿಗೆ ಸಾಕ್ಷಿಯಾಗಿದೆ ಎಂದು ಡಿವೈಎಸ್ಪಿ ಗೋಪಾಲ ಕೃಷ್ಣ ತಿಳಿಸಿದರು.


ನಗರದ ಗ್ರಾಮಾಂತರ ಠಾಣೆಯ ಆವರಣದಿಂದ. ಪೊಲೀಸ್ ಇಲಾಖೆ ಮತ್ತು ರೋಟರಿ ಕ್ಲಬ್ ಆಯೋಜನೆಯಲ್ಲಿ ಏಕತಾ ಓಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಇದು ಅವರಿಗೆ ಗೌರವ ಸೂಚಿಸುವುದರ ಜತೆಗೆ ನಮ್ಮೆಲ್ಲರ ಆರೋಗ್ಯಕ್ಕೂ ಸಹಕಾರಿಯಾಗಿದೆ ಎಂದರು.

ನಂತರ ನಗರದ ಮುಖ್ಯ ರಸ್ತೆ, ಬಜಾರ್ ರಸ್ತೆ, ಸಿಲ್ವರ್ ಜುಬ್ಲಿ ರಸ್ತೆ, ಎಸ್.ಜೆ. ರಸ್ತೆ ಹಾಗೂ ಸಂವಿಧಾನ ವೃತ್ತದಿಂದ ಹೊರಟು ಏಕತಾ ಓಟವನ್ನು ಅಂತ್ಯ ಗೊಳಿಸಲಾಯಿತು.

ನಂತರ ನಗರ ಠಾಣೆಯ ಸಿಪಿಐ ಸಂತೋಷ್ ಕಶ್ಯಪ್, ಗ್ರಾಮಾಂತರ ಸಿಪಿಐ ಮುನಿಯಪ್ಪ ಮಾತನಾಡಿದರು. ವಲ್ಲಭಾಯಿ ಪಟೇಲ್ ಅವರ ಅವರ ನೆನಪಿಗಾಗಿ ಮೊದಲೇ ಸಿದ್ದಗೊಂಡು ಸಾರ್ವಜನಿಕರಿಗೆ ತಿಳಿಸುವ ಮುಖೇನಾ ಜಾಗೃತಿ ಮೂಡಿಸಲಾಯಿತು.

ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ರೋಟರಿ ಸದಸ್ಯರಾದ ಡಾ.ಪ್ರಸನ್ನ ಕೆ.ಪಿ. ಮಂಜುನಾಥ್, ಕಾರ್ಯದರ್ಶಿ ಶ್ಯಾಮಣ್ಣ ಧರ್ಮಾಪುರ, ಪೊಲೀಸ್ ಇಲಾಖೆಯ ಬಿ.ಕೆ.ಬಸಪ್ಪ, ವಿ.ಜೆ. ಮಂಜುನಾಥ್, ಅಶೋಕ್, ಅರುಣ್, ರಾಮಣ್ಣ, ಶಿವಕುಮಾರಿ ಇದ್ದರು.

ಶತಾಯುಷಿ ಪುಟ್ಟಸ್ವಾಮಯ್ಯ ನಿಧನ



ಪಿರಿಯಾಪಟ್ಟಣ, ಅ.31– ಪಿರಿಯಾಪಟ್ಟಣ ತಾಲೂಕು ಐಚನಹಳ್ಳಿ ಗ್ರಾಮದ ವಾಸಿ ಶತಾಯುಷಿ ಪುಟ್ಟಸ್ವಾಮಯ್ಯ(102) ಅವರು ಶುಕ್ರವಾರ ನಿಧನರಾದರು. ಊರಿನ ಯಜಮಾನರಾಗಿದ್ದ ದಿವಂಗತರು ಪತ್ನಿ ವೆಂಕಟಮ್ಮ, ಐವರು ಪುತ್ರರು, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ (ನ.1) ಮಧ್ಯಾಹ್ನ 1.30ಕ್ಕೆ ಪಿರಿಯಾಪಟ್ಟಣ ತಾಲೂಕು ಐಚನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಶಾಂತಕುಮಾರ್



ಹುಣಸೂರು: ತಾಲೂಕಿನ ಅಸ್ವಾಳು ಗ್ರಾಮದ ನಿವಾಸಿ ಲೇಟ್. ಕೆಂಪೇಗೌಡರ ಪುತ್ರ ಶಾಂತಕುಮಾರ್(58) ಶುಕ್ರವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ವಿನೋದ, ಮಕ್ಕಳಾದ ಶಾಲಿನಿ, ಶಾಮಿಲಿ, ಕುಮಾರ, ಅಳಿಯಂದಿರು, ಸೊಸೆ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ (ಶನಿವಾರ) ಬೆಳಿಗ್ಗೆ 11 ಗಂಟೆಗೆ ಅಸ್ವಾಳು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ಮೈಕ್ರೋ ಫೈನಾನ್ಸ್‌ನಿಂದ ರೈತನ ಮನೆ ಜಪ್ತಿ

ಬೀದಿಗೆ ಬಿದ್ದಿರುವ ರೈತ ಕುಟುಂಬ ರಕ್ಷಣೆಗೆ ಮನವಿ



ನಂಜನಗೂಡು: ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ಸಾಲ ಮರುಪಾವತಿ ಮಾಡಿಲ್ಲ ಎಂದು ಮೈಕ್ರೋ ಫೈನಾನ್ಸ್ ಸಂಸ್ಥೆಯವರು ರೈತನೋರ್ವನ ಮನೆಯನ್ನು ಜಪ್ತಿ ಮಾಡಿದ್ದು ಬೀದಿಗೆ ಬಿದ್ದಿರುವ ರೈತ ಮನೆ ಜಪ್ತಿ ತೆರವುಗೊಳಿಸಿಕೊಡುವಂತೆ ತಾಲೂಕು ಆಡಳಿತ ಹಾಗೂ ಪೊಲೀಸರ ಮೊರೆ ಹೋಗಿದ್ದಾರೆ. ಕಂದೇಗಾಲದ ನಿವಾಸಿ ಚಿನ್ನಸ್ವಾಮಿ 2023ರಲ್ಲಿ ಫೈನಾನ್ಸ್‌ವೊಂದರಲ್ಲಿ 2 ಲಕ್ಷದ 70 ಸಾವಿರ ರೂ.ಗಳನ್ನು ಸಾಲ ಪಡೆದುಕೊಂಡಿದ್ದು ಈಗಾಗಲೇ 19 ಕಂತುಗಳಲ್ಲಿ 1 ಲಕ್ಷ 89 ಸಾವಿರ ರೂ.ಗಳನ್ನು ಮರುಪಾವತಿ ಮಾಡಿರುವುದಾಗಿಯೂ ಉಳಿಕೆ ಹಣ ಪಾವತಿಗೆ ಕಾಲಾವಕಾಶ ಕೇಳಿಕೊಂಡರೂ ಒಪ್ಪಿಕೊಳ್ಳದ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳು ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮನೆಗೆ ಬೀಜ ಜಡಿದಿದ್ದಾರೆ.

ನಂಜನಗೂಡು: ಟಿಎಪಿಸಿಎಂಎಸ್‌ಗೆ ನಾಲ್ವರು ಅವಿರೋಧ ಆಯ್ಕೆ




ನಂಜನಗೂಡು, ಅ.31– ತೀವ್ರ ಕುತೂಹಲ ಮೂಡಿಸಿದ್ದ ನಂಜನಗೂಡು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತಕ್ಕೆ ತಗಡೂರು ಗ್ರಾ.ಪಂ ಉಪಾಧ್ಯಕ್ಷ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಎನ್ ಗುರುಮಲ್ಲೇಶ್ ಸೇರಿದಂತೆ ನಾಲ್ವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಬೆಂಬಲಿತರು 'ಎ' ತರಗತಿ ಅಭ್ಯರ್ಥಿ ಸ್ಥಾನದಲ್ಲಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಕಾಂಗ್ರೆಸ್ ಭರ್ಜರಿ ಜಯ ಸಾಧಿಸಿದೆ.

ಬಿ ತರಗತಿಯ 8 ಸ್ಥಾನಗಳಿಗೆ ನ.2ರಂದು ಚುನಾವಣೆ ಘೋಷಣೆಯಾಗಿದ್ದು, ಚುನಾವಣೆ ಮತ್ತಷ್ಟು ಕುತೂಹಲ ಮೂಡಿಸಿದೆ. ನಂಜನಗೂಡು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ 12 ನಿರ್ದೇಶಕ ಸ್ಥಾನಗಳ ಚುನಾವಣೆಗೆ ಎ ತರಗತಿಯಲ್ಲಿ ನಾಲ್ಕು ಸ್ಥಾನಗಳಿಗೆ ಸ್ಪರ್ಧಿಸಿದ್ದ ಆರು ಮಂದಿಯಲ್ಲಿ ಇಬ್ಬರು ಬಿಜೆಪಿ ಬೆಂಬಲಿಗರು ಮಾತುಕತೆಯ ನಂತರ ನಾಮಪತ್ರ ಹಿಂಪಡೆದಿದ್ದರಿಂದ ನಾಲ್ಕು ಮಂದಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಕ್ಷೇತ್ರದಿಂದ ತಗಡೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಟಿ.ಎನ್. ಗುರುಮಲ್ಲೇಶ್, ಕೆಂಪಿಸಿದ್ದನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹುಳಿಮಾವು ಎಚ್.ಜಿ.ಪರಶಿವಮೂರ್ತಿ, ದೊಡ್ಡಕವಲಂದೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಗಟ್ಟವಾಡಿ ಜಿ.ಕೆ.ಪ್ರಕಾಶ್, ಕಸುವಿನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಿಂದ ಕೆಎನ್. ಮಲ್ಲೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಸಂತ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ಲಿಂಗ ಸಮಾನತೆಗೆ ನಿರ್ಧಾರ

● ಇನ್ನುಮುಂದೆ ಪುರುಷ, ಮಹಿಳಾ ಪೊಲೀಸರಿಗೆ ಒಟ್ಟಿಗೆ ತರಬೇತಿ ● ಎಡಿಜಿಪಿ ಅಲೋಕ್‌ಕುಮಾರ್ ಪ್ರಕಟ





ಮೈಸೂರಿನ ಜ್ಯೋತಿನಗರದಲ್ಲಿರುವ ಪೊಲೀಸ್ ತರಬೇತಿ ಕೇಂದ್ರದ ಕವಾಯತ್ ಮೈದಾನದಲ್ಲಿ ಶುಕ್ರವಾರ ನಡೆದ ಪೊಲೀಸ್ ತರಬೇತಿ ಶಾಲೆಯ 9ನೇ ತಂಡದ ಮಹಿಳಾ ಪೊಲೀಸ್ ಕಾನ್ಸ್‌ಸ್ಟೇಬಲ್‌ಗಳ ನಿರ್ಗಮನ ಪಥ ಸಂಚಲನದಲ್ಲಿ ಪ್ರಶಿಕ್ಷಣಾರ್ಥಿಗಳಿಂದ ಎಡಿಜಿಪಿ ಅಲೋಕ್ ಕುಮಾರ್ ಗೌರವ ವಂದನೆ ಸ್ವೀಕರಿಸಿದರು. ಮತ್ತೊಂದು ಚಿತ್ರದಲ್ಲಿ ನಿರ್ಗಮನ ಪಥಸಂಚಲನದಲ್ಲಿ ಆಕರ್ಷಕ ಪಥಸಂಚನ ನಡೆಸುತ್ತಿರುವ ಪ್ರಶಿಕ್ಷಣಾರ್ಥಿಗಳು.

ಮೈಸೂರು, ಅ.31(ಎಂಟಿವೈ)– ಪೊಲೀಸ್ ಇಲಾಖೆಯಲ್ಲಿ ಲಿಂಗತಾರತಮ್ಯ ಇಲ್ಲದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಪುರುಷ ಮತ್ತು ಮಹಿಳಾ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ಒಟ್ಟಿಗೆ ತರಬೇತಿ ನೀಡಲು ನಿರ್ಧರಿಸಲಾಗಿದೆ ಎಂದು ಎಡಿಜಿಪಿ ಅಲೋಕ್ ಕುಮಾರ್ ಪ್ರಕಟಿಸಿದರು.

ಮೈಸೂರಿನ ಜ್ಯೋತಿನಗರದಲ್ಲಿರುವ ಪೊಲೀಸ್ ತರಬೇತಿ ಕೇಂದ್ರದ ಕವಾಯತ್ ಮೈದಾನದಲ್ಲಿ ಶುಕ್ರವಾರ ನಡೆದ ಪೊಲೀಸ್ ತರಬೇತಿ ಶಾಲೆಯ 9ನೇ ತಂಡದ ಮಹಿಳಾ ಪೊಲೀಸ್ ಕಾನ್ಸ್‌ಸ್ಟೇಬಲ್‌ಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಪುರುಷ ಮತ್ತು ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾಗಿ ತರಬೇತಿ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪುರುಷ ಹಾಗೂ ಮಹಿಳಾ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ಒಟ್ಟಿಗೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದ್ದು, ಇದು ಸದ್ಯದಲ್ಲೇ ಅನುಷ್ಠಾನಕ್ಕೆ ತರುವುದಾಗಿ ತಿಳಿಸಿದರು.

ಪೊಲೀಸ್ ಇಲಾಖೆಯಲ್ಲಿ ಲಿಂಗ ಸಮಾನತೆ ತಂದು, ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ಬಲವರ್ಧನೆಗೊಳಿಸಬೇಕೆಂಬ ಉದ್ದೇಶದಿಂದ ಸಮಾನವಾಗಿ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯಲ್ಲೂ ಯಾವುದೇ ಬೇಧ–ಭಾವ ಇರುವುದಿಲ್ಲ. ಮಹಿಳಾ ಪೊಲೀಸರು ಪ್ರಸ್ತುತ ತರಬೇತಿಯಲ್ಲಿ 9 ಎಂ.ಎಂ. ಪಿಸ್ತೂಲ್ ಬಳಕೆ ಮಾಡುವುದನ್ನು ಕಲಿತಿದ್ದಾರೆ. 10 ಕಿಲೋ ಮೀಟರ್ ದೂರವನ್ನು 70 ನಿಮಿಷದಲ್ಲಿ ಓಡುತ್ತಿದ್ದಾರೆ. ಆದ್ದರಿಂದ ಇಬ್ಬರಿಗೂ ಒಂದೇ ಮಾದರಿಯ ತರಬೇತಿ ದೊರೆಯುತ್ತಿದೆ. ಹೀಗಾಗಿ ಒಟ್ಟಿಗೆ ತರಬೇತಿ ನೀಡಲು ಇಲಾಖೆಯು ಮುಂದಾಗಿದೆ ಎಂದರು.

ಕುಟುಂಬಸ್ಥರಿಗೆ ಕೌನ್ಸಿಲಿಂಗ್: ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಕಾನ್ಸ್‌ಸ್ಟೇಬಲ್‌ಗಳು ವಿವಾಹವಾದಾಗ ಹಾಗೂ ವಿವಾಹಿತ ಮಹಿಳಾ ಸಿಬ್ಬಂದಿಗಳು ದಕ್ಷತೆ ಮತ್ತು ಸಮರ್ಥವಾಗಿ ಕಾರ್ಯನಿರ್ವಹಿಸಲು ಕುಟುಂಬಸ್ಥರ ಸಹಕಾರ ಪಡೆಯುವ ನಿಟ್ಟಿನಲ್ಲಿ ಶೀಘ್ರವೇ ಮಹಿಳಾ ಪೊಲೀಸರ ಅತ್ತೆ, ಮಾವ, ನಾದಿನಿ ಸೇರಿದಂತೆ ಗಂಡನ ಮನೆಯವರನ್ನು ಕರೆದು ಕೌನ್ಸಿಲಿಂಗ್ ನಡೆಸಲಾಗುವುದು. ಮಹಿಳಾ ಪೊಲೀಸರು ಕರ್ತವ್ಯದ ವೇಳೆ ಮನೆಗೆ ಬರುವುದು ತಡವಾಗುತ್ತದೆ, ಕೆಲವೊಮ್ಮೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆ ಕಾರಣದಿಂದ ಮನೆಯಲ್ಲಿ ಮಹಿಳಾ ಪೊಲೀಸರಿಗೆ ಬೆಂಬಲ ನೀಡಬೇಕು ಎಂದು ಕೌನ್ಸಿಲಿಂಗ್‌ನಲ್ಲಿ ಮನವರಿಕೆ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಸೇವಾ ಮನೋಭಾವ ಬೆಳೆಸಿಕೊಳ್ಳಿ: ತರಬೇತಿ ಪಡೆದುಕೊಂಡು ಕರ್ತವ್ಯಕ್ಕೆ ಹಾಜರಾಗುತ್ತಿರುವ ಪ್ರಶಿಕ್ಷಣಾರ್ಥಿಗಳು ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಸಮಾಜದಿಂದ ನೀವು ಏನನ್ನು ಬಯಸುತ್ತೀರೋ ಅದನ್ನೇ ಸಮಾಜ ಹಾಗೂ ಶ್ರೀಸಾಮಾನ್ಯರೂ ಕೂಡಾ ನಿಮ್ಮಿಂದ ಬಯಸುತ್ತಾರೆ. ಠಾಣೆಗೆ ಬರುವ ನಾಗರಿಕರೊಂದಿಗೆ ಗೌರವಯುತವಾಗಿ, ಸೌಜನ್ಯವಾಗಿ ನಡೆದುಕೊಳ್ಳಬೇಕು. ಆ ಮೂಲಕ ಅವರಿಂದ ಗೌರವ ಪಡೆದುಕೊಳ್ಳಲು ಪ್ರಯತ್ನಿಸಬೇಕು ಎಂದರು.

ನಾಗರಿಕ ಸಮಾಜದಲ್ಲಿ ಮಾನವೀಯತೆಯಿಂದ ವರ್ತಿಸುವುದನ್ನು ಪೊಲೀಸರು ರೂಢಿಸಿಕೊಳ್ಳಬೇಕು. ಮೊನ್ನೆ ಬೆಂಗಳೂರಿನಲ್ಲಿ ಪೆಟ್ರೋಲಿಯಂ ಸಂಸ್ಥೆಯೊಂದರ ಅಧಿಕಾರಿಯೊಬ್ಬರ ಮಗಳ ಸಾವಿನ ವರದಿಯನ್ನು ಧೃಡಿಕರಿಸಿ ಪ್ರಮಾಣ ಪತ್ರ ನೀಡಲು ಸಂಬಂಧಪಟ್ಟವರೆಲ್ಲ ಹಣವನ್ನು ಪಡೆದುಕೊಂಡಿದ್ದಾರೆ ಎನ್ನುವುದು ವರದಿಯಾಗಿತ್ತು. ಇಲ್ಲಿ ಗಮನಿಸಬೇಕಾಗಿರುವುದು ಸಂಬಂಧಪಟ್ಟವರು ಒಂದು ಸಾವಿನ ಪ್ರಕರಣದಲ್ಲಿ ಹೇಗೆ ಅಮಾನವೀಯವಾಗಿ ವರ್ತನೆ ಮಾಡಿದರು ಎನ್ನುವುದನ್ನು. ಈ ರೀತಿಯಾಗಿ ನಡೆದುಕೊಳ್ಳುವುದನ್ನು ಮೊದಲು ತಪ್ಪಿಸಬೇಕು. ಆದ್ದರಿಂದ ಹೊಸದಾಗಿ ಕೆಲಸಕ್ಕೆ ಹಾಜರಾಗುತ್ತಿರುವ ನೀವುಗಳು ಮಾನವೀಯತೆಯನ್ನು ರೂಢಿಸಿಕೊಳ್ಳಿ ಎಂದು ಸಲಹೆಯನ್ನು ನೀಡಿದರು.

ಪೊಲೀಸ್ ತರಬೇತಿ ಶಾಲೆಯ ವರದಿಯನ್ನು ಪ್ರಾಂಶುಪಾಲರಾದ ಎಂ.ಎಸ್.ಗೀತಾ ಅವರು ವಾಚಿಸಿದರು. ಜರ್ಮನ್ ದೇಶದ ಬವೇರಿಯಾದ ಎಡಿಜಿಪಿ ವ್ಯಾನ್ ಫೆಲ್ಡ್ ಗೀಗಲ್, ಎಎಸ್ಪಿ ರಾಲ್ಫ್ ಈರ್ನರ್, ದಕ್ಷಿಣ ವಲಯ ಡಿಐಜಿ ಡಾ.ಬಿ.ಎಂ. ಬೋರಲಿಂಗಯ್ಯ, ಕೆಪಿಎನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ, ಸೆಸ್ಕ್ ವಿಚಕ್ಷಣ ದಳದ ಎಸ್‌ಪಿ ಸವಿತಾ ಹೂಗಾರ್, ಡಿಸಿಪಿ ಆರ್.ಎನ್. ಬಿಂದುಮಣಿ, ಡಿವೈಎಸ್‌ಪಿ ಶಂಕರೇಗೌಡ ಮತ್ತಿತರರು ಹಾಜರಿದ್ದರು.

ಪ್ರಶಸ್ತಿ ಪುರಸ್ಕೃತರು



ಮೈಸೂರು,ಅ.31(ಎಂಟಿವೈ)– ತರಬೇತಿ ಸಮಯದಲ್ಲಿ ವಿವಿಧ ವಿಭಾಗದಲ್ಲಿ ಉತ್ತಮ ಪ್ರದರ್ಶನ ನಿರ್ವಹಣೆ ಮಾಡಿದ ಪ್ರಶಿಕ್ಷಣಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪುರಸ್ಕಾರ ನೀಡಲಾಯಿತು. **ಅತ್ಯುನ್ನತ ಪ್ರದರ್ಶನ ಪುರಸ್ಕಾರ ಪಡೆದ ಕೆ.ಜಿ.ಪವಿತ್ರಾ**

ತುಮಕೂರು ಜಿಲ್ಲೆಯ ಕೆ.ಜಿ.ಪವಿತ್ರಾ ಎಲ್ಲ ವಿಭಾಗದಲ್ಲಿ ಅತ್ಯುನ್ನತ ಪ್ರದರ್ಶನ ಪುರಸ್ಕಾರ ಪಡೆದುಕೊಂಡರು. ವಿಜಯನಗರ ಜಿಲ್ಲೆಯ ರೇಷ್ಮಾ ಎಂ.ರಾಥೋಡ್ (ಪ್ರ), ಬೆಂಗಳೂರು ನಗರದ ಕುಸುಮಾ ಚನ್ನಪ್ಪ ಲಮಾಣಿ (ದ್ವಿ) ಒಳಾಂಗಣ ವಿಭಾಗದ ಪ್ರಶಸ್ತಿ ಗಳಿಸಿದರು. ತುಮಕೂರು ಜಿಲ್ಲೆಯ ಕೆ.ಜಿ.ಪವಿತ್ರಾ (ಪ್ರ), ಬೆಂಗಳೂರು ನಗರದ ಕುಸುಮಾ ಚನ್ನಪ್ಪ ಲಮಾಣಿ (ದ್ವಿ) ಹೊರಾಂಗಣ ವಿಭಾಗದ ಪ್ರಶಸ್ತಿ ಗಳಿಸಿದರು. ಶಿವಮೊಗ್ಗ ಜಿಲ್ಲೆಯ ಮೇಘನ ರವಿಕುಮಾರ್ ನಾಯ್ಕ (ಪ್ರ), ಬೆಂಗಳೂರು ನಗರ ಕೇಂದ್ರ ವಿಭಾಗದ ಟಿ.ಪೂರ್ಣಿಮಾ (ದ್ವಿ) ಎಸ್‌ಎಲ್‌ಆರ್ ಫೈರಿಂಗ್ ಪ್ರಶಸ್ತಿ ಗಳಿಸಿದರು. ಬೆಂಗಳೂರು ನಗರ ಈಶಾನ್ಯ ವಿಭಾಗದ ಹೆಚ್.ಬಿ.ಧನ್ಯ (ಪ್ರ), ಮೈಸೂರುನಗರದ ಎಸ್.ಎನ್.ಚೈತ್ರಾ (ದ್ವಿ) 9 ಎಂಎಂ ಪಿಸ್ತೂಲ್ ಫೈರಿಂಗ್ ಪ್ರಶಸ್ತಿ ಪಡೆದುಕೊಂಡರು.

ಕನ್ನಡಮಯ ಪಥ ಸಂಚಲನ

ನಿರ್ಗಮನ ಪಥ ಸಂಚಲನ ಕಾರ್ಯಕ್ರಮ ಕನ್ನಡಮಯವಾಗಿತ್ತು ಈ ಹಿಂದಿನ ಪಥ ಸಂಚಲನಗಳಲ್ಲಿ ಆದೇಶಗಳು, ಸೂಚನೆಗಳನ್ನು ಹಿಂದಿ ಭಾಷೆ ಅಥವಾ ಇಂಗ್ಲಿಷ್ ಭಾಷೆಯಲ್ಲಿ ನೀಡಲಾಗುತ್ತಿತ್ತು. ಆದರೆ ಈ ಕಾರ್ಯಕ್ರಮದಲ್ಲಿ ಎಲ್ಲ ಆದೇಶ–ಸೂಚನೆಗಳು, ಗೌರವ ಸ್ವೀಕಾರದ ಪ್ರತಿಕ್ರಿಯೆಯೂ ಕನ್ನಡದಲ್ಲೇ ನಡೆಯಿತು. ಪಥ ಸಂಚಲನದ ಪೂರ್ಣ ತಂಡವನ್ನು ಮುನ್ನಡೆಸುತ್ತಿದ್ದ ಕೆ.ಜಿ.ಪವಿತ್ರಾ ಅವರು ನೀಡುತ್ತಿದ್ದ ಸೂಚನೆಗಳು ನೆರೆದಿದ್ದ ಎಲ್ಲರಿಗೂ ರೋಮಾಂಚನಗೊಳಿಸುವಂತೆ ಇತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಶಾಸ್ತ್ರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಏಕ್ ದಿವಾನೆ ಕಿ ದಿವಾನಿಯತ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಯನ್ (ತ) + ಬೈಸನ್ (ತ)	2+2 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಕೋಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಂಡ್ಯ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಬೆ.10.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ. **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.

ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.

ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ

ಟೈಮ್ ಪಾಸ್ (ಕ): ಬೆ: 11.15ಕ್ಕೆ

ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ

ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ

ಡೀಸೆಲ್ (ತ): ಮ: 1.40ಕ್ಕೆ

ಮಹಾಯೋಧ ರಾಮ (ಹಿ): ಮ: 1.50ಕ್ಕೆ

ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ

ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ

ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ

ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ

ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ

ಟೈಮ್ ಪಾಸ್ (ಕ): ಮ: 1.50ಕ್ಕೆ

ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ

ತೆಲುಸು ಕಾದಾ (ತೆ): ಮ: 4.30ಕ್ಕೆ

ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ

ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆ ನಟನದಲ್ಲಿ 'ಎರಡೆರಡ್ಲಾ ಐದು' ನಾಟಕ

ಮೈಸೂರು,ಅ.31(ಜಿಎ)–ಸಂಚಲನ ಮೈಸೂರು ತಂಡದ ವತಿಯಿಂದ ನ.2 ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದ ನಟನ ರಂಗಶಾಲೆಯಲ್ಲಿ 'ಎರಡೆರಡ್ಲಾ ಐದು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಮುಖ್ಯಸ್ಥ ದೀಪಕ್ ಮೈಸೂರು ಈ ವಿಷಯ ತಿಳಿಸಿ, ನಾಟಕದ ರಚನೆಯನ್ನು ಆಸಿಫ್ ಕ್ಷತ್ರಿಯ ಮಾಡಿದ್ದು, ರಂಗ ವಿನ್ಯಾಸ ಮತ್ತು ನಿರ್ದೇಶನವನ್ನು ಶ್ವೇತ ಶ್ರೀನಿವಾಸ್ ಮತ್ತು ಆಸಿಫ್ ಕ್ಷತ್ರಿಯ ಮಾಡಿದ್ದಾರೆ. 1975ರ ಕಾಲಘಟ್ಟದ ಆಸುಪಾಸಿನಲ್ಲಿ ನಡೆಯುವ ಕಥೆಯನ್ನು ನಾವೊಂದು ಬಗೆದರೆ ದೈವದ ವಿನ್ಯಾಸವೇ ಮತ್ತೊಂದಾಗಿರುತ್ತದೆ ಎಂಬ ಸಾರದಂತೆ ಕಥೆ ಎಣೆಯಲಾಗಿದೆ. ಒಟ್ಟಾರೆ ನಗೆಗಡಲಿನಲ್ಲಿ ತೇಲಿಸುವ ವಿಶಿಷ್ಟ ನಾಟಕವಾಗಿದೆ ಎಂದು ತಿಳಿಸಿದರು.

ಈ ವೇಳೆ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಪೋಸ್ಟರ್ ಬಿಡುಗಡೆಗೊಳಿಸಿದರು. ಅಶ್ವ್ ಕದಂಬ, ತಿಷ್ಣು ಶ್ರೀರಾಂ, ಪ್ರಿಯಾಗೌಡ, ಸುಶ್ಮಿತಾ ಉಪಸ್ಥಿತರಿದ್ದರು.

ಗರಡಿಕೇರಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ

ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ; ಮಹಾ ಅನ್ನಸಂತರ್ಪಣೆ

ಮೈಸೂರು, ಅ.31(ಎಂಕೆ)– ಮೈಸೂರಿನ ಲಷ್ಕರ್ ಮೊಹಲ್ಲಾದ ಗರಡಿಕೇರಿ ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನದ 48ನೇ ವರ್ಷದ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವದ ಅಂಗವಾಗಿ ಶುಕ್ರವಾರ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಹಾಗೂ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

ವಿವಿಧ ಸರ್ಕಾರಿ ಶಾಲೆಗಳಿಂದ ಆಗಮಿಸಿದ್ದ ಶಾಲಾ ಮಕ್ಕಳು ಸಾರ್ವಜನಿಕರಿಗೆ ಹೆಸರು ನೋಂದಣಿ ಮಾಡುವ ಮೂಲಕ ಶಾಸಕ ಕೆ.ಹರೀಶ್‌ಗೌಡ ಶಿಬಿರಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಗರಡಿಕೇರಿಯಲ್ಲಿ ಪ್ರತೀ ವರ್ಷ ಕಾರ್ತಿಕ ಮಾಸದ ಅಂಗವಾಗಿ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ದೇವಸ್ಥಾನದ ಪೂಜಾ ಕೈಂಕರ್ಯಗಳು ಸದಾ ಇದೇ ರೀತಿ ನಡೆಯುತ್ತಿರಲಿ ಎಂದು ಆಶಯ ವ್ಯಕ್ತಪಡಿಸಿದರು.

ಮಾದಪ್ಪ ಮಹಾದ್ವಾರಕ್ಕೆ ನೆರವು: ಗಾಂಧಿವೃತ್ತದ ಉಮಾ ಟಾಕೀಸ್ ರಸ್ತೆ ಮಾರ್ಗದ ಮುಂಭಾಗದಲ್ಲಿ ಶ್ರೀ ಮುದ್ದು ಮಾದಪ್ಪ ಮಹಾದ್ವಾರ ನಿರ್ಮಾಣಕ್ಕೆ ಉದ್ದೇಶಿಸಲಾಗಿದ್ದು, ಶಾಸಕರ ಅನುದಾನ ಸೇರಿದಂತೆ ದಾನಿಗಳಿಂದಲೂ 25 ಲಕ್ಷ ರೂ.ಹಣ ಸಂಗ್ರಹಿಸಿ ಮಹಾದ್ವಾರ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.



ಗರಡಿಕೇರಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಹಾಗೂ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

ನಂತರ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ದೇವಸ್ಥಾನದ ಪ್ರದಾನ ಅರ್ಚಕ ರೇಣುಕಾಸ್ವಾಮಿ ಹಾಗೂ ಮಾತೃಮಂಡಳಿ ಶನೇಶ್ವರಸ್ವಾಮಿ ದೇವಸ್ಥಾನದ ಗುಡ್ಡಪ್ಪರಾದ ರವಿಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬಳಿಕ ಜಾತ್ರಾ ಮಹೋತ್ಸವದ ಅಂಗವಾಗಿ ಮಹಾ ಅನ್ನಸಂತರ್ಪಣೆ ನಡೆಯಿತು.

ಪೂಜಾ ಕೈಂಕರ್ಯ: ಜಾತ್ರಾ ಮಹೋತ್ಸವದ 5ನೇ ದಿನ ಶ್ರೀ ಮಲೆ ಮಹದೇಶ್ವರ ಸ್ವಾಮಿಗೆ ಬೆಣ್ಣೆ ಅಲಂಕಾರ, ವಿಶೇಷ ಹೂವಿನ ಅಲಂಕಾರದ ಮೂಲಕ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನ.3ರಂದು 'ಮಹಾ ರುದ್ರಾಭಿಷೇಕ ಹಾಗೂ ಮಹಾ ಉತ್ಸವ ನಡೆಯಲಿದೆ.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡ ಬಿ.ಎಂ.ರಾಮು, ಪ್ರದಾನ ಕಾರ್ಯದರ್ಶಿ ಎಂ.ಶಿವಣ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ರಾಜಲಕ್ಷ್ಮಿ ಶಿವಣ್ಣ, ಗೋಪಿ, ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಎಂ.ಎಸ್. ರವಿಕುಮಾರ್, ಮುಖಂಡರಾದ ರಾಚಪ್ಪಾಜಿ, ರಾಜೇಂದ್ರ, ನಾಗೇಂದ್ರ, ಸುರೇಶ್ ಕುಮಾರ್ ಮತ್ತಿತರರಿದ್ದರು.

ನಾಳೆ ಶ್ರೀ ಮಲ್ಯೈ ಮಹದೇಶ್ವರ, ಆದಿ ಶಕ್ತಿ ಚಾಮುಂಡೇಶ್ವರಿ ದೇವಸ್ಥಾನದ 10ನೇ ವಾರ್ಷಿಕೋತ್ಸವ

ಮೈಸೂರು,ಅ.31(ಜಿಎ)–ಮೈಸೂರಿನ ಕೆ.ಎನ್.ಪುರ ಬಡಾವಣೆಯ ಶ್ರೀ ಮಲ್ಯೈ ಮಹದೇಶ್ವರ ಮತ್ತು ಆದಿಶಕ್ತಿ ಚಾಮುಂಡೇಶ್ವರಿ ದೇವಸ್ಥಾನದ 10ನೇ ವಾರ್ಷಿಕೋತ್ಸವ ಅಂಗವಾಗಿ ನ.2 ಮತ್ತು 3 ರಂದು ಅನ್ನಸಂತರ್ಪಣೆ, ಪ್ರತಿಭಾ ಪುರಸ್ಕಾರ ಹಾಗೂ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಸಹ ಕಾರ್ಯದರ್ಶಿ ಎಂ.ಕೆ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.2ರಂದು ಬೆಳಗ್ಗೆ 8 ಗಂಟೆಯಿಂದಲ್ಲೇ ವಿವಿಧ ಧಾರ್ಮಿಕ ಕಾರ್ಯಕ್ರಮ ಆರಂಭವಾಗಲಿವೆ. ಸಂಜೆ 6ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ದೇವಸ್ಥಾನ ನಿರ್ಮಾಣಕ್ಕೆ ಜಾಗ ನೀಡಿದ ಗಿರಿಜಾ ನಟರಾಜ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ವೇಳೆ ಪೌರ ಕಾರ್ಮಿಕರು, ಒಳ ಚರಂಡಿ ಕಾರ್ಮಿಕರನ್ನು ಸನ್ಮಾನ, ಪ್ರದೇಶದ ಸರ್ಕಾರಿ ಶಾಲೆಯ ಆಯ್ದ ಬಡ ಮಕ್ಕಳಿಗೆ ಪುಸ್ತಕ ವಿತರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಕಾಂಕ್ರಿಟ್ ರಾಜು, ಅಂಬರೀಶ್, ನವೀನ್ ಶೆಟ್ಟಿ, ಶಂಕರ್, ಪದ್ಮನಾಭ್ ಮತ್ತಿತರರು ಉಪಸ್ಥಿತರಿದ್ದರು.

ಒಂದೇ ಸೂರಿನಡಿ ಹತ್ತು ಹಲವು ಆರೋಗ್ಯ ಸಂಬಂಧಿ ಮಾಹಿತಿ

ಮೈಸೂರು, ಅ.31(ವಿವಿಹೆಚ್)– ಸಾರ್ವಜನಿಕ ಆರೋಗ್ಯ ಸೇವೆಗಳು, ತಾಯಿ ಮತ್ತು ಶಿಶುಗಳ ಆರೋಗ್ಯ ರಕ್ಷಣೆ, ಮತ್ತು ಜನಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಮಳಿಗೆ ದಸರಾದ ವಸ್ತುಪ್ರದರ್ಶನಕ್ಕೆ ಬರುವವರ ಗಮನ ಸೆಳೆಯುತ್ತಿದೆ.

ಮೈಸೂರಿನ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಾಣವಾಗಿರುವ ಮಳಿಗೆಯಲ್ಲಿ ಜನರಿಗೆ ಅಗತ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ದಿವಂಗತ ಪುನೀತ್ ರಾಜ್‌ಕುಮಾರ್ ನೆನಪಿನಾರ್ಥ ಜಾರಿಗೆ ತರಲಾಗಿರುವ ಡಾ. ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಹಾಗೂ ಸಾರ್ವಜನರಿಕರು ಉಚಿತವಾಗಿ ಪಡೆಯಬಹುದಾದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ದಿವಂಗತ ಪುನೀತ್ ರಾಜ್‌ಕುಮಾರ್ ಹೃದಯ ಹಿಡಿದಿರುವ ಅವರ ಬೃಹತ್ ಕಟೌಟ್ ಸ್ವಾಗತ ನೀಡುತ್ತದೆ. ಒಳಹೊಕ್ಕರೆ ಮಗುವಿಗೆ ತಾಯಿಯ ಎದೆಹಾಲು ಉಣಿಸುತಿರುವ ಪ್ರತಿಕೃತಿ, 'ದೃಷ್ಟಿಯ ಉಡುಗೊರೆ ಬೆಳಕಿನ ಪರಂಪರೆ' ವಾಕ್ಯದಡಿ ನೇತ್ರದಾನದ ಮಹತ್ವ ಸಾರುವ ಕಣ್ಣು, ಮೆದುಳು ಆರೋಗ್ಯ ಉಪಕ್ರಮ ಎಂದು ಮೆದುಳಿನ ಪ್ರತಿಕೃತಿ, ಗೃಹ ಯೋಜನೆ, ಹೆಣ್ಣು ಭ್ರೂಣಹತ್ಯೆ ಹತ್ಯೆ ನಿಲ್ಲಿಸಿ, ಹೆಣ್ಣು ಮಕ್ಕಳನ್ನು ಉಳಿಸಿ ಎಂದು ತಾಯಿಯೊಬ್ಬಳು ಗರ್ಭದರಿಸಿ ಬೇಡುತ್ತಿರುವ ದೃಶ್ಯಗಳು ಮನಮುಟ್ಟುವಂತಿವೆ. ಜೊತೆಗೆ ಗೃಹ ಆರೋಗ್ಯ ಯೋಜನೆ, ಆಂಬ್ಯೂಲೆನ್ಸ್ ಸೇವೆ, ತಂಬಾಕು ಸೇವನೆಯಿಂದ ಮಾನವನ ದೇಹಕ್ಕಾಗುವ ಅಪಾಯಗಳ ಕುರಿತಾದ ಪ್ರತಿಕೃತಿಗಳು ಎಲ್ಲರನ್ನು ನಿಬ್ಬೆರಗಾಗಿಸುವುದಂತೂ ನಿಜ....

ಮಾನವನ ಅಂಗಾಂಗಳ ಮಾದರಿಗಳ ಪ್ರದರ್ಶನ: ಮಹಿಳಾ ಗರ್ಭಧಾರಣೆ ಸಂದರ್ಭದಲ್ಲಿ ನಡೆಯುವ ಕ್ರಿಯೆಗಳು, ಗರ್ಭಧಾರಣೆ, ಮಗುವಿನ ಬೆಳವಣಿಗೆ ಹಂತದ ಮಾದರಿಗಳು, ಮಾನವ ದೇಹದ ಮೆದುಳು, ಹೃದಯ, ಮೂತ್ರಪಿಂಡ, ಶ್ವಾಸಕೋಶ ಮಾದರಿಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಅವುಗಳ ಜೊತೆಯಲ್ಲಿ ಆಯಾ ಅಂಗಾಂಗ ಮಾಹಿತಿಯನ್ನು ನೀಡಲಾಗಿದೆ.

ಇದನ್ನು ಹೊರತುಪಡಿಸಿ ಆರೋಗ್ಯ ಮಳಿಗೆಯಲ್ಲಿ ಏನೆಲ್ಲಾ ಮಾಹಿತಿ ನೀಡಲಾಗಿದೆ ಎಂದು ನೋಡುವುದಾದರೆ, 10 ರಿಂದ 19 ವರ್ಷ ವಯಸ್ಸಿನ ಮಕ್ಕಳ ಆರೋಗ್ಯ ದೃಷ್ಟಿಯಿಂದ ಜಾರಿಗೆ ತರಲಾಗಿರುವ 'ಸ್ನೇಹ ಕ್ಲೀನಿಕ್', 18 ವರ್ಷ ಒಳಗಿನ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹ ಮಾಡದಂತೆ 'ಶಿಕ್ಷಣ ಮೊದಲು, ಮದುವೆ ನಂತರ' ಫಲಕ, 'ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕ', 'ಸಾಪ್ತಾಹಿಕ ಕಬ್ಬಿಣ ಮತ್ತು ಪೋಲಿಕ್ ಆಮ್ಲ ಪೂರಕ (ಡಬ್ಲ್ಯೂಐಎಫ್‌ಎಸ್)', 'ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ಕಾರ್ಯಕ್ರಮ', ತಾಯಿ ಮತ್ತು ಮಗು ಆರೈಕೆಗಾಗಿ 'ಗರ್ಭಿಣಿ ತಾಯಿ ಮತ್ತು ಮಗುವಿನ ಸುರಕ್ಷತೆಗಾಗಿ ಟೋಲ್ ಫ್ರೀ ಕಾಲ್', 'ಕಾಂಗರೂ ಮಾದರಿ ಆರೈಕೆ', ಮಕ್ಕಳ ಆರೈಕೆ, ಆರೋಗ್ಯದ ಮರುಸ್ಥಾಪನೆಗಾಗಿ 'ಪೌಷ್ಟಿಕಾಂಶ ಪುನರ್ವಸತಿ ಕೇಂದ್ರಗಳು', 'ಸಾರ್ವತ್ರಿಕ ಲಸಿಕಾ ಅಭಿಯಾನ', 'ಗರ್ಭ ನಿರೋಧಕ ಸಾಧನಗಳು', 'ಪುನೀತ್ ರಾಜ್‌ಕುಮಾರ್ ಹೃದಯಜ್ಯೋತಿ ಯೋಜನೆ', 'ಕ್ಯಾನ್ಸರ್ ಆರೈಕೆ ಕೇಂದ್ರಗಳು', 'ಗೃಹ ಆರೋಗ್ಯ ಯೋಜನೆ', 'ಪ್ರಧಾನ ಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮ', 'ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ', 'ಮಾನಸಿಕ ಆರೋಗ್ಯ ಕಾರ್ಯಕ್ರಮ', 'ಶ್ರವಣ ಸಂಜೀವಿನಿ', 'ಕ್ಷಯ ಮುಕ್ತ ಕರ್ನಾಟಕ: ಕ್ಷಯರೋಗ– ಮುಕ್ತ ಗ್ರಾಮಗಳು;, 'ಆಯುಷ್ಮಾನ್ ಆರೋಗ್ಯ ಕೇಂದ್ರ', ಋತುಚಕ್ರ ಕುರಿತಾದ 'ನನ್ನ ಮೈತ್ರಿ' ಸೇರಿದಂತೆ ಆರೋಗ್ಯ ಇಲಾಖೆಯಿಂದ ತರಲಾಗಿರುವ ನೂತನ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ

ದಸರಾ ವಸ್ತು ಪ್ರದರ್ಶನ ವಿಶೇಷ



ಆರೋಗ್ಯ ಮತ್ತು ಕುಟುಂಬ ಇಲಾಖೆ ಮಳಿಗೆ


ಪುನೀತ್ ಹೃದಯ ಜ್ಯೋತಿ ಯೋಜನೆ ವಿಶೇಷ

ಡಾ.ಪುನೀತ್ ರಾಜ್ ಕುಮಾರ್ ಹೃದಯ ಜ್ಯೋತಿ ಯೋಜನೆಯು ಕರ್ನಾಟಕ ಆರೋಗ್ಯ ಇಲಾಖೆಯ ಮಹತ್ವದ ಉಪಕ್ರಮವಾಗಿದ್ದು, ಹಠಾತ್ ಹೃದಯಾಘಾತ ಮತ್ತು ಹೃದಯದ ಸಮಸ್ಯೆಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ತಕ್ಷಣದ ವೈದ್ಯಕೀಯ ಆರೈಕೆಯನ್ನು ಒದಗಿಸಲು ಪ್ರಾರಂಭಿಸಲಾಗಿದೆ. 2021ರಲ್ಲಿ ಹಠಾತ್ ಹೃದಯಾಘಾತದಿಂದ ನಿಧನರಾದ ದಿವಂಗತ ಕನ್ನಡ ನಟ ಪುನೀತ್ ರಾಜಕುಮಾರ್ ಅವರ ಗೌರವಾರ್ಥವಾಗಿ ಹೆಸರಿಸಲಾದ ಈ ಯೋಜನೆಯು, ವಿಶೇಷವಾಗಿ ಯುವ ಜನರಲ್ಲಿ ಹೆಚ್ಚುತ್ತಿರುವ ಹೃದಯಾಘಾತದ ಘಟನೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.

ಯೋಜನೆಯ ಉದ್ದೇಶವೇನು: ಈ ಯೋಜನೆಯನ್ನು ಪ್ರಾರಂಭಿಸುವ ಮುಖ್ಯ ಉದ್ದೇಶವೆಂದರೆ ಕರ್ನಾಟಕ ರಾಜ್ಯದಲ್ಲಿ ಹೃದಯಾಘಾತ ಅಥವಾ ಹೃದಯ ಸ್ತಂಭನದ ಅಪಾಯವನ್ನು ಕಡಿಮೆ ಮಾಡುವುದು. ಹೃದಯಾಘಾತದಿಂದ ನಿಧನರಾದ ಕನ್ನಡ ನಟ ಪುನೀತ್ ರಾಜ್‌ಕುಮಾರ್ ಅವರ ನಿಧನವನ್ನು ಗೌರವಿಸಲು ಕರ್ನಾಟಕ ರಾಜ್ಯ ಸರ್ಕಾರವು ಈ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿ ರೋಗಿಯು ಹೃದಯಾಘಾತಕ್ಕೆ ಸರ್ಕಾರದಿಂದ ಎಲ್ಲಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಹೃದಯಾಘಾತಕ್ಕೆ ಒಳಗಾದವರಿಗೆ ಹೃದಯದ ಆರೋಗ್ಯ ಮತ್ತು ಚಿಕಿತ್ಸೆಯನ್ನು ಸ್ವಚ್ಛ, ಸುರಕ್ಷಿತ ಮತ್ತು ಸಮಯೋಚಿತ ರೀತಿಯಲ್ಲಿ ಉತ್ತೇಜಿಸುವುದು.

> ಇಲಾಖೆಗಳ ಎಲ್ಲಾ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಈ ಮಳಿಗೆ ನಿರ್ಮಿಸಲಾಗಿದೆ. ಅಪಾರ ಸಂಖ್ಯೆಯಲ್ಲಿ ಜನರು ಬಂದು ಇದರ ಲಾಭ ಪಡೆದು ಹೋಗುತ್ತಿದ್ದಾರೆ.
> –ಡಾ. ಕುಮಾರಸ್ವಾಮಿ, ಡಿಹೆಚ್ಒ

ವೈದ್ಯಕೀಯ ಬಿಲ್‌ಗೆ ಅನುದಾನಕ್ಕೆ ಮನವಿ



ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಆರ್ಥಿಕ ಇಲಾಖೆಯ ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ ಕೃಷ್ಣ ಎನ್.ಬುಗಟ್ಯಾಗೋಳ ಅವರನ್ನು ಭೇಟಿ ಮಾಡಿ, ಶಿಕ್ಷಕರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದ ವೈದ್ಯಕೀಯ ಬಿಲ್ ಸಂಬಂಧ ಅನುದಾನ ಬಿಡುಗಡೆಗೆ ಮನವಿ ಮಾಡಿದರು. ಈ ವೇಳೆ ನಂಜನಗೂಡು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೀಪು, ಕಾರ್ಯದರ್ಶಿ ಮಹೇಶ್, ನಿರ್ದೇಶಕರಾದ ಹನುಮಂತು, ಸತೀಶ್ ಮತ್ತಿತರರಿದ್ದರು.

ವಿಶ್ವಕೋಶದಲ್ಲಿ ಸಮಗ್ರ ಮಾಹಿತಿ ಲಭ್ಯ

ವಿಕಿಪಿಡಿಯಾ ಅವಲಂಭಿತರಾಗದಂತೆ ಮೈಸೂರು ವಿವಿ ವಿಶ್ರಾಂತ ಕುಲಪತಿ(ಪ್ರಭಾರ) ಪ್ರೊ.ಉಮೇಶ್ ಸಲಹೆ

ಮೈಸೂರು, ಅ.31(ಎಸ್‌ಪಿಎನ್)– ಹೆಚ್ಚಿನ ಮಾಹಿತಿಗಾಗಿ ವಿಕಿಪಿಡಿಯಾ ವೆಬ್‌ಸೈಟ್ ಅವಲಂಭಿತರಾಗದೇ ಎನ್‌ಸೈಕ್ಲೋಪಿಡಿಯಾ (ವಿಶ್ವಕೋಶ) ವೆಬ್‌ಸೈಟ್ ಬಳಕೆ ಮಾಡುವಂತೆ ಮೈಸೂರು ವಿವಿ ವಿಶ್ರಾಂತ ಕುಲಪತಿ(ಪ್ರಭಾರ) ಪ್ರೊ.ಟಿ.ಕೆ.ಉಮೇಶ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.


2025–26ನೇ ಸಾಲಿನ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ(ಮುಲಿಸಾ)ವನ್ನು ಪ್ರೊ.ಟಿ.ಕೆ.ಉಮೇಶ್ ಉದ್ಘಾಟಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ 2025–26ನೇ ಸಾಲಿನ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ(ಮುಲಿಸಾ) ಉದ್ಘಾಟಿಸಿ ಮಾತನಾಡಿದರು.

ವಿದೇಶ ವಿವಿಯಲ್ಲಿ ಸೆಮಿನಾರ್‌ನಲ್ಲಿ ಪ್ರಬಂಧ ಮಂಡಿಸಲು ಕೆಲ ಮಾಹಿತಿ ಬೇಕಾಗಿತ್ತು. ಆಗ ನನಗೆ ತಿಳಿದಿರುವ ಎಲ್ಲಾ ಪುಸ್ತಕಗಳಲ್ಲೂ ಹುಡುಕಿದರೂ ಮಾಹಿತಿ ಲಭ್ಯವಾಗಲಿಲ್ಲ. ಕೊನೆಗೆ ವಿಕಿಪಿಡಿಯಾ ಹುಡುಕಿದೆ. ಆದರೆ, ಅದರಲ್ಲಿ ಅಪೂರ್ಣ ಮಾಹಿತಿ ಲಭ್ಯವಾಯಿತು. ತದನಂತರ ಎನ್‌ಸೈಕ್ಲೋಪಿಡಿಯಾ ಹುಡುಕಿದಾಗ ಸಂಪೂರ್ಣ ಮಾಹಿತಿ ಅದರಲ್ಲಿ ದೊರೆಯಿತು ಎಂದು ಅಭಿಪ್ರಾಯಪಟ್ಟರು.

ಜನರು ಡಿಜಿಟಲ್ ಮೇಲೆ ಅವಲಂಬಿತ ರಾಗಿದ್ದಾರೆ. ಇಂದು ಒಂದು ಪತ್ರ ಬರೆಯದಂತಹ ಸ್ಥಿತಿಯಿದೆ. ಹಾಗಾಗಿ ವಿದ್ಯಾರ್ಥಿಗಳು ಡಿಜಿಟಲ್ ಮೇಲೆ ಹೆಚ್ಚು ಅವಲಂಭಿತರಾಗದೇ ಪುಸ್ತಕಗಳ ಮೇಲೆ ಅವಲಂಭಿತರಾಗಬೇಕು. ಪುಸಕ್ತ ಭಂಡಾರದ ಹೊರತು ಯಾವುದೇ ತಂತ್ರಜ್ಞಾನದಿಂದ ಸುಲಭಕ್ಕೆ ಸಿಗುವ ಮಾಹಿತಿ ನಿರಂತರವಲ್ಲ. ಪುಸ್ತಕದ ಜ್ಞಾನ, ಸಂಶೋಧನೆ, ಗ್ರಹಿಕೆ ಹೆಚ್ಚು ನಡೆಯಬೇಕಿದೆ ಎಂದರು.

ಪುಸ್ತಕಗಳನ್ನು ಹಿಡಿದಾಗಲೇ ಜೀವನ ನಮಗೆ ಅರ್ಥವಾಗಬೇಕು. ಒಂದು ಪುಸ್ತಕದಲ್ಲಿ ಒಬ್ಬ ಮನುಷ್ಯನ ಜೀವನದ ಬದಲಾಯಿಸಿಕೊಳ್ಳವಷ್ಟು ಚಿಂತನಾ ಲಹರಿ ಇದೆ. ನಮ್ಮ ಕಾಲಘಟ್ಟದಲ್ಲಿ ಪುಸ್ತಕಗಳಿಗೆ ಅಭಾವವಿತ್ತು. ಇವತ್ತಿಗೆ ಅಂತಹ ಸಮಸ್ಯೆಯಿಲ್ಲ. ಅಪಾರ ಪುಸ್ತಕದ ಭಂಡಾರವೇ ಗ್ರಂಥಾಲಯಗಳಲ್ಲಿ ದೊರೆಯಲಿದ್ದು, ಕೈಗೆಟಕುವ ದರದಲ್ಲಿ ಪುಸ್ತಕಗಳನ್ನು ಕೊಳ್ಳುವ ಸಾಮರ್ಥ್ಯವಿದೆ. ಹಾಗಾಗಿ ಪುಸ್ತಕಗಳ ಓದಿಗೆ ವಿದ್ಯಾರ್ಥಿಗಳು ಹೆಚ್ಚಿನ ಗಮನ ನೀಡುವಂತೆ ಸಲಹೆ ನೀಡಿದರು.

ಪ್ರಸ್ತುತ ವಿದ್ಯಾರ್ಥಿಗಳಿಗೆ ಸಮಾಜ ಬದಲಾಯಿಸುವ, ಸರಿದೂಗಿಸುವ ಅವಕಾಶ ವಿದೆ. ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ತಿಳಿಸಿ, ಅದರ ಮೂಲಕ ಸಮಾಜಕ್ಕೆ ತಲುಪಿಸಬೇಕಿದೆ. ಮಾಹಿತಿ ಉತ್ತಮವಾದ ಜ್ಞಾನವಾಗಿ ರೂಪುಗೊಂಡರೆ ನಿಜವಾಗಿಯೂ ಉಪಯುಕ್ತವಾಗಲಿದೆ. ವಿದ್ಯಾರ್ಥಿಗಳು ನಮ್ಮಿಂದ ಏನು ಮಾಡಲು ಸಾಧ್ಯವಿದೆ ಎಂದು ಗ್ರೊಸಬಾರದು ಎಲ್ಲರಿಗೂ ಎಲ್ಲವೂ ಸಾಧ್ಯವಿದ್ದು, ದೇಶದ ಭವಿಷ್ಯವಾಗಲಿರುವವರು ಇವತ್ತಿನ ವಿದ್ಯಾರ್ಥಿಗಳೇ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಆಂತರಿಕ ಗುಣಮಟ್ಟ ಖಾತರಿ ಘಟಕ ಸಂಯೋಜಕ(ಆಡಳಿತ) ಡಾ.ಜೆ ಲೋಹಿತ್, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎನ್.ಎಸ್ ಹರಿನಾರಾಯಣ, ಹಿರಿಯ ಪ್ರಾಧ್ಯಾಪಕ ಪ್ರೊ.ಎಂ.ಚಂದ್ರಶೇಖರ್, ಪ್ರಾಧ್ಯಾಪಕಿ ಪ್ರೊ.ಎಚ್.ಆದಿತ್ಯ ಕುಮಾರಿ, ಮುಲಿಸಾ ಶಿಕ್ಷಕ ಸಲಹೆಗಾರರ ಡಾ.ಎಂ. ಸುನಿಲ್ ಕುಮಾರ್, ಕಾರ್ಯದರ್ಶಿ ಆರ್. ರಾಕೇಶ್ ಇದ್ದರು. ಎಸ್.ರಾಚಪ್ಪಾಜಿ ನಿರೂಪಿಸಿದರು. ಹರ್ಷಿತಾ ಮತ್ತು ತಂಡದ ಕಲಾವಿರು ಪಾರ್ಥಿಸಿದರು.

ಬಿಸಿಯೂಟ ಕಾರ್ಮಿಕರ ಅನುದಾನ ಬಿಡುಗಡೆಗೆ ಮನವಿ

ಮೈಸೂರು, ಅ.31(ಎಸ್‌ಪಿಎನ್)– ಕಳೆದ ಮೂರು ತಿಂಗಳಿಂದ ಮೈಸೂರು ಜಿಲ್ಲೆಯ ಬಿಸಿಯೂಟ ಕಾರ್ಮಿಕರಿಗೆ ಗೌರವ ಧನ ಬಿಡುಗಡೆಗೂ ಅನುದಾನ ನೀಡಿಲ್ಲ. ಕೂಡಲೇ ಸರ್ಕಾರ ಅನುದಾನ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿ ಎಐಯುಟಿಯುಸಿ ಪದಾಧಿಕಾರಿಗಳು ಜಿಪಂ ಪಿಎಂ ಪೋಷಣ್ ಶಕ್ತಿ ನಿರ್ಮಾಣ್ (ಮಧ್ಯಾಹ್ನದ ಬಿಸಿಯೂಟ ಯೋಜನೆ) ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.


ಬಿಸಿಯೂಟ ನೌಕರರ ಗೌರವಧನ ಬಿಡುಗಡೆಗೆ ಆಗ್ರಹಿಸಿ ಎಐಯುಟಿಯುಸಿ ಪದಾಧಿಕಾರಿಗಳು ಮೈಸೂರು ಜಿಪಂ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಳೆದ 2–3 ತಿಂಗಳಿಂದ ಬಿಸಿಯೂಟ ಕಾರ್ಮಿಕರ ಗೌರವ ಧನವು ಇದುವರೆಗೂ ಬಿಡುಗಡೆ ಆಗಿರುವುದಿಲ್ಲ. ಈಗಲೇ ಅತ್ಯಂತ ಕಡಿಮೆ ಗೌರವ ಧನದಲ್ಲಿ ದುಡಿಯುತ್ತಿರುವ ಈ ಕಾರ್ಮಿಕರಿಗೆ ಸತತ ಎರಡು ತಿಂಗಳ ಸಂಬಳ ಇಲ್ಲದಿರುವುದರಿಂದ ಕುಟುಂಬ ನಿರ್ವಹಣೆ ಮಾಡಲಾಗದೇ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಈ ಸಮಸ್ಯೆ ಕುರಿತು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಮಧ್ಯಾಹ್ನದ ಬಿಸಿಯೂಟ ಕಾರ್ಮಿಕರಿಗೆ ಬಾಕಿ ಗೌರವ ಧನ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೇಂದ್ರದ ಬಜೆಟ್ ಬಿಡುಗಡೆಯಾಗದ ಕಾರಣ ಗೌರವಧನ ನೀಡಲು ಸಾಧ್ಯವಾಗಿಲ್ಲ. ಈ ಕುರಿತು ಪತ್ರ ಕಳುಹಿಸಿದ್ದೇವೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಈ ಹಿನ್ನಲೆಯಲ್ಲಿ ಗೌರವ ಧನ ಬಿಡುಗಡೆಗೆ 15 ದಿನದ ಗಡುವು ನೀಡಿದ್ದು, ಅಷ್ಟರೊಳಗೆ ನೌಕರರ ವೇತನ ಬಿಡುಗಡೆಯಾಗಬೇಕು. ಇಲ್ಲವಾದರೆ, ಮುಂದಿನ ಹೋರಾಟ ಅನಿವಾರ್ಯ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಬಿಸಿಯೂಟ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಪಿ.ಎಸ್.ಸಂಧ್ಯಾ, ರಾಜ್ಯ ಉಪಾಧ್ಯಕ್ಷೆ ರಾಜೇಶ್ವರಿ, ಜಿಲ್ಲಾಧ್ಯಕ್ಷೆ ಉಮಾ, ಪದಾಧಿಕಾರಿಗಳಾದ ಸೌಮ್ಯ, ಮಹದೇವಮ್ಮ ಸೇರಿದಂತೆ ಇತರರಿದ್ದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಸಂ:ಚಾರಾನಅಪ್ರಾ/ನಾ.ಸೌ.ನಿ/ಹಂಚಿಕೆ–08/2025–26 ದಿನಾಂಕ:29–10–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ರ ಅನುಗುಣವಾಗಿ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಾಮರಾಜನಗರ ಹಾಗೂ ವಿವಿಧ ಗ್ರಾಮಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆಗೊಂಡ ಬಡಾವಣೆಯಲ್ಲಿರುವ 16 ನಾಗರೀಕ ಸೌಲಭ್ಯ ನಿವೇಶನಗಳು ಹಂಚಿಕೆ ಮಾಡಲು ಕ್ರಮವಹಿಸಲಾಗಿದ್ದು, ಸರ್ಕಾರಿ ಕಚೇರಿ / ನೋಂದಾಯಿತ ಸಂಘ ಸಂಸ್ಥೆಗಳು ದಿನಾಂಕ: 06–12–2025 ರೊಳಗೆ ಈ ಕಚೇರಿಯಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಮೊಹಮ್ಮದ್ ಅಸ್ಗರ್
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಹೆಚ್.ವಿ.ಸೀಮಾ
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:453:2025–26

PUBLIC NOTICE

The Public at large are hereby notified that my client is intending to purchase the property. which is more fully described in the schedule below, from **Smt. L. Kusuma,** D/o. Late Lingaiah and W/o. Sri Somashekar. If any persons has/have any kind of right, title, interest or claim over the schedule property or if they have any objections to the sale proposed to be made by her, they may lodge their claim /objections with the undersigned within SEVEN days from the date of this notification with supporting documents by Registered Post Acknowledgement Due failing which, my client will take it for granted that there are no claims / charges / objections whatsoever from whomsoever and proceed to purchase it. Any claims/objections received after stipulated period of SEVEN days will be treated as no claim and the same will be ignored.

SCHEDULE PROPERTY

ALL THAT PIECE AND PARCEL OF Property bearing Door No.961/1, CH-36 situated at Sheshadri Iyer Road, Lakshmipuram, Chamaraja Mohalla, Mysuru measuring 2572 Meters to the East, 21.74 Meters to the West, 20.27 Meters to the North and 23.99 Meters to the South, totally measuring 521.11 Square Meters (i.e., East to West: (20.27 + 23.99)/2 Meters and North to South: (25.72 + 21.74)/2 Meters and bounded on the East: 9 Meters Wide Road, West: Remaining portion of Property bearing No.961/1 CH-36, PID No.4-2-516-163, North : House bearing No.961 and South: 9 Meters Wide Road.

Sd/- A.V. Jaya Rama Rao,
Advocate
No. 1230/A, CH-36/A, 2nd Cross,
Krishnamurthypuram, Chamaraja Mohalla,
Mysuru-04. **Ph : 0821 7960559**

Date : 29.10.2025, Place : Mysuru

ಕೇಂದ್ರ ಕಾರಾಗೃಹ, ಮೈಸೂರು

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಅಶೋಕ ರಸ್ತೆ,
ಫೌಂಟೇನ್ ಸರ್ಕಲ್ ಹತ್ತಿರ, ಮೈಸೂರು–570007

ಇ–ಟೆಂಡರ್ ನೋಟೀಸ್

2025–26ನೇ ಸಾಲಿಗೆ ಮೈಸೂರು ಕೇಂದ್ರ ಕಾರಾಗೃಹ ಹಾಗೂ ಅಧೀನ ಕಾರಾಗೃಹಗಳಿಗೆ ಅಗತ್ಯವಿರುವ ತರಕಾರಿ/ಆಹಾರ ಪದಾರ್ಥಗಳನ್ನು ಖರೀದಿಸಲು **ದಿನಾಂಕ:28.10.2025**ರಂದು ಕರೆ 02ರ ಮೂಲಕ ಇ–ದರಖಾಸ್ತು ಕರೆಯಲಾಗಿದೆ.

ಟೆಂಡರ್ ಇಂಡೆಂಟ್ ಸಂಖ್ಯೆ : **PCSD/2025-26/IND0244/CALL-2**

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : **06.11.2025**

ದಿನಾಂಕ ಹೆಚ್ಚಿನ ವಿವರಗಳಿಗಾಗಿ **http://kppp.karnataka.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಿ.

ಸಹಿ/– ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಮೈಸೂರು

DIPR/DDMYS/1145/KSMCA/623/2025-26

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

GSSS
GITA BHARATI SCHOOL *of* EXCELLENCE
BANTWAL MADHAVA SHENOY HIGH SCHOOL
BADRIPRASADJI PRE-UNIVERSITY COLLEGE
Siddarthanagar, Mysuru - 570 011.

REQUIRED

ENGLISH MEDIUM INSTITUTION	Post	Qualification
• GITA BHARATI SCHOOL *of* EXCELLENCE • GSSS BANTWAL MADHAVA SHENOY HIGH SCHOOL	Asst. Teachers for ◆ Nursery ◆ Sanskrit ◆ Kannada ◆ English ◆ Hindi ◆ Mathematics ◆ Science ◆ Social Science	◆ NTT, PUC.D.Ed, Montessori trained ◆ MA in Sanskrit / Vidwath Uttama ◆ B.A B.Ed / B.Sc B.Ed ◆ M.A B.Ed / M.Sc B.Ed Even freshers can apply
	Atal Tinkering Lab Instructor	◆ BE / Diploma in Electronics / Comp. Science
• BADRIPRASADJI PRE-UNIVERSITY COLLEGE	Lectures in ◆ Sanskrit ◆ Business Studies	◆ M.A / M.Com with B.Ed with atleast 5 years of experience

Mandatory skills:
a) 4 C Skills are expected (Communication, Collaboration, Creativity and Critical)
b) Ability to adapt to the changing circumstances and student needs.
c) Ability to effectively communicate with students, parents and colleagues.
d) Skill in creating, engaging, lesson plans and delivering them effectively.
e) Ability to manage classroom behaviour and create a positive learning environment.
f) Strong knowledge and understanding of the subject.
g) Familiarity with educational technology and ability to integrate it into teaching practices.
h) Commitment to ongoing professional development and staying up to date with best practices.

Application with recent passport size photo must be sent by post / courier to The Secretary, GSSS(R), Siddarthanagar, Mysuru - 570 011 on or before 10-11-2025

Dr. M. Jagannatha Shenoi
President

Smt. Anupama B. Pandit
Secretary

OFFICE OF THE REGISTRAR EVALUATION, CHAMARAJANAGARA UNIVERSITY CHAMARAJANAGARA

TENDER DOCUMENT

SECTION-1

SHORT TERM E-PROCUREMENT TENDER NOTIFICATION FOR PRINTING AND SUPPLYING OF ANSWER BOOKLETS TO EXAMINATION SECTION, CHAMARAJANAGARA UNIVERSITY, SUVARNA GANGOTHRI CHAMARAJANAGARA.

The Registrar Evaluation, Chamarajanagara University Chamarajanagara, hereby tenders are invited in two cover system from the reputed printers by the Registrar (Evaluation), Chamarajanagara University Chamarajanagara, for the supply of printed and stitched 32 pages' answer to be held in the year of scripts for conducting examinations 2025-26 as per specification mentioned below in accordance with the circular of Government of Karnataka circular No. AE.195/Expenditure 12/11 dated 30-03-2011 of (2) (1) sub clause, Tender validity for one year.

1. Tender Reference No. And Date	CUC/EX/01/2025-26, Date: 24-10-2025
2. Published Date	30-10-2025
3. Last Date for Queries	03-11-2025
4. Pre-Bid Meeting Date	------------ Office of the Registrar Evaluation, CHAMARAJANAGARA UNIVERSITY, SUVARNA GANGOTHRI CHAMARAJANAGARA.
5. Last date & time for submission of Tender	12-11-2025
6. Date & time of opening of Technical bid	13-11-2025
7. Date & time of opening of Financial Bid (After the completion of evaluation of Technical Bid)	14-11-2025 After completion of technical bid evaluation
8. EMD Amount	20,000=00
9. Name for opening of tenders & address for communication	Office of the Registrar Evaluation, Chamarajanagara University Chamarajanagara, Mobile No: 9449783475

Interested bidders can download the short term tender document from the website: http://kppp.karnataka.gov.in

ಸಂ:ವಾಸಾಸಂಇ:ಚಾನಗರ:451:2025–26

Sd/- Registrar (Evaluation)
Chamarajanagara University
Chamarajanagar